Department ಗೂ ಬರಲಿಲ್ಲ, ಕ್ಯಾಬಿನೆಟ್‌ಗೂ ಬರಲಿಲ್ಲ. ಅದರ ಬಗ್ಗೆ ಮಾಹಿತಿ ನಿಮಗೂ ಗೊತ್ತಿದೆ. ಇದರ ಬಗ್ಗೆ ತಾವು ಹೇಳಲಿಲ್ಲ. ಮತ್ತೆ re-vitalisation of sugar industries committee ಏನು ಬಂದಿತ್ತೊ, ಅದಕ್ಕೆ official ಆಗಿ ಇವರು ಹೇಗೆ ಹೇಳಿದರು. ಮೊಲಾಸಿಸ್‌ನಲ್ಲಿ 300% less 4,500 ರೂಪಾಯಿಗಳು ಇದ್ದರೆ, 1,200 ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಇದರ ಬಗ್ಗೆ ನೀವು ಉನ್ನತ ಮಟ್ಟದ ತನಿಖೆ ಮಾಡಿಸುತ್ತೀರಾ? ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಈಗ Spare parts purchase ನಲ್ಲಿ ಮಾಡಲೇ ಇಲ್ಲ ಬಿಡಿ...

ಶ್ರೀ ಆರ್.ವಿ. ದೇಶಪಾಂಡೆ : ಅದು ಒಂದು ವರ್ಷದ ಹಿಂದೆ, ತಾವು ಹೇಳಿದಿರಿ, ಆ re-vitalisation committee ಬಂದಾಗ, Director of Sugar ಅವರು, sugar ಕಾರ್ಖಾನೆಗಳಿಂದ ಹಣ collect ಮಾಡಿ ಆಗ ಮಹಾರಾಜ ಸೂಟ್ ರೂಂಗೆ ಕೊಟ್ಟಿದ್ದರು. ಅದರ ನಂತರ ನೇರವಾಗಿ NCDC ಗೆ proposal ಕೊಟ್ಟು, ಅದರಲ್ಲಿ ಹಣದ ದುರುಪಯೋಗ ಆಗಿದೆ, ಮುಂತಾದ ಹಲವಾರು ವಿಚಾರಗಳನ್ನು ಹೇಳಿದಿರಿ. ನಾನು ಒಬ್ಬ senior ಅಧಿಕಾರಿ ಕಡೆಯಿಂದ, ತಕ್ಷಣ ನಾಳೆಯೇ ಇದರ ಬಗ್ಗೆ order ಮಾಡಿ, ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ. ಆ ತನಿಖೆಯಲ್ಲಿ ಏನು ಬರುತ್ತದೋ,ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ದೊಡ್ಡವರಿರಲಿ, ಸಣ್ಣವರಿರಲಿ, ಹಿರಿಯ ಅಧಿಕಾರಿಯಾಗಿರಲಿ ಅಥವಾ ಮತ್ತೊಬ್ಬರು ಇರಲಿ, ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಿಮಗೆ ನಾನು ಭರವಸೆಯನ್ನು ಕೊಡುತ್ತಿದ್ದೇನೆ.

(ಆ) ವಿಷಯ: ಆಂಧ್ರ ಪ್ರದೇಶದವರು ಕಾನೂನು ಬಾಹಿರವಾಗಿ ಕೈಗೊಂಡಿರುವ ನೀರಾವರಿ ಸ್ಕೀಂಗಳ ಬಗ್ಗೆ

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ತಾವು ಕೊನೆಗೆ ಈಗ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು. ತಾವೂ ಕೂಡ ಉಪಾಧ್ಯಕ್ಷರಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೀರಿ. ನಾವು ಸಹಕಾರ ಹೇಗೆ ಕೊಡುತ್ತೇವೆಯೋ ಹಾಗೆಯೇ ಸದನ ನಡೆಯುತ್ತದೆ. ಆದುದರಿಂದ ನಾನು ಮಧ್ಯದಲ್ಲಿ ಎದ್ದುನಿಂತ ಉದ್ದೇಶ ಸಾಧ್ಯವಾದರೆ ಸಭಾನಾಯಕರು ಒಪ್ಪಿದರೆ, ಈ ಆಂಧ್ರದವರು ಯಾವ ರೀತಿ ನಮ್ಮನ್ನು ದುರುಪಯೋಗ ಮಾಡಿಕೊಂಡು ಕಾನೂನು ಬಾಹಿರವಾಗಿ ಪ್ರಾಜೆಕ್ಟ್‌ಗಳನ್ನು ಕೃಷ್ಣಾ ಬೇಸಿನ್‌ನಲ್ಲಿ ಅವರು

ಮುಂದುವರಿಸುತ್ತಿದ್ದಾರೆ ಈ ಬಗ್ಗೆ ಸುದೀರ್ಘವಾದ ಚರ್ಚೆ ಮಾಡಿ ಅದಕ್ಕೆ ಒಂದು ಪರಿಹಾರ ಕಂಡುಹಿಡಿಯಬೇಕು ಎನ್ನುವ ಸದುದ್ದೇಶದಿಂದ ಸಾಧ್ಯವಾದರೆ ಸಭಾನಾಯಕರು ಸಮಾಲೋಚನೆಯನ್ನು ಮಾಡಿ ನಾಳೆಗೆ ಒಂದು ದಿನದ ಮಟ್ಟಿಗೆ ಸದನವನ್ನು ಮುಂದುವರಿಸಿದರೆ ಚರ್ಚೆಗೆ ಅನುಕೂಲವಾಗ ಬಹುದೇನೋ ಎನ್ನುವ ದೃಷ್ಟಿಯಿಂದ ನಾನು ಮಧ್ಯೆ ಎದ್ದುನಿಂತೆ. ತಮಗೆ ಗೊತ್ತಿರುವ ಹಾಗೆ ಅಧ್ಯಕ್ಷರ ಕೊಠಡಿಯಲ್ಲಿ ಈ ಗಂಭೀರವಾದ ವಿಷಯದ ಬಗ್ಗೆ ಕಾರ್ಯಕಲಾಪ ಸಲಹಾ ಸಮಿತಿ ಸಭೆ ಸೇರಿ ಚರ್ಚೆ ಮಾಡಿ, ಬೆಳಿಗ್ಗೆ ಕೆಲವು ಬಿಲ್ಸ್ ಮತ್ತು ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡಿದ ನಂತರ ಮಧ್ಯಾಹ್ನ ಊಟದ ನಂತರ ಇದು ಚರ್ಚೆಯಾಗಬೇಕು ಎಂದು ತೀರ್ಮಾನವಾಗಿತ್ತು. ಆದರೆ ಯಾವುದೋ ಕಾರಣಕ್ಕೆ ವಿಳಂಬವಾಗಿದೆ. ಅದಕ್ಕೆ ನೀವಾಗಲಿ ಅಥವಾ ಬೇರೆ ಯಾರೋ ಜವಾಬ್ದಾರರು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಹೇಗೋ ಏನೋ ನಮ್ಮ ರಾಜ್ಯದ ರೈತರ ಪ್ರಶ್ನೆ ಬಂದಾಗ ಅದಕ್ಕೆ ಆದ್ಯತೆ ಒಂದಲ್ಲ ಒಂದು ಕಾರಣದಿಂದ ಕೊನೆಯದಾಗಿ ಸಿಗುತ್ತಿದೆಯೇನೋ ಎಂದು ಬಹಳ ದು:ಖವಾಗುತ್ತಿರುವ ಸಂಗತಿಯಾಗಿದೆ. ನಾನು ಹೆಚ್ಚು ಮಾತನಾಡುವುದಿಲ್ಲ. ಸರ್ಕಾರ ಹೇಗೆ ನಡೆದುಕೊಳ್ಳುತ್ತದೆ ಎನ್ನುವುದರ ಮೇಲೆ ಇದು ಡಿಪೆಂಡ್ ಆಗಿದೆಯಷ್ಟೆ. ವಿರೋಧ ಪಕ್ಷದವರಾಗಿ ನನ್ನ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಏನಿದೆಯೋ ಅದನ್ನು ನಾನು ಮಾಡುತ್ತೇನೆ. ಉಳಿದಂಥ ದೊಡ್ಡ ಜವಾಬ್ದಾರಿ ಆಡಳಿತ ಪಕ್ಷಕ್ಕೆ ಏನಿದೆಯೋ ಅದರ ಬಗ್ಗೆ ಅವರು ಏನು ಬೇಕೋ ಮಾಡಲಿ. ಹೇಗೂ ನಿನ್ನೆ ಚರ್ಚೆಯಾದಂಥ ಸಂದರ್ಭದಲ್ಲಿ ಸರ್ವ ಪಕ್ಷಗಳ ನಿಯೋಗ ಹೋಗಿ ಪ್ರಧಾನಿಯವರನ್ನು ಭೇಟಿ ಮಾಡೋಣ ಎನ್ನುವ ಸಲಹೆಯನ್ನು ವಾಟಾಳ್ ನಾಗರಾಜ್ ಕೊಟ್ಟಾಗ ಮುಖ್ಯಮಂತ್ರಿಗಳು ಅದನ್ನು ಸ್ವಾಗತ ಮಾಡಿ ಒಪ್ಪಿಕೊಂಡರು. ನಾವು ಒಂದು ನಿರ್ಣಯವನ್ನು ಮಂಡನೆ ಮಾಡೋಣ. ಸರ್ಕಾರದ ಕೈಯನ್ನು ಬಲಪಡಿಸೋಣ, ಪ್ರಧಾನಿಯವರ ಹತ್ತಿರ ಹೋದಾಗ ಈ ರಾಜ್ಯದ ಐದೂವರೆ ಕೋಟಿ ಜನಗಳ ಜನಪ್ರತಿನಿಧಿಯಾಗಿ ಈ ಸದನದಲ್ಲಿ ಮಾಡಿರುವಂಥ ನಿರ್ಣಯದ ಮಹತ್ವ ಅವರಿಗೆ ತಿಳಿದುಬಂದಾಗ ಆಂಧ್ರಪ್ರದೇಶದ ಯಾವುದೇ ಮುಲಾಜಿಗೆ ಅವರು ಸಿಗದೇ ನಿಷ್ಪಕ್ಷಪಾತವಾಗಿ ಬಚಾವತ್ ಆಯೋಗದ ತೀರ್ಪಿನ ಒಂದು ಚೌಕಟ್ಟಿನೊಳಗೆ ಅವರಿಗೆ ಒಂದು ರೀತಿಯ ಒತ್ತಡವನ್ನು ತರುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂಥ ಒಂದು ಸದುದ್ದೇಶದಿಂದ ನಿನ್ನೆಯ ದಿವಸ ನಾನು ಈಗಾಗಲೇ ಈ ವಿಷಯವನ್ನು ಪ್ರಸ್ತಾಪ

ಮಾಡಿದ್ದೆ. ಇವೊತ್ತು ಇಡೀ ನಮ್ಮ ದೇಶದಲ್ಲಿ ಯಾವುದೇ ರಾಜ್ಯಕ್ಕೆ, ಯಾವುದೇ ರೀತಿಯ ಅನ್ಯಾಯವಾದರೂ ಕೂಡ ಆ ರಾಜ್ಯದ ರಕ್ಷಣೆಗೆ ಬರಬೇಕಾದದ್ದು ಕೇಂದ್ರ ಸರ್ಕಾರದ ಆದ್ಯಕರ್ತವ್ಯ. ಇಲ್ಲಿ ಪಕ್ಷ, ಮತ್ತೊಂದು ಮಗದೊಂದು ಎನ್ನುವುದು ಬರುವುದಿಲ್ಲ. ಇವೊತ್ತು ಬಹಳ ಸ್ಪಷ್ಟವಾಗಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ 'ಎ' ಸ್ಕೀಂನಲ್ಲಿ ನಮಗೆ ಸಿಗಬೇಕಾದಂಥ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಅನುವು ಮಾಡಿಕೊಡಬೇಕಾದಂಥದ್ದು ಕೇಂದ್ರ ಸರ್ಕಾರದ ಜವಾಬ್ದಾರಿ. ಇವೊತ್ತು ಆಂಧ್ರಪ್ರದೇಶಕ್ಕೆ ಮುಲಾಜಿಲ್ಲದೇ ಕೇಂದ್ರ ಸರ್ಕಾರ ಆದೇಶವನ್ನು ನೀಡಬೇಕಾಗುತ್ತದೆ. ಈ ಕಾನೂನುಬಾಹಿರವಾಗಿ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಹಿಂದೆ ನೀವು ಮಾಡಿ ಯಶಸ್ವಿಯಾಗಿ ಮತ್ತೆ ಅದನ್ನೇ ಮುಂದುವರಿಸುವುದಕ್ಕೆ ಏನು ಹೊರಟ್ಟಿದ್ದೀರಿ ಇದು ಕೂಡದು, ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎನ್ನುವ ಮಾತನ್ನು ಕೇಂದ್ರ ಸರ್ಕಾರ ಆಂಧ್ರಕ್ಕೆ ಹೇಳಬೇಕಾಗಿತ್ತು. ಇದೇ ರೀತಿ ಗೋದಾವರಿ ತಿರುವು ಯೋಜನೆಯಿಂದ ಕರ್ನಾಟಕಕ್ಕೆ ಸಿಗಬೇಕಾಗಿರುವಂಥ ಸುಮಾರು 68 ಟಿ.ಎಂ.ಸಿ. ನೀರು ನಮಗೆ ಸಿಗಲೇಬೇಕು. ಅದು ನಮ್ಮ ನ್ಯಾಯಬದ್ಧವಾದಂಥ ಹಕ್ಕು ಏನಿದೆಯೋ ಅದಕ್ಕೆ ಯಾವುದೇ ರೀತಿ ಅಡ್ಡಿ ಆಗದ ರೀತಿಯಲ್ಲಿ ಕೇಂದ್ರ ಸರ್ಕಾರ ನಮ್ಮ ರಕ್ಷಣೆಗೆ ಬರಬೇಕು ಎನ್ನುವಂಥದ್ದು ನನ್ನ ಹಾಗೂ ಈ ಸದನದ ಎಲ್ಲಾ ಸದಸ್ಯರ ಉದ್ದೇಶ. ನಿನ್ನೆ ಮಾನ್ಯ ಸಚಿವರು ಉತ್ತರ ಕೊಡುವಾಗ ನಾವು ನಾಲ್ಕಾರು ಪತ್ರಗಳನ್ನು ಬರೆದಿದ್ದೇವೆ ಎಂದು ಹೇಳಿದರು. ದಿನಾಂಕ 24.11.2004, 30.12.2004, 01.02.2005ರಂದು ಪತ್ರವನ್ನು ಬರೆದಿದ್ದೇವೆ. ದಿನಾಂಕ 07.03.2005 ಹಾಗೂ 14.03.2005ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತರಿಸುತ್ತಾ ಕೃಷ್ಣಾ ಕೊಳ್ಳದ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ನಡೆಸುವುದಾಗಿ ತಿಳಿಸಿದ್ದಾರೆ. ಅಂದರೆ ನಾವು ಪತ್ರವನ್ನು ಬರೆದ ಮೂರು ತಿಂಗಳ ನಂತರ ಹೇಳಿದ್ದಾರೆ. ಮೊದಲನೆಯ ಪತ್ರವನ್ನು ದಿನಾಂಕ 24–11–2004 ರಲ್ಲಿಯೇ ಬರೆಯಲಾಗಿದೆ. ಇದಾದ ಮೂರು ತಿಂಗಳ ನಂತರ ಅವರು ಹೇಳಿರುವುದಾದರೂ ಏನೆಂದರೆ ಈ ಮೂರು ರಾಜ್ಯಗಳ ಸಂಬಂಧಪಟ್ಟ ಮುಖ್ಯಮಂತ್ರಿಗಳ ಸಭೆಯನ್ನು ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಷ್ಟು ಹೊತ್ತಿಗೆ ಎಲ್ಲಾವೂ ಮುಗಿದೇ ಹೋಗಿರುತ್ತದೆ, ಈಗಾಗಲೇ ಮೂರು ತಿಂಗಳು ಕಳೆದುಹೋಗಿದೆ. ನಾನು ಇವೊತ್ತು ಸರ್ಕಾರಕ್ಕೆ ಕೇಳುವುದೇನೆಂದರೆ ಈಗಾಗಲೇ ಆಂಧ್ರಪ್ರದೇಶ ಸರ್ಕಾರ ಸುಮಾರು

4480 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 21 ಯೋಜನೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ, ಅದಕ್ಕೆ ಟೆಂಡರ್ ಕರೆದು ಎಲ್ಲವನ್ನೂ ಫೈನಲೈಸ್ ಮಾಡಿದ್ದಾರೆಯೇ ಆ ಬಗ್ಗೆ ನಿಮಗೆ ಮಾಹಿತಿ ಇರಲಿಲ್ಲವೆ? ಮಾಹಿತಿ ಇದ್ದಿದ್ದರೆ ಅವರು ಹೆಜ್ಜೆ ಇಡುವುದಕ್ಕೆ ಮುಂಚೆಯೇ ಅದನ್ನು ತಡೆಯುವುದಕ್ಕೆ ನೀವೇನು ಪ್ರಯತ್ನ ಮಾಡಿದಿರಿ? ಇದು ಒಂದು ವಿಚಾರ. ಇನ್ನೊಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ. ಚಂದ್ರಬಾಬುನಾಯ್ಡುರವರೇ ಸುಪ್ರೀಂಕೋರ್ಟಿನ ಮುಂದೆ ಹೋದರು. ಏನು ಆಂಧ್ರಪ್ರದೇಶ ಸರ್ಕಾರ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ತರಾತುರಿ ಮಾಡಿ 35-40 ಸಾವಿರ ಕೋಟಿಯನ್ನು ಅದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಏನು ಹೋದರೋ ಆ ಸಮಯದಲ್ಲಿ ಚಂದ್ರಬಾಬುನಾಯ್ಡುರವರು ಸುಪ್ರೀಂಕೋರ್ಟಿಗೆ ಹೋದರು. ಆ ಸಮಯದಲ್ಲಿ ಈ ಯೋಜನೆಯನ್ನು ಅವರು ಸಿದ್ಧತೆ ಮಾಡುತ್ತಿದ್ದಾರೆ ಎನ್ನುವಂಥದ್ದು ನಿಮಗೆ ಆಮೇಲಾದರೂ ಗೊತ್ತಾಗಲಿಲ್ಲವೆ? ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಚಂದ್ರಬಾಬುನಾಯ್ಡುರವರ ರಿಟ್‌ನ್ನು ಸುಪ್ರೀಂಕೋರ್ಟ್ ವಜಾಮಾಡಿತು. ಅದು ಬೇರೆ ವಿಷಯ. ಅಂದರೆ ಈ ಪ್ರೋಸೆಸ್ ಪ್ರಾರಂಭವಾಗಿದ್ದು, ಇಡೀ ಜಗತ್ತಿಗೆ ಗೊತ್ತಿದ್ದರೂ ಕೂಡ ನಮ್ಮ ರಾಜ್ಯ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿತು. ಇದರ ಪರಿಣಾಮವೇ ಇಂದು ಈ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ ಇವೊತ್ತು ನಿರ್ಣಯ ಏನಾಗಬೇಕು ಎಂದು ನಾವು ಕೇಳುತ್ತಿದ್ದೇವೆಂದರೆ, ಬಚಾವತ್ ಆಯೋಗದ ತೀರ್ಪಿನ ಹೊರಗಿರುವ ಆಂಧ್ರಪ್ರದೇಶ ಕೈಗೊಳ್ಳಲು ಹೊರಟಿರುವಂಥ ಎಲ್ಲಾ ಅನಧಿಕೃತ ನೀರಾವರಿ ಯೋಜನೆಗಳನ್ನು ಕೇಂದ್ರ ಸರ್ಕಾರ ತಕ್ಷಣ ನಿಲ್ಲಿಸಬೇಕು ಎನ್ನುವಂಥ ಅದೇಶವನ್ನು ಕೇಂದ್ರ ಸರ್ಕಾರ ಆಂಧ್ರಪ್ರದೇಶಕ್ಕೆ ನೀಡಬೇಕು. ಎನ್ನುವುದನ್ನೇ ನಾವು ಕೇಳುವುದು. ತಮಗೆ ಗೊತ್ತಿದೆ, ಈ ಹಿಂದೆ ಎನ್‌ಡಿಎ ಮೈತ್ರಿಕೂಟದ ಸರ್ಕಾರಕ್ಕೆ ಚಂದ್ರಬಾಬುನಾಯ್ಡು ಬೆಂಬಲ ಕೊಡುತ್ತಿದ್ದಂತಹ ಕಾಲದಲ್ಲಿ ಯಾವುದೇ ಮುಲಾಜು ಇಲ್ಲದೆ ಚಂದ್ರಬಾಬು ನಾಯ್ಡು ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಒಂದು ನಿರ್ಣಯವನ್ನು ಮಂಡನೆ ಮಾಡಿದರು. ಆಲಮಟ್ಟಿ ಅಣೆಕಟ್ಟಿನಲ್ಲಿ ಫರ್ದರ್ ಕನ್‌ಸ್ಟ್ರಕ್ಷನ್ ಮತ್ತು ಎಲ್ಲಾ ಜಲಾನಯನ ಪ್ರದೇಶದ ನೀರಾವರಿ ಯೋಜನೆಯನ್ನು ತಕ್ಷಣ ನಿಲ್ಲಿಸುವಂತೆ ಸರ್ವಾನುಮತದ ನಿರ್ಣಯವನ್ನು ಅಂದು ಆಂಧ್ರಪ್ರದೇಶ ಮಾಡಿತು. ನಾವೇಕೆ ಹಿಂದೆಮುಂದೆ ನೋಡುತ್ತಿದ್ದೇವೆ? ಸನ್ಮಾನ್ಯ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳಾಗಿದ್ದಂತಹ

ಕಾಲದಲ್ಲಿ ದಿ:19.3.97 ರಲ್ಲಿ ಜ್ಯೋತಿಬಸು ಅವರಿಗೆ ಪತ್ರವನ್ನು ಬರೆದರು. ಅವರು ಏನು ಹೇಳುತ್ತಾರೆ.

> "I am also enclosing another teleprinter message received in the same context. It says, 'That the Andhra Pradesh assembly thereafter adopted an unanimous resolution today requesting the centre to direct Karnataka to stop forthwith further construction of Almatti Dam and all other power schemes coming under Upper Krishna Project." dated 19.3.97.

ಅಂದರೆ ಆಂಧ್ರಪ್ರದೇಶ ಸರ್ಕಾರ ಈ ರೀತಿ ನಿರ್ಣಯಗಳನ್ನು ಅಸೆಂಬ್ಲಿಯಲ್ಲಿ ಮಾಡುತ್ತಿರಬೇಕಾದರೆ ನಾವು, ಅವರು ಕಾನೂನು ಬಾಹಿರವಾಗಿ ಕೈಗೊಳ್ಳುತ್ತಿರುವಂತಹ ಈ ಯೋಜನೆಗಳನ್ನು ತತಕ್ಷಣ ನಿಲ್ಲಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರುವಂತಹ ಸರ್ವಾನುಮತದ ನಿರ್ಣಯವನ್ನು ತರುವುದಕ್ಕೆ ಅಡ್ಡಿ ಏನಿದೆ ಎಂದು ನಿಮ್ಮನ್ನು ನಾನು ಕೇಳುತ್ತಿದ್ದೇನೆ. ಈಗ ಈ ಕೆಲಸವನ್ನು ತಾವು ಮಾಡಬೇಕೆಂದು ನನ್ನ ಒತ್ತಾಯ ಇದೆ. ಆಶ್ಚರ್ಯವೆಂದರೆ ಹೆಚ್.ಕೆ. ಪಾಟೀಲರು ಇದ್ದಾರೆ ಹಾಗೂ ಮಾನ್ಯ ನೀರಾವರಿ ಸಚಿವರೂ ಇದ್ದಾರೆ. 1972 ರಲ್ಲೇ ಆಲಮಟ್ಟಿ ಗೇಟಿನ ಹೈಟನ್ನು 524.6 ಮೀಟರ್‌ಗೆ ಏರಿಸುವುದರ ಬಗ್ಗೆ ಒಪ್ಪಿಗೆಯಾಗಿತ್ತು. ಅವತ್ತು ಆಂಧ್ರ ಏನೂ ಅಬ್ಜೆಕ್ಷನ್ ಮಾಡಿರಲಿಲ್ಲ. ಟ್ರಿಬ್ಯುನಲ್ ಕೂಡ ನಮಗೆ ಅಬ್ಜೆಕ್ಷನ್ ಮಾಡಿರಲಿಲ್ಲ. ಆದರೆ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ, ಸುಪ್ರೀಂ ಕೋರ್ಟ್‌ನಿಂದ ಆಂಧ್ರಪ್ರದೇಶ ಸರ್ಕಾರ ಡೈರೆಕ್ಷನ್ ಕೊಡಿಸುವುದರಲ್ಲಿ ಯಶಸ್ವಿಯಾದರು. 524.6 ಮೀಟರ್‌ಗೆ ನಾವು ಗೇಟ್ ಕೂರಿಸಿಯಾಗಿತ್ತು, ಅದಕ್ಕೆ ಬೇಕಾದರೆ ಆದೇಶ ಕೊಡಬಹುದಾಗಿತ್ತು. ನೀವು 519.6 ಗಿಂತ ಹೆಚ್ಚಿಗೆ 'ಎ' ಸ್ಕೀಮ್‌ನಲ್ಲಿ ನೀರು ನಿಲ್ಲಿಸಕೂಡದು ಎಂದು ಹೇಳಬಹುದಾಗಿತ್ತೇ ಹೊರತು, ಬಹುಶ: ದೇಶದ ಇತಿಹಾಸದಲ್ಲಿ ಮಾಡಿಟ್ಟಿದ್ದಂತಹ ಗೇಟ್‌ನ್ನು ಕಟ್ ಮಾಡಿದಿರಿ. ಹಾಗಾದರೆ ನಾವೇನು ಕೇಂದ್ರದ ಆಡಳಿತದ ಚೌಕಟ್ಟಿನಲ್ಲಿ ಇರಲಿಲ್ಲವೇ? 519.6 ಮೀಟರ್‌ಗಿಂತ ಹೆಚ್ಚು ನೀರು ನಿಲ್ಲಿಸಬಾರದು ಎಂದು ಡೈರಕ್ಷನ್ ಕೊಟ್ಟಿದ್ದರೆ, ಆ ಗೇಟ್ ಹಾಗೆ ಉಳಿಯುತ್ತಿತ್ತು ತಾನೆ? ಇದರ ವಿಚಾರದಲ್ಲಿ ಹಠಮಾಡಿ ಪ್ರತಿ ಕ್ಷಣದಲ್ಲಿ ಕರ್ನಾಟಕ ರಾಜ್ಯದ ಜನತೆಯನ್ನು ಹಾಗೂ ಸರ್ಕಾರವನ್ನು ಅಪಮಾನಗೊಳಪಡಿಸಿ, ಟ್ರಿಬ್ಯುನಲ್, ಸುಪ್ರೀಂ ಕೋರ್ಟ್

ಎಲ್ಲರ ಮನವೊಲಿಸಿ ನಮ್ಮನ್ನು ಈ ಇಕ್ಕಟ್ಟಿನಲ್ಲಿ ಸಿಕ್ಕಿಸುವುದರಲ್ಲಿ ಅವರು ಯಶಸ್ವಿಯಾದರು. ಅಂದರೆ, ನಾವು ಇವತ್ತು ಇಡೀ ದೇಶದ ಮುಂದೆ ಈ ಆಂಧ್ರಸರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ಈ ರೀತಿ ಮಿಸ್‌ಯೂಸ್ ಮಾಡಿಕೊಳ್ಳುತ್ತಿದ್ದಾರೆ, ಕಾನೂನು ಬಾಹಿರವಾಗಿ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ಇದೊಂದು ಒಳ್ಳೆಯ ಅವಕಾಶ ಅಲ್ಲವಾ? ಇದನ್ನು ರಾಜ್ಯದ ರೈತರ ಹಿತದೃಷ್ಟಿಯಿಂದ ಇಷ್ಟಾದರೂ ಮಾಡಬೇಕಲ್ಲಾ. ಆ ಕೆಲಸವನ್ನು ಮಾಡಬೇಕೆಂದು ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ತಮಗೆ ಗೊತ್ತಿರುವ ಹಾಗೆ ಕಾವೇರಿ ಬೇಸಿನ್‌ನಲ್ಲಿ ನಾವೇನು ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ, ಅದಕ್ಕಿಂತ 11.2 ಲಕ್ಷ ಎಕರೆಗಿಂತ ಹೆಚ್ಚಿಗೆ ಒಂದು ಹನಿ ನೀರು ಜಾಸ್ತಿ ನೀರು ಸಂಗ್ರಹ ಮಾಡಬಾರದು ಎಂದು ಕೇಂದ್ರದಿಂದ ಒಂದು ಒತ್ತಡ ತಂದು ಆ ಒಂದು ಕಟ್ಟುಪಾಡು ನಮಗೆ ಮಾಡಿದ್ದಾರೆ ತಾನೆ? ಇವತ್ತು ಅದೇರೀತಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ಆಂಧ್ರಪ್ರದೇಶ 'ಎ' ಸ್ಕೀಮ್‌ನಲ್ಲಿ ಇರುವಂತಹ ನೀರನ್ನು ಬಿಟ್ಟು ಒಂದು ಹನಿ ನೀರು ಹೆಚ್ಚಿಗೆ ಉಪಯೋಗಿಸುವುದಕ್ಕೆ ಅವಕಾಶ ಕೊಡಕೂಡದು ಎಂದು ನಿರ್ಬಂಧವನ್ನು ಕೇಂದ್ರ ಸರ್ಕಾರ ಏಕೆ ಮಾಡುವುದಕ್ಕಾಗುವುದಿಲ್ಲ? ಏಕೆ ನಮ್ಮಿಂದ ಮಾಡಿಸುವುದಕ್ಕೆ ಸಾಧ್ಯವಿಲ್ಲ? ಕೇಂದ್ರದಲ್ಲಿ ನಿಮ್ಮದೇ ಕಾಂಗ್ರೆಸ್‌ಸರ್ಕಾರ ಇದೆ, ಇಲ್ಲೂ ಸಮ್ಮಿಶ್ರಸರ್ಕಾರ ಇದೆ, ಆದರೆ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡದೆ ನಮ್ಮ ರಾಜ್ಯದ ರೈತ ಸಮೂಹಕ್ಕೆ ಒಂದು ರೀತಿಯಲ್ಲಿ ಅನ್ಯಾಯವಾಗಿದೆ. ಈ ಬಗ್ಗೆ ಸರ್ವಾನುಮತದ ನಿರ್ಣಯವನ್ನು ಸರ್ಕಾರ ಮಂಡಿಸಬೇಕು. ಇನ್ನು ಎರಡನೇಯದು ನೀವು ಬಹುಶ: ಯಾವರೀತಿ ತೆಗೆದುಕೊಳ್ಳುತ್ತೀರೋ ಏನೋ, ಮಾನ್ಯ ನೀರಾವರಿ ಸಚಿವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನದೊಂದು ಸಲಹೆ ಏನೆಂದರೆ, ಇವತ್ತು 'ಎ' ಸ್ಕೀಮ್‌ನಲ್ಲಿ ಇರುವಂತಹ ನೀರನ್ನು ಉಪಯೋಗಮಾಡಿಕೊಳ್ಳುವುದಕ್ಕೆ ಹಾಗೂ 'ಬಿ' ಸ್ಕೀಮ್‌ನಲ್ಲಿ ಇರುವಂತಹ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಬೇಕಾದಂತಹ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಇವತ್ತು ಸರ್ವ ಪಕ್ಷಗಳ ಜಂಟಿ ಸದನ ಸಮಿತಿಯನ್ನು ತಾವು ರಚನೆ ಮಾಡಿದಿರಾ? ನೀವು ತಿಂಗಳಿಗೊಮ್ಮೆ ಈ ಬೇಸಿನ್ ಯಾವರೀತಿ ಪ್ರೋಗ್ರೆಸ್ ಆಗಿದೆ? ಅಧಿಕಾರಿಗಳು ಯಾವರೀತಿ ಕೆಲಸ ಮಾಡುತ್ತಿದ್ದಾರೆ? ಗುತ್ತಿಗೆದಾರರು ಯಾವರೀತಿ ಕೆಲಸ ಮಾಡುತ್ತಿದ್ದಾರೆ? ಹಣ ಎಲ್ಲಿಂದ ತರಬೇಕು? ಒಂದೆರಡು ವರ್ಷದಲ್ಲಿ ಈ 'ಎ' ಸ್ಕೀಮ್‌ನಲ್ಲಿ ಮತ್ತು 'ಬಿ' ಸ್ಕೀಮ್‌ನಲ್ಲಿ ಇರುವಂತಹ ಯೋಜನೆಗಳನ್ನು ಪೂರ್ಣ ಮಾಡುವುದು ಹೇಗೆ?

ಇದೆಲ್ಲಾ ಯೋಚನೆ ಮಾಡುವುದಕ್ಕೆ ಅನುಕೂಲವಾಗಬಹುದು, ಅದಕ್ಕೆ ನನ್ನ ಒತ್ತಾಯವೇನೆಂದರೆ, ಜಂಟಿ ಒಂದು ಸದನ ಸಮಿತಿಯನ್ನು ಮಾಡಿ, ಈ ಕೆಲಸ ನೋಡಿಕೊಳ್ಳುವುದಕ್ಕೆ ಒಂದು ಸೂಪರ್‌ವಿಷನ್ ರೀತಿಯಲ್ಲಿ ತಾವು ಈ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ನಾನು ಇದನ್ನು ಪ್ರಸ್ತಾಪ ಮಾಡಿದರೆ ರಾಜಕಾರಣ ಬರುತ್ತದೋ ಏನೋ ಗೊತ್ತಿಲ್ಲ, ಸನ್ಮಾನ್ಯ ದೇವೇಗೌಡರು ಪ್ರಧಾನಿಗಳಾಗಿದ್ದಂತಹ ಸಂದರ್ಭದಲ್ಲಿ ಜ್ಯೋತಿಬಸು ಅವರ ಅಧ್ಯಕ್ಷತೆಯಲ್ಲಿ ಸಮಿತಿ ಆಗಿರುವುದು. ಆ ಸಮಿತಿ ರಚನೆ ಮಾಡಿದ ಪರಿಣಾಮ ಆ ಎಕ್ಸ್‌ಪರ್ಟ್ ಕಮಿಟಿ ಇಲ್ಲಿಗೆ ಬಂದು 524.6 ಮೀಟರ್‌ಗೆ ಏರಿಸಿದಂತಹ ಗೇಟನ್ನು 519.6 ಗೆ ಇಳಿಯುವುದಕ್ಕೆ ಕಾರಣವಾಗಿ ಆ ಎಕ್ಸ್‌ಪರ್ಟ್ ಕಮಿಟಿ; ಜ್ಯೋತಿಬಸು ಅಧ್ಯಕ್ಷತೆಯಲ್ಲಿ ಆದಂತಾದ್ದು. ಯಾರು ಇದಕ್ಕೆ ಕಾರಣ? ಏಕೆ ಹೀಗಾಯಿತು? ಇದೆಲ್ಲಾ ಘಟನೆಗಳನ್ನು ನಾವು ನೆನಪು ಮಾಡಿಕೊಂಡು, ನಾನು ಮಾಜಿ ಪ್ರಧಾನಿ ದೇವೇಗೌಡರಲ್ಲಿ ವಿನಂತಿ ಮಾಡುತ್ತೇನೆ, ಈ ಸಂದರ್ಭದಲ್ಲಿ ನಾವು ಬೀದಿಗೆ ಇಳಿಯೋಣ. ಪ್ರತಿಪಕ್ಷವಾಗಿ ಆಡಳಿತ ಪಕ್ಷಕ್ಕೆ ಎಲ್ಲಾ ರೀತಿಯ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ಇಡೀ ಕರ್ನಾಟಕ ರಾಜ್ಯದ ಜನತೆಯನ್ನು ಜೊತೆಗೆ ತೆಗೆದುಕೊಂಡು ಹೋಗೋಣ. ಇದುವರೆಗೆ ಆದಂತ ಅನ್ಯಾಯ ಕೊನೆಯಾಗಲಿ. ಇನ್ನು ಮುಂದೆ ಆಂಧ್ರ, ಬೇರೆ ರಾಜ್ಯಗಳು ನಮ್ಮ ಮೇಲೆ ಸವಾರಿ ಮಾಡುವುದಕ್ಕೆ ಕೊನೆ ಆಗಲಿ, ನಮ್ಮ 'ಎ' ಸ್ಕೀಮ್‌ನಲ್ಲಿ ಇರುವಂತಹ ನೀರನ್ನು ಪೂರ್ಣ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳೋಣ. ಈಗಾಗಲೇ ತಮಗೆಲ್ಲಾ ಗೊತ್ತಿರುವಂತಾದ್ದು, ನಾನು ಮತ್ತೆ ಮತ್ತೆ ಹೇಳಬೇಕಾಗಿಲ್ಲ, ಟ್ರಿಬ್ಯೂನಲ್ ತೀರ್ಮಾನದ ಪ್ರಕಾರ ಯಾವುದಾದರೂ ಕಾರಣಕ್ಕೆ ನಾವು ನೀರನ್ನು ಉಪಯೋಗಿಸಿಕೊಳ್ಳದೆ ಇದ್ದರೆ ಹಕ್ಕು ನಮ್ಮದೇನೂ ಹೋಗುವುದಿಲ್ಲ. ಅಣ್ಣ ತಮ್ಮಂದಿರು ಆಸ್ತಿ ಹಂಚಿಕೊಂಡರೆ ಯಾರೋ ಒಬ್ಬ ಇಂಪ್ರೂಮೆಂಟ್ಸ್ ಮಾಡುತ್ತೇನೆ, ಇನ್ನೊಬ್ಬ ಡೆವಲಪ್ ಮಾಡಲಿಲ್ಲ ಎಂದರೆ ಅವರ ಆಸ್ತಿಯನ್ನು ಕಸಿದು ಕೊಳ್ಳುವುದಕ್ಕಾಗುತ್ತದೆಯೇ? ಆದುದರಿಂದ ಟ್ರಿಬ್ಯೂನಲ್ ತೀರ್ಮಾನದ ಪ್ರಕಾರ ನಾವು ನೀರನ್ನು ಯಾವುದೇ ಕಾರಣಕ್ಕೆ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ ಎಂದರೆ ಹಕ್ಕನ್ನು ಯಾರೂ ಕಸಿದು ಕೊಳ್ಳುವುದಕ್ಕಾಗುವುದಿಲ್ಲ. ಆದರೆ ಅವರು ಟ್ರಿಬ್ಯೂನಲ್ ಮುಂದೆ ಆ ಪ್ರಯತ್ನವನ್ನು ನಡೆಸಿದ್ದಾರೆ. ನೀರು ಉಪಯೋಗಿಸದೆ ಇರುವುದನ್ನು ಹಂಚಿಕೆ ಮಾಡಬೇಕು ಎನ್ನುವ ಪ್ರಯತ್ನವನ್ನು ಮಾಡಿದ್ದಾರೆ, ಅದು ನಡೆಯುವುದಿಲ್ಲ. ಅದಕ್ಕೆ ನಾವು

ಭಯಭೀತರಾಗುವಂತಹ ಅಗತ್ಯ ಇಲ್ಲ. ಆದುದರಿಂದ ಆಂಧ್ರ ಪ್ರದೇಶ ಕಾನೂನು ಬಾಹಿರವಾಗಿ ಕೈಗೊಂಡಿರತಕ್ಕಂಥ ಈ ಎಲ್ಲಾ ಸ್ಕೀಮ್‌ಗಳನ್ನು ತತಕ್ಷಣ ನಿಲ್ಲಿಸಬೇಕೆಂದು ಕೇಂದ್ರ ಸರ್ಕಾರ ಆದೇಶ ನೀಡಬೇಕು, ಮತ್ತು ಮಧ್ಯಪ್ರವೇಶ ಮಾಡಬೇಕೆಂಬ ಒಂದು ಸರ್ವಾನುಮತದ ನಿರ್ಣಯ ಮಾಡಬೇಕು, ಎರಡನೇಯದು ಈ ಯೋಜನೆ ಪೂರ್ಣವಾಗುವವರೆಗೆ ಎರಡು ಸದನದ ಜಂಟಿ ಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಾ, ಇದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು ಎನ್ನುವ ವಿನಂತಿಯನ್ನು ಈ ರಾಜ್ಯದ ರೈತರ ಸಮೂಹದ ಪರವಾಗಿ ನಾನು ಮಾಡುತ್ತಿದ್ದೇನೆ. ಅದಕ್ಕೆ ತಾವು ಬೇರೆ ಕುಂಟು ನೆಪಗಳನ್ನು ಹೇಳಬೇಡಿ. ನೀವು ಮುಂದೆ ಏನಾಗುತ್ತದೆ ನೋಡೋಣ. ಮೊದಲು ನಿಯೋಗವನ್ನು ತೆಗೆದುಕೊಂಡು ಹೋಗಿ ಪ್ರಧಾನಿಯವರನ್ನು ಭೇಟಿ ಮಾಡೋಣ. ಸಂದರ್ಭ ಬಂದಾಗ ಎಕ್ಸ್‌ಪರ್ಟ್ಸ್‌ನ್ನು ಕನ್ಸಲ್ಟ್ ಮಾಡೋಣ, ಇವತ್ತು ಈ ಕತೆಗಳನ್ನು ಹೇಳಿದರೆ ಯಾರೂ ನಂಬುವುದಿಲ್ಲ. ಕಳೆದ 6–8 ತಿಂಗಳಿನಲ್ಲಿ ನೀವು ಲೀಗಲ್ ಎಕ್ಸ್‌ಪರ್ಟ್ಸ್‌ನ್ನು ಕೇಳಬೇಕಾಗಿತ್ತು. ಈ ವಿಚಾರದಲ್ಲಿ ನಾವು ಸುಪ್ರೀಂ ಕೋರ್ಟ್ ಮುಂದೆ ಹೋಗಬೇಕಾ ಅಥವಾ ನಾವು ಕೇಂದ್ರ ಸರ್ಕಾರಕ್ಕೆ ಯಾವರೀತಿ ಒತ್ತಡವನ್ನು ತರಬೇಕು ಅಥವಾ ರಾಜ್ಯದ ಜನ ಒಟ್ಟಾಗಿ ಇದರ ವಿರುದ್ಧ ಎದ್ದು ನಿಲ್ಲಬೇಕು? ಈ ರೀತಿಯ ಕಾರ್ಯಕ್ರಮವನ್ನು ರೂಪಿಸಬಹುದಾಗಿತ್ತು. ತಾವು ಈ ಮನೆಯ ಸದಸ್ಯರ ಗಮನಕ್ಕೂ ಕೂಡ ತರುವಂತಹ ಪ್ರಯತ್ನ ಮಾಡಲಿಲ್ಲ. ನೀವೂ ಸಹ ಕುಂಬಕರ್ಣ ನಿದ್ದೆಯಲ್ಲಿ ಇದ್ದ ಪರಿಣಾಮ ಇವತ್ತು ರಾಜ್ಯದ ಜನತೆಯ ರೈತರಿಗೆ ಅನ್ಯಾಯವಾಗಿದೆ. ನಿಮ್ಮ ವರ್ತನೆಯನ್ನು ನಾವು ನೋಡಿದಾಗ ಆ ಕೇಂದ್ರ ಸರ್ಕಾರದ ಮುಲಾಜಿಗೆ ನೀವು ಸಿಕ್ಕಿ ಹಾಕಿಕೊಂಡು ರಾಜ್ಯದ ಹಿತವನ್ನು ಸಂಪೂರ್ಣವಾಗಿ ಕಡೆಗಾಣಿಸುತ್ತಿದ್ದೀರಿ. ಎಲ್ಲಿ ಆಂಧ್ರ ಪ್ರದೇಶ ತಿರುಗಿ ಬಿದ್ದರೆ ಕೇಂದ್ರ ಸರ್ಕಾರಕ್ಕೆ ಅಡ್ಡಿ ಆಗುತ್ತದೋ, ಮತ್ತು ಮುಖ್ಯಮಂತ್ರಿಗಿರಿಗೆ ಎಲ್ಲಿ ಅಡ್ಡಿಯಾಗುತ್ತದೋ ಎನ್ನುವ ಭಯದಿಂದ ಈ ರೀತಿಯಾಗಿ ಎಲ್ಲವನ್ನೂ ನೋಡಿಕೊಂಡು ಕೈಕಟ್ಟಿಕೊಂಡು ಕುಳಿತಿದ್ದೀರಿ ಎನ್ನುವುದು ಸ್ಪಷ್ಟವಾದಂತಹ ನನ್ನ ಆರೋಪ ಇದೆ. ಆದುದರಿಂದ ಅದೆಲ್ಲವನ್ನೂ ತೆಗೆದು ಹಾಕಬೇಕೆಂದಿದ್ದರೆ, ಸರ್ವಾನುಮತದ ಈ ನಿರ್ಣಯವನ್ನು ಕೈಗೊಳ್ಳುವುದಕ್ಕೆ ಯಾವುದೇ ಅಡ್ಡಿಯಿಲ್ಲ. ಆ ದೃಷ್ಟಿಯಿಂದ ಸರ್ಕಾರ ಮುಂದೆ ಬಂದು ಈ ನಿರ್ಣಯವನ್ನು ಕೈಗೊಳ್ಳಬೇಕು. ನಾವು ನಿಮ್ಮ ಜೊತೆಗೆ ಇದ್ದೇವೆ.

ಒಟ್ಟಾಗಿ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸುವಂತಹ ಕೆಲಸ ರಾಜ್ಯಸರ್ಕಾರ ಮಾಡಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾವೂ ಕೂಡ ನಿನ್ನೆ ಒತ್ತಾಯ ಮಾಡಿದ್ದೆವು. ಒಂದು ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಬೇಕು, ರಾಜ್ಯದ ಹಿತಾಸಕ್ತಿಯಲ್ಲಿ....

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಕಲ್ಮಲ) : ಮಾನ್ಯ ಅಧ್ಯಕ್ಷರೆ, ಈಗ ನಾನು ಕೃಷ್ಣ ಭಾಗ್ಯ ಜಲ ನಿಗಮದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಚಾವತ್ ಅವಾರ್ಡ್ ಪ್ರಕಾರ 2000ನೇ ಇಸವಿಯೊಳಗಾಗಿ, ಕೃಷ್ಣ ನೀರನ್ನು ನಿಲ್ಲಿಸದೆ ಇದ್ದರೆ ನಮ್ಮ ಹಕ್ಕು ಹೋಗುತ್ತದೆ ಎಂದು ಹೇಳಿ, ಸ್ವಾತಂತ್ರ್ಯ ಸಿಕ್ಕಿ 55 ವರ್ಷಗಳು ಆದರೂ ಹಲವಾರು ಮುಖ್ಯಮಂತ್ರಿಗಳು ಬಂದು ಹೋದರು, 1994 ರಲ್ಲಿ ನಮ್ಮ ಜನತಾದಳ ಅಧಿಕಾರಕ್ಕೆ ಬಂದ ಮೇಲೆ ನಮ್ಮ ನಾಯಕರಾದಂತಹ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ದೇವೇಗೌಡರ ಕಾಲದಲ್ಲಿ ನಮ್ಮ ಹಣಕಾಸಿನ ಮಂತ್ರಿಗಳಾದಂತಹ ಸಿದ್ಧರಾಮಯ್ಯನವರ ಕಾಲದಲ್ಲಿ ಐದು ವರ್ಷದಲ್ಲಿ ನಾವು ಆಲಮಟ್ಟಿ ಡ್ಯಾಂ ಕಟ್ಟಿ 524 ಮೀಟರ್‌ಗೆ ನೀರು ನಿಲ್ಲಿಸಬೇಕೆಂದು ಹೇಳಿ ಆ ಡ್ಯಾಂ ಅನ್ನು ಕಟ್ಟಿ ಗೇಟ್‌ಕೂಡ ಹಾಕಿದೆವು. ಆ ಕೀರ್ತಿ ಮಾನ್ಯ ದೇವೇಗೌಡರಿಗೆ ಸಲ್ಲುತ್ತದೆ ಎನ್ನುವುದನ್ನು ಮರೆಯಬಾರದು. ಆದರೆ ಚಂದ್ರಬಾಬುನಾಯ್ಡು ಅವರ ಒತ್ತಡಕ್ಕೆ 519 ಮೀಟರ್‌ಗೆ ನಿಲ್ಲಿಸಿದೆವು ಎಂದು ನಮ್ಮ ಹಿರಿಯರಾದಂತಹ ವಿರೋಧ ಪಕ್ಷದ ನಾಯಕರು ಆಗಿರುವಂತಹ ಮಾನ್ಯ ಬಿ.ಎಸ್. ಯಡಿಯೂರಪ್ಪನವರು 519 ಮೀಟರ್‌ಗೆ ನಿಲ್ಲಿಸಿದ್ದರೆಂದು ಹೇಳುತ್ತಾರೆ. ಇದು ನಮ್ಮ ಹಿರಿಯ ನಾಯಕರಾಗಿರುವಂತಹ ಶ್ರೀ ವಾಜಪೇಯಿಯವರ ಒತ್ತಡಕ್ಕೆ ಮಣಿದು, 519 ಮೀಟರ್ ನಿಲ್ಲಿಸಲಾಯಿತೆಂಬ ಮಾತನ್ನು ನಾವು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ನಾವು ಏನು ಮಕ್ಕಳಾ, ನಾವು ಈ ಕಡೆ ಮಾತನಾಡುವುದನ್ನು ಗಮನವಿಟ್ಟು ನೀವು ಕೇಳಿ.

ಉಪಾಧ್ಯಕ್ಷರು : ಆಯಿತು ಕುಳಿತುಕೊಳ್ಳಿ.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಅವರು ಮಾಜಿ ನೀರಾವರಿ ಸಚಿವರು ಆಗಿದ್ದವರು.

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ : ಮಾನ್ಯ ಉಪಾಧ್ಯಕ್ಷರೇ, ಅದು ಮಾನ್ಯ ಚಂದ್ರಬಾಬು ನಾಯ್ಡುರವರ ಒತ್ತಡಕ್ಕೆ ಮಣಿದು, ಆಗ ನಮ್ಮ ಸರ್ಕಾರ ಹೋದಮೇಲೆ 519 ಮೀಟರ್‌ಗೆ ನಿಲ್ಲಿಸಿದ್ದಂಥಾದ್ದು ಕೂಡ ಇದರಲ್ಲಿ ಬಿ.ಜೆ.ಪಿ. ಯವರ ಕೈವಾಡ ಇದರಲ್ಲಿ ಇದೆಯೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ಒಂದು ವಿಚಾರವೇನೆಂದರೆ ನಮಗೆ ಸ್ವಾತಂತ್ರ್ಯ ಬಂದು 56 ವರ್ಷಗಳಾಗಿ, 13 ಜನರು ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದು ಹೋದರು. ಈ 2000 ನೇ ಇಸವಿಯೊಳಗೆ ಆ ನೀರನ್ನು ಅಲ್ಲಿ ನಿಲ್ಲಿಸಿದ್ದರೆ, ನಮ್ಮ ಹಕ್ಕು ಆಗುತ್ತಿತ್ತು. ಕೃಷ್ಣಾ ನದಿಯ ಎಲ್ಲಾ ನೀರು ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ನಾವು ಈ 5 ವರ್ಷಗಳಲ್ಲಿ ಒಂದು ಜನತಾ ಮನೆಯನ್ನು ಕಟ್ಟಿಸಲು ಆಗಲಿಲ್ಲ. ಆಲಮಟ್ಟಿ ಡ್ಯಾಂ ಬಗ್ಗೆ ಮಾನ್ಯ ದೇವೇಗೌಡರು ಎಷ್ಟು ಸಲ ಹೋಗಿದ್ದಾರೆಂಬ ಲೆಕ್ಕವೂ ಇಲ್ಲ. ಸುಮಾರು ಸಲ ಅಂದರೆ ಅದಕ್ಕೆ ಲೆಕ್ಕವೇ ಇಲ್ಲ. ಅಷ್ಟು ತ್ವರಿತವೇಗದಲ್ಲಿ, ನಮ್ಮ ಹಣಕಾಸಿನ ಮಂತ್ರಿಗಳಾಗಿರುವ ಮಾನ್ಯ ಸಿದ್ಧರಾಮಯ್ಯನವರು ಇದಕ್ಕೆ ಎಷ್ಟೇ ಆಗಲಿ, ಈ 2000 ನೇ ಇಸ್ವಿಗೆ ಮುಂದೆ ಬರುತ್ತೇವೋ, ಹೋಗುತ್ತೇವೋ, ಗೊತ್ತಿಲ್ಲ. ನಮ್ಮ ಸರ್ಕಾರ ಇರುತ್ತದೋ, ಇಲ್ಲವೋ ಗೊತ್ತಿಲ್ಲ. ಈ ಆಲಮಟ್ಟಿ ಕೃಷ್ಣಾ ನೀರನ್ನು ನಿಲ್ಲಿಸಲೇಬೇಕು . ನಾವು ಅದನ್ನು ಉಳಿಸಲೇ ಬೇಕೆಂಬ ಕೀರ್ತಿ ನಮ್ಮ ಸರ್ಕಾರಕ್ಕೆ ಇದೆ. ಆದರೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಒಂದು ಸಂತೋಷದ ಮಾತನ್ನು ಆಡುವುದಿಲ್ಲ. ಇವತ್ತು ಆ ನೀರನ್ನು ನಿಲ್ಲಿಸದಿದ್ದರೆ ನಮ್ಮ ಹಕ್ಕೇ ಉಳಿಯುತ್ತಿರಲಿಲ್ಲ. ಇದರ ಜೊತೆಗೆ ನಾರಾಯಣಪುರ ಬಲದಂಡೆ ಕಾಲುವೆಯನ್ನು ಬೇಬಿಕೆನಾಲ್‌ಗಳೆಂದು ಆ ಮಸ್ಕಿಗೆ, ಲಿಂಗಸುಗೂರು ಆ ಕಡೆಗೆ ಮುಗಿಸಿಬಿಡುತ್ತಿದ್ದರು. ನಾನಾ ಹೆಸರುಗಳನ್ನು ಇಡತಕ್ಕಂಥವರು ಆಗಿದ್ದರು ಆದರೆ ಇದನ್ನು 95 ಕಿ.ಮೀ. ತೋಡಿಸಿ ನಿಲ್ಲಿಸಿದಂತಹ ಕೀರ್ತಿ ನಮ್ಮ ಮಾನ್ಯ ದೇವೇಗೌಡರಿಗೆ ಮತ್ತು ಸಿದ್ಧರಾಮಯ್ಯನವರಿಗೆ ನಮ್ಮ ಜನತಾದಳದ ಸರ್ಕಾರಕ್ಕೆ ಸಲ್ಲುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಆದರೆ ಈಗ ಯಾವುದೇ ಆಗಲಿ, ಈಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಜ್ಯೋತಿಬಸು ಅವರ ನೇತೃತ್ವದ ಕಮಿಟಿಯನ್ನು ಮಾಡಿದರು, ಎಂದು ಹೇಳಿದರು. ಆ ಕಮಿಟಿಯಿಂದ ಇದಕ್ಕೆ ಆರ್ಡರ್ ಆಗಿಲ್ಲ. ಇಲ್ಲಿ 519 ಮೀಟರ್‌ಗಳಿಗೆ ಮಾನ್ಯ ವಾಜಪೇಯಿಯವರೇ, ಇದಕ್ಕೆ ಒತ್ತಡ ಮಾಡಿದರು, ಎಂಬ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ. ಹಾಗೆ ಮಾನ್ಯ ಚಂದ್ರಬಾಬುನಾಯ್ಡುರವರ ಒತ್ತಡಕ್ಕೆ ಮಣಿದು 150 ಟಿ.ಎಂ.ಸಿ ನೀರನ್ನು

ಆಂಧ್ರಪ್ರದೇಶಕ್ಕೆ ಬಿಟ್ಟರು. ಆಗ ಅದನ್ನು ಯಾರೂ ಕೇಳಲಿಲ್ಲ. ಆದರೆ ಈಗ ನಮ್ಮ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಬಜೆಟ್‌ನಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳು, ಇವತ್ತು ನಾರಾಯಣಪುರ ಬಲದಂಡೆ ಕಾಲುವೆಯನ್ನು ಎ, ಬಿ, ಸ್ಕೀಂ ಎನ್ನತಕ್ಕಂಥ ಅವಶ್ಯಕತೆ ಇಲ್ಲ. ಈ ನಾರಾಯಣಪುರ ಬಲದಂಡೆ ಕಾಲುವೆಯನ್ನು ತೋಡುವುದಕ್ಕೆ, ಯಾವ ಕೋರ್ಟ್‌ನಲ್ಲಿ ದಾವೆ ಇಲ್ಲ ಅದನ್ನು ಮುಂದುವರೆಸುತ್ತೇವೆಂಬ ನಿರ್ಧಾರವನ್ನು ನಮ್ಮ ಸಮ್ಮಿಶ್ರ ಸರ್ಕಾರ ತೆಗೆದುಕೊಂಡಿದೆ. ಇದಕ್ಕೆ ಯಾರು ಏನೂ ಭಯ ಪಡುವಂತಹ ಅವಶ್ಯಕತೆ ಇಲ್ಲ. ಆ ನೀರನ್ನೆಲ್ಲಾ ಸಮಗ್ರವಾಗಿ ಬಳಸಿಕೊಳ್ಳುತ್ತೇವೆಂಬ ವಿಶ್ವಾಸ ನನಗಿದೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ಉಪಾಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ತಿಳಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನರಸಿಂಹ ನಾಯಕ್ (ರಾಜುಗೌಡ) (ಸುರಪುರ) : ಮಾನ್ಯ ಉಪಾಧ್ಯಕ್ಷರೆ, ಮುಖ್ಯವಾಗಿ ಕೃಷ್ಣಾ ನದಿಯ ದಂಡೆ ತೀರದಲ್ಲಿ ನನ್ನ ಮತಕ್ಷೇತ್ರವಿದ್ದು ಮತ್ತು ಆ ಭಾಗದ ನಮ್ಮ ಹೃದಯ ಭಾಗದ ಕಾವೇರಿ ಎಂದು ಇಲ್ಲಿ ಏನು ತಾಯಿ ಎನ್ನುತ್ತಾರೋ ಅದೇ ರೀತಿಯಲ್ಲಿ ಅಲ್ಲಿ ನಮ್ಮ ಕೃಷ್ಣಾ ನದಿಯನ್ನು ನಮ್ಮ ತಾಯಿ ಎಂದು ನಾವು ಅಂದು ಕೊಂಡಿದ್ದೇವೆ. ಇವತ್ತು ನಮ್ಮ ತಾಯಿಗೆ ಅನ್ಯಾಯವಾಗುತ್ತಿದೆ. ಅದಕ್ಕೋಸ್ಕರ ಇದನ್ನು ಪ್ರತಿಭಟಿಸಿ ನಮ್ಮ ತಾಯಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ನಮ್ಮ ಜೀವ ಹೋದರೂ ಪರವಾಗಿಲ್ಲ. ನಾವು ಹೋರಾಟ ಮಾಡುವಂತಹ ಅವಶ್ಯಕತೆ ಬಹಳ ಇದೆ. ಇವತ್ತಿನ ದಿವಸ ನೀರಾವರಿಯಿಂದ ಸಾಕಷ್ಟು ಜನರು ಕೃಷ್ಣಾ ನದಿಯನ್ನು ನಂಬಿ ಆರು ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ನೀರಾವರಿಯಾಗಿದೆ. ಆದರೆ ಇವತ್ತಿನ ರೈತರು ಬಹಳ ಕಂಗೆಟ್ಟಿದ್ದಾರೆ. ಇವತ್ತು ರೈತರ ಜೀವನ ಬಹಳ ಚಿಂತಾಜನಕವಾಗಿದೆ. ನಮ್ಮ ರೈತರು 15 ನೇ ತಾರೀಖಿನಿಂದ 20 ನೇ ತಾರೀಖಿನೊಳಗೆ ನೀರನ್ನು ಕೊಡದೇ ಹೋದ ಪಕ್ಷದಲ್ಲಿ, ಸುಮಾರು ನೂರಕ್ಕೆ ನೂರರಷ್ಟು ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಇವತ್ತು ಆಂಧ್ರಪ್ರದೇಶದವರು ಒತ್ತಡವನ್ನು ಹೇರಿ, ಅಲ್ಲಿ ಡ್ಯಾಂ ಅನ್ನು ನಿರ್ಮಿಸುತ್ತಿದ್ದಾರೆ. ಅದಕ್ಕೆ ದಯಮಾಡಿ ಅವಕಾಶವನ್ನು ಕೊಡಬಾರದು. ಈಗಾಗಲೇ ನಮಗೆ ಸಾಕಷ್ಟು ಇದ್ದ ನೀರನ್ನು ಅವರು ಕಬಳಿಸಿದ್ದಾರೆ. ಇವರು 20 ಟಿ.ಎಂ.ಸಿ. ನೀರನ್ನು ಕೇಳಿದ್ದು, ಮಳೆ ಹೆಚ್ಚಾಗಿ ಆದಕಾರಣ ಸುಮಾರು 180 ಟಿ.ಎಂ.ಸಿ. ಗಿಂತಲೂ ಹೆಚ್ಚು ನೀರನ್ನು ಈಗಾಗಲೇ

ಆಂಧ್ರಪ್ರದೇಶಕ್ಕೆ ಕೊಟ್ಟಿದ್ದೇವೆ. ಪ್ರತಿ ದಿವಸ ಸುಮಾರು 2000 ದಿಂದ 3000 ಕ್ಯೂಸೆಕ್ಸ್ ನೀರು, ಹಳ್ಳದ ಮುಖಾಂತರ ಹರಿದು ಆಂಧ್ರಪ್ರದೇಶದ ಪಾಲಾಗುತ್ತಿದೆ. ಆದುದರಿಂದ ಸರ್ಕಾರ ಹೆಚ್ಚಿನ ಗಮನವನ್ನು ಈ ಕೃಷ್ಣಾ ನದಿಯ ಬಗ್ಗೆ ವಹಿಸಬೇಕು. ಅಲ್ಲಿರುವಂತಹ ರೈತರಿಗೆ ಜೀವನ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇಲ್ಲದೇ ಹೋದ ಪಕ್ಷದಲ್ಲಿ ಮೇನ್‌ಡೋರ್‌ನಿಂದ ಅಲ್ಲ, ಹಿಂದಿನ ದಾರಿ ಯಿಂದ ಸಾಕಷ್ಟು ನೀರು ಹರಿದು ಹೋಗುತ್ತಿದೆ. ಇದರ ಬಗ್ಗೆ ನಾವು ಯಾರೂ ಲಕ್ಷ್ಯವನ್ನು ಕೊಡುತ್ತಾ ಇಲ್ಲ. ಇಲ್ಲಿ ಸಾಕಷ್ಟು ನೀರು ಬಸಿಯಿಂದ ಹರಿದು ಹೋಗುತ್ತದೆ. ಆ ಬಸಿನೀರನ್ನು ಹೇಗೆ ತಡೆಯಬೇಕೆಂಬುದರ ಬಗ್ಗೆ ಕ್ರಮವನ್ನು ತಗೆದುಕೊಳ್ಳಬೇಕು. ಇವತ್ತಿನ ದಿವಸ ನಾರಾಯಣಪುರ ಡ್ಯಾಂ ನಿಂದ, ಆಲಮಟ್ಟಿ ಡ್ಯಾಂ ನಿಂದ ಇವತ್ತು ಅಧಿಕಾರಿಗಳು ಒತ್ತಾಯವನ್ನು ಮಾಡುತ್ತಿದ್ದರೆ. ಇಲ್ಲಿ ಯಾರು ಕವಳಿಯನ್ನು ಬೆಳೆಯಬಾರದು, ಎಂದು ಹೇಳುತ್ತಾರೆ. ಇಲ್ಲಿ ಏಕೆ ಕವಳಿಯನ್ನು ಬೆಳೆಯಬಾರದೆಂದು ಕೇಳುತ್ತಿದ್ದಾರೆ. ಇಲ್ಲಿ ಕವಳಿ ಎಂದರೆ ಭತ್ತ, ಉದ್ದೇಶವೆಂದರೆ ಭತ್ತ ಬೆಳೆಯಬಾರದೆಂಬುದು, ನೀರಾವರಿ ಎಲ್ಲರಿಗೂ ನೀರು ಸಂಪೂರ್ಣವಾಗಿ ಮುಟ್ಟಲಿ ಎಂಬ ಉದ್ದೇಶದಿಂದ ಇವತ್ತು ಇದನ್ನು ಬೇಡವೆಂದು ಹೇಳುತ್ತಿದ್ದಾರೆ. ಆದರೆ ಇವತ್ತಿನ ದಿವಸ ನಮ್ಮ ರೈತರಿಗೆ ಅನ್ಯಾಯ ಮಾಡಿ ಅವರಿಗೆ ನೀರನ್ನು ಕೊಡುತ್ತೀರಿ. ನಮ್ಮ ರೈತರಿಗೆ ಒಳ್ಳೆಯ ಪದಾರ್ಥಗಳನ್ನು ಬೆಳೆಯಲು ಏಕೆ ಅವಕಾಶವನ್ನು ಮಾಡಿ ಕೊಡುತ್ತಿಲ್ಲ. ಇವತ್ತಿನ ದಿವಸ ನೀವು ಮುನಿರಾಬಾದ್ ಡ್ಯಾಂ ನಿಂದ ಭತ್ತವನ್ನು ಬೆಳೆಯಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದೇ ರೀತಿ ನಮ್ಮ ನಾರಾಯಣಪುರ ಡ್ಯಾಂನಿಂದ ಮತ್ತು ಆಲಮಟ್ಟಿ ಡ್ಯಾಂ ನಿಂದ ಹೋಗುವಂಥ ನೀರಿನಲ್ಲಿ ಭತ್ತವನ್ನು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು. ಇಲ್ಲಿ ದುರುಪಯೋಗವಾಗಿ ಹೋಗುತ್ತಿರುವಂತಹ ನೀರನ್ನು ರಕ್ಷಣೆ ಮಾಡಿ, ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕು. ಯಾವುದೇ ಒಂದು ಕಾರಣಕ್ಕೆ ಸರ್ಕಾರವು ಪಣ ತೊಡಬೇಕಾಗಿದೆ. ಆ ಆಂಧ್ರಪ್ರದೇಶದವರು ಮಾಡುತ್ತಿರುವಂತಹ ಕುತಂತ್ರವನ್ನು ತಡೆಗಟ್ಟಿ ಇವತ್ತು ಕೃಷ್ಣಾ ತಾಯಿಯ ಮಕ್ಕಳಾದ ನಮಗೆಲ್ಲಾ ರಕ್ಷಣೆಯನ್ನು ಒದಗಿಸಿಕೊಡಬೇಕಾಗಿದೆ. ನಮಗೆಲ್ಲಾ ಆ ಭರವಸೆ ಇದೆ, ಆ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು ಮಾಡೇ ಮಾಡುತ್ತಾರೆ. ತಾವು ಇದರ ಬಗ್ಗೆ ಹೆಚ್ಚು ಲಕ್ಷ್ಯ ಹರಿಸಿ, ಏನೇ ಆದರೂ ನಾವು ನೀರನ್ನು ಕೊಡುವುದಿಲ್ಲ. ಈ

ಕಾರ್ಯದಲ್ಲಿ ನಾವು ಅವರು ಯಶಸ್ವಿಯಾಗಲು ಬಿಡುವುದಿಲ್ಲವೆಂದು ಹೇಳಬೇಕೆಂದು, ನಾನು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಒಂದು ವಿಷಯ ಏನು ಆಗಿದೆಯೆಂದರೆ, ಈ ರಾಜ್ಯದಲ್ಲಿ ಹೇಗೋಗೊತ್ತಿಲ್ಲ, ಈ ದೇಶದಲ್ಲಿ ಹೇಗೋಗೊತ್ತಿಲ್ಲ. ಯಾವುದೇ ಕಾರಣಕ್ಕೆ ನೀರಾವರಿ ಬಳಕೆ ಮಾಡುವಂತಹ ವಿಚಾರದಲ್ಲಿ ರಾಜಕಾರಣವನ್ನು ಮಿಕ್ಸ್ ಮಾಡುವಂಥಾದ್ದು ಒಳ್ಳೆಯದಲ್ಲ. ಇಲ್ಲಿ ಏನಾಗಿದೆಯೆಂದರೆ ನೀರಾವರಿ ಬರುವಂತಹ ಸ್ಥಳಗಳಲ್ಲಿ ಲಿಫ್ಟ್ ಇರಿಗೇಷನ್ ಬರುತ್ತದೆಂದು ಹೇಳುವುದು. ಇಲ್ಲಿ ಒಬ್ಬರೊಬ್ಬರನ್ನು ಬೈದರೆ ಜನರು ನಮಗೆ ಓಟು ಕೊಡುತ್ತಾರೆಂಬುದು, ಇದು ತಪ್ಪು ಭಾವನೆ. ಇಲ್ಲಿ ಯಾವುದೇ ಗುಣಕ್ಕೆ ಮಾತ್ಸರ್ಯವಿಲ್ಲ. ನಾನು ಬಹಳ ಚಿಕ್ಕವನಾಗಿರುವಾಗ ಈ ರಾಜ್ಯಕ್ಕೆ ನೀರಾವರಿಗೆ ಏನಾದರೂ ಕಾಯಕಲ್ಪ ಮಾಡಿದ್ದಾರೆ, ಶಕ್ತಿಯನ್ನು ಕೊಟ್ಟಿದ್ದಾರೆಂದರೆ, ಅದು ದಿವಂಗತ ನಿಜಲಿಂಗಪ್ಪನವರು, ವಿರೇಂದ್ರಪಾಟೀಲರು, ಅವತ್ತು ಖಾಸಗೀ ನಿರ್ಣಯವನ್ನು ಮಂಡಿಸಿದಂತಹ ಮಾನ್ಯ ದೇವೇಗೌಡರು, ನಮ್ಮ ಹೇಮಾವತಿಯನ್ನು ಕಟ್ಟುವುದಕ್ಕೆ ಈ ಭಾಗಕ್ಕೆ ಶಕ್ತಿಯನ್ನು ಕೊಟ್ಟಿದ್ದಾರೆ. ನಾನು ಈ ಭಾಗದವನಾಗಿ ಕೃಷ್ಣಾ ಭಾಗ್ಯ ಜಲ ನಿಗಮದ ವಿಚಾರವನ್ನು ಹೇಳಬೇಕೆಂದರೆ, ಮಾನ್ಯ ದೇವೇಗೌಡರು ಈ ದೇಶದ ಪ್ರಧಾನಮಂತ್ರಿ ಆದಾಗ ಕೇಂದ್ರಸರ್ಕಾರದ ಹಣ ಸುಮಾರು 700 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಟ್ಟಂಥಾದ್ದು, ಈ ರಾಷ್ಟ್ರದಲ್ಲೇ ಮೊದಲನೆಯ ವಿಚಾರವಾಗಿದೆ. ಇದನ್ನು ನಾವು ಮಾತನಾಡಬಾರದು. ಇಲ್ಲಿ ನಾವೇ ಏನೇ ವಿಚಾರವನ್ನು ಮಾತನಾಡುವಾಗ, ಒಂದು ರೀತಿಯಲ್ಲಿ ಮಾನ್ಯ ದೇವೇಗೌಡರಿಗೆ ಇದ್ದಂತಹ ರಾಜಕೀಯ ಇಚ್ಛಾಶಕ್ತಿಯೋ ಅಥವಾ ರೈತರ ಪರವಾಗಿ ಇದ್ದಂತಹ ಕಮಿಟ್‌ಮೆಂಟ್‌ಗೂ ರಾಜಕೀಯ ವಿರೋಧವನ್ನು ಮಾಡುವುದಕ್ಕೋಸ್ಕರ ಮಾನ್ಯ ದೇವೇಗೌಡರನ್ನು ದೂರುವುದು ಒಳ್ಳೆಯದಲ್ಲವೆಂಬ ಮಾತನ್ನು ಹೇಳುತ್ತೇನೆ. ಮಾನ್ಯ ದೇವೇಗೌಡರು ಅವತ್ತು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ರಾಜ್ಯ ಸರ್ಕಾರದಲ್ಲಿ ಸಿದ್ಧರಾಮಯ್ಯನವರು ಫೈನಾನ್ಸ್ ಮಿನಿಸ್ಟರ್ ಆಗಿ, ಶ್ರೀಮಾನ್ ದಿವಂಗತ ಜೆ.ಹೆಚ್. ಪಟೇಲರಾಗಲಿ, ಮಾನ್ಯ ದೇವೇಗೌಡರ ಶಕ್ತಿಯನ್ನು ಧಾರೆ ಎರೆದಿದ್ದರು. ಈ ಮಾತನ್ನು ಹೇಳಿ. ಈ ರಾಜ್ಯದಿಂದ ಕೇಂದ್ರಕ್ಕೆ ಹಲವಾರು ಜನ ಮಂತ್ರಿಗಳಾಗಿ, ಪಾರ್ಲಿಮೆಂಟ್‌ನ ಸದಸ್ಯರುಗಳಾಗಿ ಹೋಗಿದ್ದರು. ಒಂದು ದಿವಸವೂ ಇದರ ಬಗ್ಗೆ ಚಕಾರವೆತ್ತಿದ್ದನ್ನು ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ಕೇಂದ್ರ ಸರ್ಕಾರದ ದುಡ್ಡು ಈ

ರಾಜ್ಯದ ನೀರಾವರಿ ಇಲಾಖೆಗೆ ಕೊಟ್ಟಿರುವಂಥಾದ್ದನ್ನು ನಾನು ಕೇಳಿರಲಿಲ್ಲ. ಈ ಕೀರ್ತಿ ಮಾನ್ಯ ದೇವೇಗೌಡರಿಗೆ ಸೇರತಕ್ಕಂಥಾದ್ದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿ ಮಾನ್ಯ ಯಡಿಯೂರಪ್ಪನವರಾಗಲಿ, ಮಾನ್ಯ ಧರ್ಮಸಿಂಗ್‌ರವರಾಗಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಮಾನ್ಯ ಸಿದ್ಧರಾಮಯ್ಯನವರೇ ಆಗಲಿ, ನೀರಾವರಿಯ ವಿಚಾರದಲ್ಲಿ ಅದು ಕೃಷ್ಣಾ ಭಾಗ್ಯ ಜಲ ನಿಗಮವಾಗಿರಲಿ, ಕಾರಂಜ ಡ್ಯಾಮ್ ಆಗಿರಲಿ, ಅಥವಾ ಈ ಭಾಗದ ಕಾವೇರಿ ನೀರಾವರಿ ನಿಗಮವಾಗಿರಲಿ, ಎಲ್ಲಕ್ಕೂ ನಮ್ಮ ರಾಜಕೀಯವನ್ನು ಮರೆತು, ಈ ರಾಜ್ಯಕ್ಕೆ ಈ ನಾಡಿನ ರೈತರ ಮಕ್ಕಳಿಗೆ ನಾವೆಲ್ಲರೂ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುವುದರಲ್ಲಿ, ನಾವೆಲ್ಲರೂ ಒಂದಾಗಿ, ಅದು ನಮ್ಮ ಆಂಧ್ರ ಪ್ರದೇಶಕ್ಕೆ ನಮ್ಮ ಪಾಲಿನ ನೀರನ್ನು ಬಿಟ್ಟು ಕೊಡುವುದಾಗಲಿ, ಅಥವಾ ತಮಿಳುನಾಡಿಗೆ ಬಿಟ್ಟು ಕೊಡುವುದಾಗಲಿ, ಇದರ ಬಗ್ಗೆ ನಮ್ಮ ಶಕ್ತಿಯನ್ನು ನಮ್ಮ ಒಗ್ಗಟ್ಟನ್ನು ಪ್ರದರ್ಶನ ಮಾಡಬೇಕು. ಇಲ್ಲಿ ನಾವು ಬರೀ ದೋಷಾರೋಪಣೆಯನ್ನು ಮಾಡುವುದರಿಂದ ಇದು ಆಗುವುದಿಲ್ಲವೆನ್ನುವಂತಹ ಮಾತನ್ನು, ನಾನು ನಿವೇದನೆ ಮಾಡಿ ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕದಲ್ಲಿ ನೀರಿನ ಬಗ್ಗೆ ಯಾರು ಕೆಲಸ ಮಾಡಿದ್ದಾರೆ, ಯಾರು ಕೆಲಸ ಮಾಡಲಿಲ್ಲ ಎಂದು ಚರ್ಚೆ ಮಾಡುವುದೇನೂ ಈಗ ಅಷ್ಟೊಂದು ಪ್ರಸ್ತುತವಲ್ಲ. ಅವರವರ ಕಾಲದಲ್ಲಿ ಎಲ್ಲರೂ ಕೆಲಸ ಮಾಡಿದ್ದಾರೆ. ಆವತ್ತಿನ ದಿವಸ ಇದ್ದಂಥ ಸಂಪನ್ಮೂಲಗಳನ್ನು ಆಧರಿಸಿ, ಆವತ್ತು ಈ ರಾಜ್ಯಕ್ಕೆ ಇದ್ದ ಶಕ್ತಿಯನ್ನು ನೋಡಿಕೊಂಡು ಮಾಡಿದ್ದಾರೆ. ದೇವೇಗೌಡರ ಕಾಲದಲ್ಲಿ, ನಾಗೇಗೌಡರು ಹಿತಾಸಕ್ತಿ ವಹಿಸದಿದ್ದರೆ, ಆಲಮಟ್ಟಿ ಅಣೆಕಟ್ಟು ಆ ಲೆವೆಲ್‌ಗೆ ಬರುತ್ತಿರಲಿಲ್ಲ ಎಂದು ನಾವೂ ಹೇಳಬೇಕಾಗುತ್ತದೆ. ಆಲಮಟ್ಟಿ ಡ್ಯಾಂ ಮಾಡೇ ಮಾಡುತ್ತೇವೆ ಎಂದು ಈ ಅಸೆಂಬ್ಲಿಯಲ್ಲಿ ಹೇಳಿ, ಅದನ್ನು ಅಷ್ಟೇ ಅಡಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಇಲ್ಲಿ ನಿಂತುಕೊಂಡು ಭಾಷಣ ಮಾಡಿದ್ದು ನಾಗೇಗೌಡರೇ. ಅವರು ಆವತ್ತು ಇಲ್ಲಿ ಪಣ ತೊಟ್ಟರು. ಅವರನ್ನೂ ನಾವು ನೆನೆಸಿಕೊಳ್ಳಬೇಕಾಗುತ್ತದೆ. ಕೆಲಸ ಮಾಡುವವರು ಇದ್ದಾರೆ. ಅವರು ಹೇಳಿದ ಹಾಗೆ, ನಿಜಲಿಂಗಪ್ಪನವರ ಕಾಲದಿಂದ ಮಾಡಿದ್ದಾರೆ. ಆದರೆ, ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, ಅವರು ಅಷ್ಟಾದರೂ ಮಾಡಿ ಹೋಗಿದ್ದಾರೆ, ಈಗ ನಾವು ನೀರನ್ನು

ಉಳಿಸಿಕೊಳ್ಳಬೇಕೆಂಬುದು. ನಾವು ಇಷ್ಟೆಲ್ಲಾ ಮಾಡಿದರೂ ಆಂಧ್ರ ಪ್ರದೇಶದವರು ಕೊಡಬೇಕಾಗಿರುವ 20 ಟಿ.ಎಂ.ಸಿ. ನೀರನ್ನು ತೆಗೆದುಕೊಂಡು ಹೋಗುತ್ತಾರೆ. ಅವರೇ ಡ್ಯಾಂ ಮಾಡಿಕೊಂಡು, ನಮಗೆ ಡೈವರ್ಟ್ ಮಾಡಿಕೊಡಬೇಕಾದಂಥ ನೀರನ್ನು ನಮಗೆ ಕೊಡುತ್ತಿಲ್ಲ. ಈಗ ಅವರು 21 ಯೋಜನೆಗಳನ್ನು ಮಾಡುತ್ತಿದ್ದಾರೆ, ಅದನ್ನು ತಕ್ಷಣ ತಡೆಯಬೇಕು ಎನ್ನುವುದು ಈಗ ನಮ್ಮ ಮುಂದಿರುವ ವಿಷಯ. ಈ ವಿಷಯದಲ್ಲಿ ಸರ್ಕಾರದವರು, ಎಲ್ಲಾ ಪಕ್ಷಗಳ ಒಂದು ಡೆಲಿಗೇಷನ್ನನ್ನು ದೆಹಲಿಗೆ ಕರೆದುಕೊಂಡು ಹೋಗಲು ಒಪ್ಪಿಕೊಂಡಿದ್ದಾರೆ. ಅದರೆ ಇಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡುವುದರಿಂದ ನಿಮಗೇನೂ ನಷ್ಟವಾಗುತ್ತದೆ ಎಂದು ನಾವು ಭಾವಿಸಿಲ್ಲ. ಸ್ವಾಭಿಮಾನಕ್ಕಾಗಿ, ಪ್ರತಿಷ್ಠೆಗೋಸ್ಕರವಾಗಿ ಈ ಶಾಸನಸಭೆಯನ್ನು ರಾತ್ರಿ 8 ಗಂಟೆ, 9 ಗಂಟೆಯವರೆಗೆ ತೆಗೆದುಕೊಂಡು ಹೋಗುವುದರ ಬದಲು ಇಲ್ಲಿ ಕುಳಿತುಕೊಂಡು ಒಂದು ತೀರ್ಮಾನ ಮಾಡುವುದು ಒಳ್ಳೆಯದು. ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಿ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಕನ್ವಿನ್ಸ್ ಮಾಡುವುದು, ಹೇಗಾದರೂ ಮಾಡಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿ ಕೊಡಲು ಹೋರಾಟ ಮಾಡುವುದಷ್ಟನ್ನು ಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಬಹಳ ಪ್ರಾಮುಖ್ಯವಾದಂಥ ವಿಚಾರದ ಬಗ್ಗೆ ನಿನ್ನೆಯಿಂದ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ದೆಹಲಿಯಲ್ಲಿ, ಲೋಕಸಭಾ ಸದಸ್ಯರಾದ ಅನಂತ ಕುಮಾರ್‌ರವರು, ಆಂಧ್ರದಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳ ಬಗ್ಗೆ ಪತ್ರಿಕೆಗಳಲ್ಲಿ ಹೇಳುತ್ತಾ, ಆಂಧ್ರದವರು 21 ಟೆಂಡರ್‌ಗಳನ್ನು ಕರೆದಿದ್ದಾರೆ, ಅದು ಕರ್ನಾಟಕ ಸರ್ಕಾರಕ್ಕೆ ಗೊತ್ತಿಲ್ಲ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ನಾವು ಇಲ್ಲಿ ಯಾರೂ ರಾಜಕೀಯವನ್ನು ಮಾಡುತ್ತಿಲ್ಲ. ನನಗನ್ನಿಸಿದ ಪ್ರಕಾರ, ಈ ಸರ್ಕಾರವಾಗಲೀ ಅಥವಾ ಯಾವುದೇ ರಾಜಕೀಯ ಪಕ್ಷವಾಗಲೀ ಆ ರೀತಿ ಮಾಡಿಲ್ಲ. ಆದರೆ, ತೀವ್ರತೆ ಇರಬೇಕು, ವೇಗ ಇರಬೇಕು ಎನ್ನುವುದು ಒಂದು ಅಂಶ. ನಾವು ಬಹಳ ಪ್ರಾಮಾಣಿಕವಾಗಿ ಯೋಚನೆ ಮಾಡುತ್ತಾ ಬಂದರೆ ವಿ.ಪಿ.ಸಿಂಗ್‌ರವರು ಪ್ರಧಾನಿಯಾದಾಗಿನಿಂದ ಇಂದಿನವರೆಗೂ ಕರ್ನಾಟಕಕ್ಕೆ ಯಾರೂ ಒಳ್ಳೆಯದನ್ನು ಮಾಡಿಲ್ಲ. ಅದು ಸ್ಪಷ್ಟ. ಅದು ಕಾವೇರಿ ಇರಬಹುದು ಅಥವಾ ಕೃಷ್ಣ ಇರಬಹುದು. ಪ್ರತಿಸಾರಿಯೂ ನಾವು ಪ್ರಧಾನ ಮಂತ್ರಿಗಳಿಗೆ ಹೆದರಿ, ಹೆದರಿ ಕಾವೇರಿ ನೀರನ್ನು ಬಿಟ್ಟಿದ್ದೇವೆ. ಅದರಲ್ಲಿ ಬೇರೆ ಮಾತಿಲ್ಲ. ತಮ್ಮ

ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ, ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ, ಬಹಳ ವೀರಾವೇಶದಿಂದ ಹೇಳಿದಂಥ ಈ ರಾಜ್ಯ ಮುಖ್ಯಮಂತ್ರಿಗಳಾಗಿದ್ದಂಥ ಅನೇಕರು, ದೆಹಲಿಗೆ ಹೋಗಿ ಬೇಕಾದ್ದು ಆಗಲಿ ನಾವು ನೀರು ಬಿಡುವುದಿಲ್ಲ, ಏನೇ ಆದರೂ ಚಿಂತೆಯಿಲ್ಲ ಎಂದು ಭಾರಿ ಭಾರಿ ಉದ್ದುದ್ದ ಭಾಷಣವನ್ನು ಈ ರಾಜ್ಯದ ಜನತೆಯ ಮುಂದೆ ಹೇಳಿ, ಕಣ್ಣೀರು ಸುರಿಸಿದಂಥವರು, ಕೊನೆಗೆ ಅಧಿಕಾರಕ್ಕೋಸ್ಕರವಾಗಿ ನೀರನ್ನು ಬಿಟ್ಟಿರತಕ್ಕಂಥಾದ್ದು ಸ್ಪಷ್ಟವಾದ ವಿಚಾರ. ಇತಿಹಾಸ ಬರೆಯುವಂಥ ಇತಿಹಾಸಕಾರರು ಅದನ್ನು ಬರೆದೇ ಬರೆಯುತ್ತಾರೆ. ಅದರಲ್ಲೇನೂ ಬೇರೆ ಮಾತಿಲ್ಲ. ಎರಡನೇಯದಾಗಿ, ನಮಗೆ ರಾಜಕೀಯ ಶಕ್ತಿ ಇಲ್ಲ, ಇವತ್ತಿನ ದಿವಸ ರಾಜಕೀಯ ಮುಖಂಡತ್ವ ಕೇಂದ್ರದಲ್ಲಿ ಇಲ್ಲ. ನಾನು ಅದನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ಕೇಂದ್ರದವರು ಯಾರಿಗೆ ಹೆದರಿದರು? ಕುಮಾರಿ ಜಯಲಲಿತಾರವರಿಗೆ ಹೆದರಿದರು, ಕರುಣಾನಿಧಿಯವರಿಗೆ ಹೆದರಿದರು, ಎನ್.ಟಿ.ರಾಮರಾಯರಿಗೆ ಹೆದರಿದರು, ಚಂದ್ರಬಾಬು ನಾಯ್ಡುರವರಿಗೆ ಹೆದರಿದರು. ಆದರೆ ಕರ್ನಾಟಕದ ಯಾರಿಗೂ ಹೆದರಲಿಲ್ಲ ಎನ್ನುವುದನ್ನು ತಮಗೆ ನಾನು ಸ್ಪಷ್ಟಪಡಿಸುತ್ತೇನೆ. ತಮಗೆ ನಾನು ಜ್ಞಾಪಿಸುತ್ತೇನೆ. ಹಿಂದೊಮ್ಮೆ ಜಯಲಲಿತಾರವರು ಸತ್ಯಾಗ್ರಹ ಮಾಡುತ್ತೇನೆ ಎಂದ ತಕ್ಷಣ, ಕೇಂದ್ರದಿಂದ ಜಲಸಂಪನ್ಮೂಲ ಸಚಿವರು ಎದ್ದುಬಿದ್ದು ರಾತ್ರಿ 12 ಗಂಟೆಗೆ ಓಡಿ ಬಂದರು. ಇದರ ಅರ್ಥ ಏನೆಂದರೆ, ಆ ರಾಜ್ಯದ ಬೆಂಬಲ ಪಡೆಯುವುದಕ್ಕೆ ಆ ರಾಜ್ಯದ ಮುಖ್ಯಮಂತ್ರಿಗಳ ಬೆಂಬಲ ಪಡೆಯುವುದಕ್ಕೆ ಎಲ್ಲಾ ಪ್ರಧಾನ ಮಂತ್ರಿಗಳು ಆ ರಾಜ್ಯಗಳವರಿಗೆ ಅನುಕೂಲ ಮಾಡಿದ್ದಾರೆ. ತಮಿಳುನಾಡಿನ ಬೆಂಬಲ ಪಡೆಯುವುದಕ್ಕೆ , ಆಂಧ್ರದ ಬೆಂಬಲ ಪಡೆಯುವುದಕ್ಕೆ ಅವರಿಗೆ ಅನುಕೂಲ ಮಾಡಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ನಾಡಿನ ಇಡೀ ಸಮಗ್ರ ಜನತೆ ಒಟ್ಟಾಗಿ ನಿಲ್ಲಬೇಕಾಗಿದೆ. ನಮಗೆ ಅನ್ಯಾಯವಾಗಿದೆ. ಕೃಷ್ಣಾದಲ್ಲಿ ನಿಜವಾಗಿ ಅನ್ಯಾಯವಾಗುತ್ತಿದೆ. ಹೆಜ್ಜೆಹೆಜ್ಜೆಗೂ ಅನ್ಯಾಯವಾಗುತ್ತಿದೆ. ತೆಲಗು ಗಂಗಾ ಯೋಜನೆಯಲ್ಲಿ ಅನ್ಯಾಯವಾಯಿತು. ಹೀಗೆ ಎಲ್ಲಾ ವಿಚಾರಗಳಲ್ಲಿ ಅನ್ಯಾಯ ಮಾಡಿದ್ದಾರೆ. ಎನ್.ಟಿ.ರಾಮರಾಯರ ಕಾಲದಲ್ಲಿ ಅನ್ಯಾಯ ಮಾಡಿದ್ದಾರೆ. ಚಂದ್ರಬಾಬು ನಾಯ್ಡುರವರೂ ಅನ್ಯಾಯ ಮಾಡಿದ್ದಾರೆ. ಈಗ ರೆಡ್ಡಿಯವರೂ ಅನ್ಯಾಯ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ನಾವು ನಿನ್ನೆಯೆಲ್ಲಾ ಚರ್ಚೆ ಮಾಡಿದ್ದೇವೆ. ಮುಖ್ಯಮಂತ್ರಿಗಳ ಬಗ್ಗೆ ನನ್ನದೇನೂ ಆಕ್ಷೇಪಣೆಯಿಲ್ಲ. ಆದರೆ ನಮ್ಮ ಅಭಿಪ್ರಾಯವೇನೆಂದರೆ, ತೀವ್ರತೆ, ವೇಗೆ ಸ್ವಲ್ಪ ಜಾಸ್ತಿ ಇರಬೇಕು ಎನ್ನುವುದು.

ಇದು ನಮ್ಮ ಅವರ ಪ್ರತಿಷ್ಠೆಯಾಗಿದ್ದು, ಈಗ ನಾವು ಎಲ್ಲಿ ಕುಳಿತಿದ್ದೇವೆ ಎಂದರೆ, ಇದರ ವೇಗ ಜಾಸ್ತಿಯಾಗಬೇಕು. ಪ್ರಧಾನ ಮಂತ್ರಿಗಳ ಬಳಿಗೆ ಸರ್ವ ಪಕ್ಷಗಳ ಒಂದು ನಿಯೋಗ ಹೋಗಲು ನಿನ್ನೆ ಸರ್ಕಾರ ಒಪ್ಪಿದೆ. ಇದು ಸ್ವಾಗತಾರ್ಹ. ನನ್ನ ದೃಷ್ಟಿಯಲ್ಲೂ ಸಹ ಸರ್ವ ಪಕ್ಷಗಳ ನಿಯೋಗ ಹೋಗಬೇಕು. ಅದರಲ್ಲೇನೂ ಬೇರೆ ಮಾತಿಲ್ಲ. ಆದರೆ, ಶ್ರೀಮಾನ್ ಯಡಿಯೂರಪ್ಪನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಈ ಬಗ್ಗೆ ಒಂದು ನಿರ್ಣಯ ಮಾಡೋಣ ಎನ್ನುವ ಮಾತನ್ನು ಮುಂದಿಟ್ಟಿದ್ದಾರೆ. ನನಗನ್ನಿಸುತ್ತದೆ, ನಿರ್ಣಯ ಮಾಡುವುದರಿಂದ ಏನೂ ತಪ್ಪಾಗುವುದಿಲ್ಲ, ಇದನ್ನು ಸರ್ವರೂ ಒಪ್ಪಬೇಕು ಮತ್ತು ಒಪ್ಪತಕ್ಕಂಥ ಪ್ರಶ್ನೆಯಾಗಿದೆ. ಆದರೆ ನಿರ್ಣಯವನ್ನೇ ಮಾಡಲಿಲ್ಲವೆಂದು, ನೀವು ಸರ್ಕಾರದವರು ಆಂಧ್ರದ ಪರವಿದ್ದೀರಿ ಎಂದಾಗಲೀ ನಾವು ಹೇಳುತ್ತಿಲ್ಲ. ಇವತ್ತು ನಾವು ಆಂಧ್ರದ ವಿರುದ್ಧ ನಿಲ್ಲಬೇಕು. ಆಂಧ್ರದ ವಿರುದ್ಧ ನಿಲ್ಲಲು ರಸ್ತೆಗೆ ಇಳಿಯಬೇಕಾಗಿದೆ. ಈ ನಾಡಿನ ಜನತೆಗೆ, ಎಲ್ಲೋ ಒಂದು ಕಡೆ, ಇವರು ಕಾವೇರಿಯ ಬಗ್ಗೆ ಹೋರಾಟ ಮಾಡಿದರು, ಕೃಷ್ಣಾ ಬಗ್ಗೆ ಹೋರಾಟ ಮಾಡಲಿಲ್ಲ ಎನ್ನುವ ಭಾವನೆ ಇದೆ. ಇವತ್ತು ಕೃಷ್ಣಾ ವಿಚಾರದಲ್ಲಿ, ಇಡೀ ಕರ್ನಾಟಕದ 27 ಜಿಲ್ಲೆಗಳ ಐದು ಕೋಟಿ ಸಮಗ್ರ ಜನರೂ ಒಂದೇ ಭಾವನೆಯಲ್ಲಿ, ಈ ರಾಜ್ಯದ ಹಿತವನ್ನು ಕಾಪಾಡುವುದಕ್ಕೋಸ್ಕರ, ಸ್ಪಷ್ಟವಾಗಿ ನಿಮ್ಮ ಜೊತೆ ನಿಲ್ಲುತ್ತೇವೆ ಎನ್ನತಕ್ಕಂಥ ಮಾತನ್ನು ನಾವು ಸರ್ಕಾರಕ್ಕೆ ಹೇಳುತ್ತೇವೆ. ಇನ್ನು ಮುಂದೆ ನಿಮ್ಮ ಹೋರಾಟದಲ್ಲಿ ನಾವಿರುತ್ತೇವೆ ಎಂದು ಸರ್ಕಾರ ಜನತೆಗೆ ಹೇಳಬೇಕು. ಸರ್ವಪಕ್ಷಗಳ ನಿಯೋಗ ಯಾವಾಗ ಹೋಗುತ್ತದೆ ಎಂಬುದನ್ನು ಹೇಳಬೇಕು. ಸರ್ವ ಪಕ್ಷಗಳ ನಿಯೋಗ ದೆಹಲಿಗೆ ಹೋಗಿ, ಪ್ರಧಾನ ಮಂತ್ರಿಗಳಲ್ಲಿ ನಾವು ಮನವಿ ಸಲ್ಲಿಸಿಯೂ ವಿಫಲವಾದೆವೆಂದು ಇಟ್ಟುಕೊಳ್ಳಿ. ಆಗ ತಕ್ಷಣ ಒಂದು ದಿವಸ ತುರ್ತು ಶಾಸನಸಭೆಯನ್ನು ಕರೆಯಬೇಕೆಂದು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ತುರ್ತು ಶಾಸನಸಭೆಯನ್ನು ಕರೆದು, ಅಲ್ಲಿ ನಮ್ಮ ನಿರ್ಧಾರಗಳೇನು, ಮುಂದೆ ನಾವು ಯಾವ ರೀತಿ ಹೋಗಬೇಕು ಎನ್ನುವ ನಿರ್ಧಾರಕ್ಕೆ ತಾವು ಮುಂದಾಗಬೇಕು ಎಂದು ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಸರ್ವಪಕ್ಷಗಳ ನಿಯೋಗ ತಕ್ಷಣ ಹೋಗಬೇಕು. ಈಗ ಆಂಧ್ರದವರು ಟೆಂಡರ್ ಕರೆದಿದ್ದಾರೆ. ಅದನ್ನು ನಿಲ್ಲಿಸಬೇಕಾಗುತ್ತದೆ. ಅದನ್ನು ನಿಲ್ಲಿಸಲಿಲ್ಲವೆಂದರೆ ನಾವೇನು ಮಾಡಬೇಕೆಂದು ಯೋಚನೆ ಮಾಡಬೇಕು. ಇವತ್ತು ಬಹಳ ಪ್ರಾಮುಖ್ಯವಾಗಿ

ಮಾಡಬೇಕಾದುದೆಂದರೆ, ನಮ್ಮ ರಾಜ್ಯದ ಲೋಕಸಭಾ ಸದಸ್ಯರುಗಳು ಕೇಂದ್ರದ ಮೇಲೆ ಪ್ರತಿಭಟನೆ ಮಾಡಬೇಕು, ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುತ್ತೇವೆಂದು ಎಚ್ಚರಿಕೆ ಕೊಡಬೇಕು, ಆಂಧ್ರದವರು ನಿಲ್ಲಿಸಲಿಲ್ಲವೆಂದರೆ ನಾವು ರಾಜೀನಾಮೆ ಕೊಡುತ್ತೇವೆಂದು ಪ್ರಧಾನ ಮಂತ್ರಿಗಳಿಗೆ ಹೇಳಬೇಕು. ನಮ್ಮ ಕೇಂದ್ರದ ಮಂತ್ರಿಗಳು ರಾಜೀನಾಮೆ ಕೊಡುತ್ತೇವೆಂದು ಹೇಳಬೇಕು. ಮೊದಲು, ವೆಂಕಯ್ಯ ನಾಯ್ಡುರವರು ರಾಜೀನಾಮೆ ಕೊಡಬೇಕು. ಏಕೆಂದರೆ, ವೆಂಕಯ್ಯನಾಯ್ಡುರವರು ಆಂಧ್ರದವರು. ವೆಂಕಯ್ಯನಾಯ್ಡುರವರನ್ನು ನಾವು ನಮ್ಮ ಪರವಾಗಿ ರಾಜ್ಯಸಬೆಗೆ ಕಳುಹಿಸಿದ್ದೇವೆ. ಆಂಧ್ರದವರು ಅವರಿಗೆ ಓಟು ಕೊಡಲಿಲ್ಲ, ಆಂಧ್ರದವರು ಅವರನ್ನು ರಾಜ್ಯಸಭೆಗೆ ಕಳುಹಿಸಲಿಲ್ಲ. ಅವರನ್ನು ರಾಜ್ಯಸಭೆಗೆ ಕಳುಹಿಸಿದವರು ನಾವು. ಒಂದು ಕಡೆ, ರಾಮಸ್ವಾಮಿಯವರನ್ನು ಕಳುಹಿಸಿದ್ದೇವೆ. ಒಂದು ಕಡೆ ವೆಂಕಯ್ಯನಾಯ್ಡುರವರನ್ನು ಕಳುಹಿಸಿದ್ದೇವೆ. ಕಾವೇರಿ ವಿಷಯದಲ್ಲಿ ರಾಮಸ್ವಾಮಿಯವರು ರಾಜೀನಾಮೆ ಕೊಡಬೇಕು, ಕೃಷ್ಣಾ ಬಗ್ಗೆ ವೆಂಕಯ್ಯನಾಯ್ಡುರವರು ರಾಜೀನಾಮೆ ಕೊಡಬೇಕು. ಇವರು ಕರ್ನಾಟಕದ ಋಣವನ್ನು ಅನುಭವಿಸಿದ್ದರೆ, ಕರ್ನಾಟಕದ ಮತವನ್ನು ಪಡೆದು ಇವರು ರಾಜ್ಯ ಸಭಾ ಸದಸ್ಯರಾಗಿದ್ದಾರೆ. ಇವರಿಬ್ಬರನ್ನೂ ರಾಜ್ಯಸಭೆಗೆ ತಂದದ್ದು ನಿಜಕ್ಕೂ ಒಳ್ಳೆಯದಲ್ಲ. ತಂದು ಆಗಿಹೋಗಿದೆ, ಅನಾಹುತ ನಡೆದು ಹೋಗಿದೆ; ಅದು ಸರಿಹೋಗಬೇಕು ಎನ್ನುವುದಾದರೆ, ಅವರಿಗೆ ನೇರವಾಗಿ ಹೇಳುತ್ತಿದ್ದೇನೆ, ಅವರಿಗೆ ಈ ರಾಜ್ಯದ ಬಗ್ಗೆ ಚಿಂತನೆ ಇದ್ದರೆ ಕೂಡಲೇ ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದು ಸ್ಪಷ್ಟ. ಇಷ್ಟನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್) : ಸನ್ಮಾನ್ಯ ಉಪಾಧ್ಯಕ್ಷರೇ, ಈಗೇನು ಕೃಷ್ಣಾ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ, ಅದನ್ನೇ ನಾನು ಮಾತನಾಡುವುದು ಅಷ್ಟು ಸಮಂಜಸವಾಗುವುದಿಲ್ಲ. ರೂಲಿಂಗ್ ಪಾರ್ಟಿಗೆ, ಸಿ.ಎಂ.ಗೆ ನಿಜವಾಗಿ ಕರ್ನಾಟಕದ ಮೇಲೆ ಅಭಿಮಾನವಿದೆ. ಕೃಷ್ಣಾ ನೀರಿನ ವಿಚಾರದಲ್ಲಿ ಏನು ಮಾಡಬೇಕೋ ಅದನ್ನು ಮಾಡಲೇಬೇಕು. ನಮ್ಮ ರಾಜ್ಯದ ನೀರನ್ನು ನಾವು ಯಾರಿಗೂ ಬಿಟ್ಟುಕೊಡಬಾರದು ಎನ್ನುವುದು ಲಾ ಮಿನಿಸ್ಟರ್‌ಗೂ ಗೊತ್ತಿದೆ. ನಾವು ಎಲ್ಲಿ ಬಿಟ್ಟುಕೊಟ್ಟಿದ್ದೇವೆ ಎಂದರೆ, ತಮಿಳುನಾಡಿನವರಿಗೂ ರಾಜ್ಯಸಭಾ ಸೀಟನ್ನು ಬಿಟ್ಟುಕೊಟ್ಟಿದ್ದೇವೆ, ಆಂಧ್ರದವರಿಗೂ ರಾಜ್ಯಸಭಾ ಸೀಟನ್ನು ಬಿಟ್ಟುಕೊಟ್ಟಿದ್ದೇವೆ. But I request the respectful Chief Minister never put us down regarding

the Krishna Water. ಈಗ ತಾವೇನು ರೆಸಲ್ಯೂಷನ್ ಮಾಡಬೇಕೆಂದಿದ್ದೀರಿ,ಅದನ್ನು ಮಾಡಿ. ಆದರೆ ರೆಸಲ್ಯೂಷನ್ ಪಾಸ್ ಮಾಡುವ ಟೈಂನಲ್ಲಿ it is a sensitive matter ಎನ್ನುವುದನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಇದನ್ನು ನಿಜವಾಗಿಯೂ ಯೋಚನೆ ಮಾಡಬೇಕು. ಆಂಧ್ರದವರು ಮಾಡಿದ್ದಾರೆ, ಅದಕ್ಕಾಗಿ ನಾವು ರೆಸಲ್ಯೂಷನ್ ಮಾಡಬೇಕೆಂದರೆ, it is a sensitive matter. Take the suggestions of all party leaders. We are with you and we will stand for you. ಆದರೆ ರೆಸಲ್ಯೂಷನ್ ಮಾಡುವ ಟೈಂನಲ್ಲಿ ಮುಖ್ಯಮಂತ್ರಿಗಳು ಇನ್ನೊಂದು ಸಲ ಚಿಂತನೆ ಮಾಡಬೇಕು. ರೆಸಲ್ಯೂಷನ್ ಮಾಡಿದ ಮಾತ್ರಕ್ಕೆ, ಕರ್ನಾಟಕ ಸರ್ಕಾರ ನೀರಿನ ವಿಷಯದಲ್ಲಿ ಫೈಟ್ ಮಾಡುತ್ತದೆ ಎಂದೇನೂ ಅಲ್ಲ. ಅದರಲ್ಲಿ ಬ್ಯಾಕ್ ಫೈಂಟಿಂಗ್ಸ್ ಏನಿದೆ, ಐದು ಕೋಟಿ ಜನರಿಗೆ ಯಾವ ರೀತಿ ಅನುಕೂಲವಾಗುತ್ತದೆ, ರೈತರಿಗೆ ಯಾವ ರೀತಿ ಅನುಕೂಲವಾಗುತ್ತದೆ ಎಂಬುದನ್ನು ನೋಡಬೇಕು. ಕೇಂದ್ರ ಸರ್ಕಾರದವರು ಇವತ್ತು ತಮಿಳುನಾಡಿಗೆ ಸಪೋರ್ಟ್ ಮಾಡಬೇಕಾದರೆ ಅದಕ್ಕೆ ಕಾರಣ, ಆ ರಾಜ್ಯದಿಂದ 12 ಮಿನಿಸ್ಟರ್‌ಗಳು ಕೇಂದ್ರದಲ್ಲಿದ್ದಾರೆ. ನಮ್ಮ ಕಡೆ ಎಷ್ಟು ಮಿನಿಸ್ಟರ್ ಇದ್ದಾರೆ? ಅವರು ಅದನ್ನು ಚಿಂತನೆ ಮಾಡುತ್ತಾರೆ. ಆವತ್ತು ಆಂಧ್ರದವರು ಮೆಜಾರಿಟಿ ಇದ್ದರು, ಆಗ ಅವರಿಗೆ ಸಹಾಯ ಮಾಡಿದರು. ಆದರೆ ನೀವು, ನಮಗೆ ಮೆಜಾರಿಟಿ ಇಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ. ರಾಜ್ಯದ ಐದು ಕೋಟಿ ಜನ ನಿಮ್ಮ ಹಿಂದುಗಡೆ ಇದ್ದಾರೆ. We are with you. The political parties are behind you. You have taken a decision to meet the Prime Minister. Before that, make a strong report to the Central Government. We have to solve the problem smoothly to get benefit for our people. We have to get the benefit. It is a sensitive matter. ನಮ್ಮ ಜನಗಳಿಗೆ ಅನುಕೂಲವಾಗಲೇ ಬೇಕು. ಆದರೆ ಯಾವ ರೀತಿಯಲ್ಲಿ ಎಂಬುದನ್ನು ಯೋಚನೆ ಮಾಡಬೇಕು. ಬರೀ ಪಬ್ಲಿಸಿಟಿಗೋಸ್ಕರ ನಾವೂ ಹೋರಾಟ ಮಾಡಿದೆವು, ಇಷ್ಟು ಜನ ಸತ್ತರು ಎಂದು ಹೇಳುವುದಲ್ಲ. ನಮಗೆ ನೀರು ಬೇಕು, ಅದರಿಂದ ನಮಗೆ ಅನುಕೂಲವಾಗಬೇಕು. Throughout India ದಲ್ಲಿ ಇರುವ ಎಲ್ಲಾ ನದಿಗಳನ್ನು ಸೇರಿಸಬೇಕೆಂದು ಒಂದು ಕಡೆ ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಲ್ಲಿ ನಮ್ಮವರು ಪ್ರಧಾನ ಮಂತ್ರಿಗಳಾಗಿದ್ದಾರೆ, ರೆಡ್ಡಿ ಗವರ್ನಮೆಂಟ್ ಇದೆ, ಆದ್ದರಿಂದ ನಾವು ಕೃಷ್ಣಾ ನದಿ ನೀರನ್ನು ಆಂಧ್ರಕ್ಕೆ ಬಿಟ್ಟುಕೊಡುತ್ತೇವೆ ಎಂದು ಕರ್ನಾಟಕದ ಮುಖ್ಯಮಂತ್ರಿಗಳು

ಹೇಳುವುದಕ್ಕಾಗುತ್ತದೆಯೇ? ಅವರ post ಹೋದರೂ ಸರಿ, ನಮ್ಮ ಹೆಸರು ಕರ್ನಾಟಕ ರಾಜ್ಯದಲ್ಲಿ ಇರಬೇಕೆಂದು ಶ್ರೀಮಾನ್ ದೇವೇಗೌಡರ ಕಾಲದಲ್ಲಿ ಅವರ ಮುಂದಿನ ಕಾಲದಲ್ಲಿ ಯಾವ ಯಾವ .Chief Minister ಗಳು ಬರುತ್ತಾರೋ, ಯಾರೂ ನಮ್ಮ ರಾಜ್ಯದ ನೀರನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲ. ಬಿಡುವುದೂ ಇಲ್ಲ. ಬಿಟ್ಟುಕೊಟ್ಟರೆ ಅವರ ಗೌರವವೇ ಹೋಗುತ್ತದೆನ್ನುವುದು ಅವರಿಗೂ ಗೊತ್ತಿದೆ. Take the Delegation of the House. Meet the Prime Minister and sort it out smoothly. We will be with you ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಸಭೆ ಕರೆದು ಪ್ರಧಾನಮಂತ್ರಿಗಳ ಹತ್ತಿರಕ್ಕೆ ಸರ್ವಪಕ್ಷ ನಿಯೋಗ ಹೋಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ. ಇದು ಎರಡು ರಾಜ್ಯಗಳ ಮಧ್ಯೆ ಇರುವ ಸಮಸ್ಯೆ. ನಾವು ಬಹಳ ಎಚ್ಚರಿಕೆಯಿಂದ ಹೆಜ್ಜೆ ಹಾಕಬೇಕಾಗುತ್ತದೆ. ಇನ್ನು 'ಬಿ' ಸ್ಕೀಂನ ನೀರಿನ ಬಗ್ಗೆ ಇನ್ನೊಂದು ಕಮಿಟಿ ಆಗಬೇಕಾಗಿದೆ. ಅದಕ್ಕೆ ಇನ್ನೂ ಸ್ಪಷ್ಟವಾದಂಥ ತೀರ್ಪು ಕೊಟ್ಟಿಲ್ಲ. ಕೊಡದಿರತಕ್ಕಂಥ ಈ ಸಂದರ್ಭದಲ್ಲಿ ನಾವು ಎಚ್ಚರಿಕೆಯನ್ನು ತಪ್ಪಿ ಏನಾದರೂ ಹೆಜ್ಜೆ ಹಾಕಿದರೆ ನಮಗೆ ಅನಾನುಕೂಲವಾಗುವಂಥ ಪರಿಸ್ಥಿತಿ ಕೂಡ ಆಗಬಹುದು. ನಾವು ಸರ್ವಪಕ್ಷ ನಿಯೋಗ ಪ್ರಧಾನಮಂತ್ರಿಗಳ ಹತ್ತಿರ ಹೋಗಬೇಕೆಂದು ಈಗಾಗಲೇ ಒಂದು ತೀರ್ಮಾನವನ್ನು ಮಾಡಿದ್ದೇವೆ. ಪ್ರಧಾನಮಂತ್ರಿಗಳ ಹತ್ತಿರ ಹೋಗೋಣ. ಮತ್ತೆ ಕೇಂದ್ರ ಸರ್ಕಾರದ ಬೇರೆ ಬೇರೆ ಸಂಬಂಧ ಪಟ್ಟವರನ್ನು ಭೇಟಿ ಆಗೋಣ ಇದು ಗೋದಾವರಿ ಬೇಸಿನ್‌ನಿಂದ ನಮಗೆ ಬರಬೇಕಾಗಿರುವ 20 ಟಿಎಂಸಿ ನೀರನ್ನು ಆಂಧ್ರಪ್ರದೇಶದವರು ಕಬಳಿಸಲಿಕ್ಕೆ ಮಾಡಿರತಕ್ಕಂಥ ಹುನ್ನಾರ ಇದಾಗಿದೆ ಎಂದು ನಿನ್ನೆ ಕೂಡ ನಾನು ಮಾತನಾಡುವಾಗ ಹೇಳಿದ್ದೆ. ಇದನ್ನು ನಾವು ಮುಖ್ಯವಾಗಿ ಗಮನಿಸ ಬೇಕಾಗಿರತಕ್ಕಂಥದ್ದು. ಮತ್ತೆ ಈ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ, ಅವರೇನು ಈಗ ಟೆಂಡರ್ ಕರೆದಿದ್ದಾರೆ ಇವೆಲ್ಲಾ ಪ್ರಶ್ನೆಗಳು ಉಂಟು. ಹಾಗಾಗಿ ನಮ್ಮ ಕರ್ನಾಟಕ ರಾಜ್ಯದ ನೀರಿನ ಪಾಲನ್ನು ನಾವು ಯಾವುದೇಕಾರಣಕ್ಕೂ ಬಿಟ್ಟುಕೊಡತಕ್ಕಂಥ ಪ್ರಶ್ನೆ ಇಲ್ಲ. ಆದರೆ ಅದೇ ಸಂದರ್ಭದಲ್ಲಿ ನಾವು ಇನ್ನೊಬ್ಬರ ಹಕ್ಕಿನ ಮೇಲೆ ಕೂಡ ಧಾಳಿ ಮಾಡುವುದಕ್ಕಾಗುವುದಿಲ್ಲ. ನಾವು ಇದನ್ನು ಎಚ್ಚರಿಕೆಯಿಂದ ನೋಡಬೇಕು ಮತ್ತು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ನಮ್ಮ ಪಾಲಿನ ನೀರಿಗೆ ಧಕ್ಕೆ ಬರದ

ಹಾಗೆ ಮತ್ತು ಎರಡು ರಾಜ್ಯಗಳ ಸಂಬಂಧಕ್ಕೆ ಧಕ್ಕೆ ಬರದ ಹಾಗೆ ನಾವು ಒಕ್ಕೂಟ ಸ್ವರೂಪದ ದೇಶದಲ್ಲಿರತಕ್ಕಂಥವರು. ಆ ಎರಡೂ ಪ್ರಶ್ನೆಗಳನ್ನು ನಾವು ನೋಡಬೇಕು. ಹಾಗಾಗಿ ನಮ್ಮ ನೀರನ್ನು ಪಡೆಯತಕ್ಕಂಥದ್ದು ಖಚಿತ. ಅದರಲ್ಲಿ ಯಾವುದೇ ರಾಜಿ ಮಾಡಿಕೊಳ್ಳತಕ್ಕಂಥ ಪ್ರಶ್ನೆ ಇಲ್ಲ ಮತ್ತು ನಾವು ನೀರನ್ನು ಬಿಟ್ಟುಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಅದನ್ನು ಬಿಡಬಾರದು. ಆದರೆ ಅದೇ ಸಂದರ್ಭದಲ್ಲಿ ನಾವು ಎಚ್ಚರಿಕೆಯಿಂದ ಹೋಗಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ನೀರನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ಮುಂದೆ ತೀರ್ಪು ಬರಬೇಕಾಗಿದೆ. ಆ ತೀರ್ಪು ಇನ್ನೂ ಬಂದಿಲ್ಲ. ಬರದಿರತಕ್ಕಂಥ ಈ ಸಂದರ್ಭದಲ್ಲಿ ನಾವು ಇಲ್ಲಿ ಬೇರೆ ಬೇರೆ ರೀತಿಯಾದಂಥ ಕ್ರಮಗಳನ್ನು ತೆಗೆದುಕೊಂಡರೆ ಅದು ನಮ್ಮ ಮೇಲೆ negative ಆದ ಪರಿಣಾಮ ಬೀರತಕ್ಕಂಥ ಸಾಧ್ಯತೆ ಇದೆ. ಅದಕ್ಕೆ ಅವಕಾಶ ಮಾಡಿಕೊಡಬಾರದೆನ್ನುವುದು ನಮ್ಮ ಅಭಿಪ್ರಾಯವಾಗಿದೆ. ಆ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳಬೇಕು ಮತ್ತು ರಾಜ್ಯಸರ್ಕಾರ ಅದಕ್ಕೆ ದೃಢವಾದಂಥ ಹೆಜ್ಜೆಯನ್ನಿಟ್ಟು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದು ನಮ್ಮ ಪಾಲಿನ ನೀರನ್ನು ಉಪಯೋಗಿಸತಕ್ಕಂಥ ಪ್ರಯತ್ನವನ್ನು ನಾವು ಮಾಡಲೇ ಬೇಕು ಎನ್ನತಕ್ಕಂಥದ್ದು ನಮ್ಮ ವಾದ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಉಪಾಧ್ಯಕ್ಷರೆ, ಆಂಧ್ರಪ್ರದೇಶದವರು ಕೆಲವು ಕಾಮಗಾರಿಗಳಿಗೆ ಟೆಂಡರ್ call for ಮಾಡಿದ್ದಾರೆಂದು ಈ ಹೊಸ ವಿಷಯವನ್ನು ನಿನ್ನೆಯಿಂದ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಇದು ಹೊಸ ವಿಷಯವೇನೂ ಅಲ್ಲ. ಬಚಾವತ್ ಟ್ರಿಬ್ಯುನಲ್ ಸ್ಥಾಪನೆಯಾಗುವುದಕ್ಕೆ ಮೊದಲಿನಿಂದಲೂ, ಆ ನಂತರವೂ ಕೂಡ ಇಂಥ ಅನೇಕ ಯೋಜನೆಗಳಿಗೆ Central Planning Clearance ಇಲ್ಲ, Ecology Department ನಿಂದ clearance ಇಲ್ಲ. Forest clearance ಹೀಗೆ ಯಾವ clearance ಇಲ್ಲದೆ ಅನೇಕ ಯೋಜನೆಗಳನ್ನು ಮಾಡಿಕೊಂಡಿದ್ದಾರೆ. ಇವೆಲ್ಲ ಕಳೆದ 30 ವರ್ಷಗಳಿಂದ ನಡೆಯುತ್ತಲೇ ಬಂದಿದೆ. ಇದು ಹೊಸ ಘಟನೆಯೋನೂ ಅಲ್ಲ. ಆದರೆ ಪ್ರತಿ ಸಲ ನಮ್ಮಲ್ಲಿಯ ಎಲ್ಲಾ ಸರ್ಕಾರಗಳಿಂದ ನಾವು ಅವರನ್ನು ತಡೆಯಲಿಕ್ಕೆ ವಿಫಲರಾಗಿದ್ದೇವೆ. ಕೇಂದ್ರ ಸರ್ಕಾರದ ಮೇಲೆ ನಮ್ಮ ರಾಜ್ಯದ ಪ್ರಭಾವವಿಲ್ಲ. ಆಲಮಟ್ಟಿಯಲ್ಲಿ 524 ಮೀಟರ್

ಎತ್ತರದ ಗೇಟ್ ತಯಾರಾದದ್ದು. ಆ ಗೇಟ್ permission ಅನ್ನು Central Government ನವರು ಕೊಟ್ಟಿದ್ದಾಗಿದೆ. ಕೆಲವು import ಮಾಡಿದರು ಕೇಂದ್ರ ಸರ್ಕಾರದವರು ಆ import ಗೆ permission ಕೊಟ್ಟರು. ಅಷ್ಟೆಲ್ಲಾ ಆದಮೇಲೂ ಕೊನೆಗೆ ಆ gate cut ಮಾಡಬೇಕೆನ್ನತಕ್ಕಂಥದ್ದು ಜಗತ್ತಿನ ಇತಿಹಾಸದಲ್ಲಿ ಎಲ್ಲೂ ಇಲ್ಲ. Gate ತಯಾರುಮಾಡಿ ಅದನ್ನು ಕೂಡಿಸುವ ಕಾಲಕ್ಕೆ Supreme Court ನವರು atleast, gate ಇರಲಿ, ಆದರೆ ನೀರನ್ನು ಹೆಚ್ಚಿಗೆ ಹಿಡಿದಿಟ್ಟುಕೊಳ್ಳಬೇಡಿ ಎಂದು ಹೇಳಬಹುದಾಗಿತ್ತು. Gate cut ಮಾಡಲಿಕ್ಕೆ ಹೋದರು. 5 ಮೀಟರ್ gate ಅನ್ನೇ cut ಮಾಡಿದರು. ಇಷ್ಟೆಲ್ಲಾ ತಾಳಿಕೊಂಡು ಬಂದಿದ್ದೇವೆ. ತೆಲುಗುಗಂಗಾ 150 ಟಿಎಂಸಿ ಯೋಜನೆ ತಯಾರಾಯಿತು. ಶ್ರೀಶೈಲಂ Left Bank Canal, ನಾಗಾರ್ಜುನ ಯೋಜನೆ ಇಂಥ ಅನೇಕ ಯೋಜನೆಗಳು ಆಗುತ್ತಾ ಬಂದಿವೆ. ಇದು ಹೊಸದೇನೋ ಆಗುತ್ತಿದೆ ನಮ್ಮ ಮೇಲೆ ಅನ್ಯಾಯ ಎಂಬುದು ಇವತ್ತು ಆ ಜನರಿಗೆ ತೋರಿಸಿಕೊಡುತ್ತಿದ್ದೇವೆ. ಇದು ಹೊಸದೇನೂ ಅಲ್ಲ. ಮತ್ತೆ delegation ಹೋಗುವುದು, memorandum ಕೊಡುವುದು ಇದು ಹೊಸದೇನೂ ಅಲ್ಲ. ಪ್ರತಿಯೊಂದಕ್ಕೂ formalities ಗೆ ಹೋಗುವುದು, delegation ಮುಖಾಂತರ ಹೋಗಿ Prime Minister ಗೆ ಕೊಡುವುದು, ಅದನ್ನು ಅವರು ತೆಗೆದುಕೊಂಡು dustbinಗೆ ಒಗೆದು ಬಿಡುವುದು. ನಮ್ಮ ರಾಜ್ಯದವರು delegation ಮುಖಾಂತರ ಕೊಟ್ಟ ಎಲ್ಲಾ memorandum ಗಳನ್ನು ಕೇಂದ್ರ ಸರ್ಕಾರದವರು dustbin ಗೆ ಒಗೆದುಬಿಡುತ್ತಾರೆ. ನಾವು ಅಲ್ಲಿಂದ ಹೊರಟುಬರುತ್ತೇವೆ. ಆ ದೃಷ್ಟಿಯಿಂದ ಮತ್ತೆ delegation ಹೋಗುವುದು ಬೇಡ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಆ ತರಹ ಸ್ವಲ್ಪ seriousness ಬರಲಿ ಎಂದು ಒಂದು resolution ಮಾಡೋಣ. ನಾನು ಹೇಳುವುದೇನೆಂದರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಕರ್ನಾಟಕ ಬಂದ್ ಆಚರಿಸಬೇಕು. ಇದನ್ನು ಮಾನ್ಯ ಬಂಗಾರಪ್ಪನವರು ಒಂದು ಕಾಲದಲ್ಲಿ ಮಾಡಿದ್ದರು. ಇದು peoples movement ಅನ್ನಿಸಬೇಕು. ಹಾಗೆ ಮಾಡಿ ಆನಂತರ ಬೇಕಾದರೆ delegation ತೆಗೆದುಕೊಂಡು ಹೋಗಿ. ಇಲ್ಲದಿದ್ದರೆ ಇದು ಒಂದು formalities ಆಗುತ್ತದೆ. ಪ್ರತಿಯೊಂದು ವಿಷಯಕ್ಕೂ delegation ಹೋಗಿ memorandum ಕೊಟ್ಟು ಬರುವುದು, ಅವರು ಅದನ್ನು dustbin ಗೆ ಒಗಿದುಬಿಡುವುದು, ನಾವು

ಏನೂ ಮಾಡುವುದಿಲ್ಲ. ಹೋಗಲಿ, ನಮ್ಮ ಸರ್ಕಾರ ಬಂದ ಮೇಲೆ ಬಹಳಷ್ಟು ಸಲ delegation ಹೋಗಿ memorandum 371 ಗೆ ಕೊಟ್ಟು ಬಂದಿದ್ದೆವು. ಆದರೆ ಅದು ಏನೂ ಆಗಲಿಲ್ಲ. ಆ ದೃಷ್ಟಿಯಿಂದ ಇಲ್ಲಿ ಒಂದು resolution pass ಮಾಡಬೇಕು ಬರೀ delegation ಹೋಗುವುದು ಬೇಡ. ಆದ್ದರಿಂದ ರಾಜ್ಯ ವಿಧಾನಸಭೆಯಲ್ಲಿ resolution pass ಮಾಡಬೇಕು. ಕರ್ನಾಟಕ ಬಂದ್ ಆಚರಿಸಿ protest ಮಾಡಬೇಕು. ಆವಾಗ ಕೇಂದ್ರ ಸರ್ಕಾರ ಸ್ವಲ್ಪ ಕಣ್ಣು ತೆರೆಯಬಹುದು. ಆ ದೃಷ್ಟಿಯಿಂದ ಬರೀ ನಾವು delegation ಒಯ್ದು memorandum ಕೊಡುವುದು it is not sufficient. Formalities ಪ್ರಕಾರ ಇವರು ಹೀಗೇ ಕೊಡುತ್ತಾರೆ ನಾವು ಹಾಗೇ ಮಾಡುವವರು ಎಂದು ಅವರು ಸುಮ್ಮನಿರುತ್ತಾರೆ. ಹಾಗಾಗಿ ವಿಧಾನ ಸಭೆಯಿಂದ resolution pass ಮಾಡುವ ಪ್ರಪೋಸಲ್ ಏನು ಇದೆ ನಾನು ಅದನ್ನು ಸಮರ್ಥಿಸುತ್ತೇನೆ ಎಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಉಪಾಧ್ಯಕ್ಷರೆ, ಆಲಮಟ್ಟಿ dam ವಿಷಯದಲ್ಲಿ ಏನು ಚರ್ಚೆ ನಡೆದಿದೆ, ಇವಾಗ ನಮ್ಮ ಮಾನ್ಯ ಮುನಿಯಪ್ಪ ಮುದ್ದಪ್ಪನವರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಅದಕ್ಕೆ ನನ್ನ ಸಹಮತವನ್ನು ಸಹ ವ್ಯಕ್ತಪಡಿಸುತ್ತೇನೆ. ಆಲಮಟ್ಟಿ ಡ್ಯಾಂ ವಿಚಾರವಾಗಿ ದೊಡ್ಡ ಹೋರಾಟ ನಡೆದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯಿಂದ ನಾವು ಕೂಡ ಅದರಲ್ಲಿ ಭಾಗವಹಿಸಿ ನೀರನ್ನು ನಿಲ್ಲಿಸುವ ಕೆಲಸ ಹೆಚ್ಚಿನ ರೀತಿಯಲ್ಲಿ ಆಗಬೇಕೆಂದು ಆವತ್ತು ನಾವು ಒತ್ತಾಯವನ್ನು ಮಾಡಿದ್ದೆವು. ಅದೇ ರೀತಿಯಲ್ಲಿ ನಮ್ಮ ಭಾಗದಲ್ಲಿ ಕೂಡ ಕೃಷ್ಣಾ ಬಲದಂಡೆ ಕಾಲುವೆ ಬರತಕ್ಕಂಥ ಸಂದರ್ಭದಲ್ಲಿ ಆವಾಗ ಬಹಳಷ್ಟು ದೊಡ್ಡ ಹೋರಾಟ ಮಾಡಿದ್ದೆವು. ಇದು ನಮ್ಮ ತಾಲ್ಲೂಕಿನಲ್ಲಿ ಕೂಡ ಬರುತ್ತದೆ. ನಮ್ಮ ನಾಯಕರಾಗಿರತಕ್ಕಂಥ ಮಾನ್ಯ ದೇವೇಗೌಡರನ್ನು, ಶ್ರೀ ಸಿದ್ಧರಾಮಣ್ಣನವರನ್ನು ಆ ಭಾಗದ ಜನರಾದ ನಾವು ಸ್ಮರಿಸಬೇಕಾಗುತ್ತದೆ ಸುಮಾರು ವರ್ಷಗಳಿಂದ ನಮ್ಮ ಭಾಗದ ಜನ ಗೂಳೆ ಹೋಗತಕ್ಕಂಥ ಕೆಲಸ ನಡೆಯುತ್ತಿತ್ತು. ಯಾವಾಗ ನಮಗೆ ನಾರಾಯಣಪುರ ಬಲದಂಡೆ ಯೋಜನೆ ಆಯಿತೋ ಆವಾಗ ನಮ್ಮ ಭಾಗದ ಜನಕ್ಕೆ ಒಂದು ಹೊಸ ಜೀವ ಬಂದಹಾಗೆ ಆಯಿತು ಮತ್ತು ಬದುಕಿಗೆ ಒಂದು ಅವಕಾಶ ಸಿಕ್ಕಿದಂತಾಯಿತು ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ದಿನದಲ್ಲಿ ನಮ್ಮ ಜನತಾದಳ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಸುಮಾರು zero ದಿಂದ 80 ಕಿ. ಮೀ. ತನಕ ಕೆನಾಲ್

ಪ್ರಾರಂಭವಾಗಿ ಮುಗಿದುಹೋಗಿತ್ತು. ಈಗೇನಾಗಿದೆ ಎಂದರೆ ನಮ್ಮ ಭಾಗದ ಜನಕ್ಕೆ ಇನ್ನೂ ಅನೇಕ ಕೆನಾಲ್‌ಗಳು ಆಗಬೇಕಾಗಿವೆ. ಇನ್ನು ಕೆಲವು ಕಾಮಗಾರಿಗಳು ಸ್ವಲ್ಪ ಮಂದಗತಿಯಲ್ಲಿ ನಡೆದಿವೆ. ಅದನ್ನು ಬಹಳ ತೀವ್ರಗತಿಯಲ್ಲಿ ಮಾಡಬೇಕು. ಜೊತೆಗೆ ಇವತ್ತು ನಾವು ಗೂಳೆ ಹೋಗತಕ್ಕಂಥ ಕೆಲಸ ನೀರಿನಿಂದಾಗಿ ನಿಂತಿದೆ. ನೀರು ಬರುತ್ತದೆಂದು ನಮ್ಮ ಜನ ಗೂಳೆ ಹೋಗದೆ ನೆಮ್ಮದಿಯಿಂದ ಬದುಕುತ್ತಿದ್ದಾರೆ. ನೀರಿಗಾಗಿ ಯಾವ ತ್ಯಾಗಕ್ಕಾದರೂ ಈ ಸರ್ಕಾರ ಇರಬೇಕಾಗುತ್ತದೆಂದು ನಾನು ಸ್ಪಷ್ಟವಾಗಿ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ನೀರು ಇಲ್ಲದಿದ್ದರೆ ನಾವ್ಯಾರೂ ರಾಜ್ಯದಲ್ಲಿ ಬದುಕುವುದಕ್ಕಾಗುವುದಿಲ್ಲ. ಅನ್ನ ಇಲ್ಲದಿದ್ದರೂ ಬದುಕಬಹುದು ಆದರೆ ನೀರು ಇಲ್ಲದಿದ್ದರೆ ಬದುಕುವುದಕ್ಕಾಗುವುದಿಲ್ಲ. ಇವತ್ತು ನಾವು ಹೊಲಗಳಲ್ಲಿ ಹೋಗುತ್ತೇವೆ ಅಂತರ್‌ಜಲ ಹೋಗಿ ನೀರು ಕಾಣದ ಪರಿಸ್ಥಿತಿ ನಮಗೆ ಉಂಟಾಗಿದೆ. ಸಾವಿರಾರು ಕೋಟಿ ರೂಪಾಯಿಗಳನ್ನು ನೀರಿಗಾಗಿ ಖರ್ಚು ಮಾಡುತ್ತೇವೆ. ಆದರೆ ನಮಗೆ ನೀರು ಸಿಗುತ್ತಿಲ್ಲ. ಹಾಗೆಯೇ ಇವತ್ತು ನನ್ನ ಗೆಳೆಯರಾದಂಥ ಶ್ರೀ ರಾಜೂಗೌಡರು ಏನು ಪ್ರಸ್ತಾಪ ಮಾಡಿದರು, ನಮ್ಮ ರಾಜ್ಯದ ನೀರೆಲ್ಲಾ ಸೋರಿಕೆಯಾಗಿ ಆಂಧ್ರಕ್ಕೆ ಹೋಗುತ್ತಿದೆ. ಅದನ್ನು ನಿಲ್ಲಿಸತಕ್ಕಂಥ ಕೆಲಸ ಮಾನ್ಯ ಜಲಸಂಪನ್ಮೂಲ ಸಚಿವರು ಇದರ ಬಗ್ಗೆ ಬಹಳ ಕಾಳಜಿ ವಹಿಸಿದ್ದಾರೆ. ಇವರು ಬಹಳ ಅನುಭವಿ ರಾಜಕಾರಣಿಗಳು ಮತ್ತು ಇದರ ಬಗ್ಗೆ ವಿಶೇಷ ಗಮನಹರಿಸಿದ್ದಾರೆ. ಆ ಭಾಗದಲ್ಲಿರುವ ಎಲ್ಲಾ ಜನರ ಆಸಕ್ತಿಗಳನ್ನು ಕಾಪಾಡತಕ್ಕಂಥ ಕೆಲಸವನ್ನು ಅವರು ಇದುವರೆಗೆ ಮಾಡಿದ್ದಾರೆ. ಈಗ ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ನಾವು ಬರೀ ಮನವಿ ಕೊಡುವುದರ ಮೂಲಕ ಆಗುವುದಿಲ್ಲ. ರಾಜಕೀಯ ಇಚ್ಛಶಕ್ತಿ ಕೂಡ ಬೇಕಾಗುತ್ತದೆ. ಸರ್ಕಾರ ಕೂಡ ಕಠಿಣವಾದ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ತೆಗೆದುಕೊಳ್ಳುತ್ತದೆಂಬ ಭರವಸೆ ನಮಗಿದೆ. ಆ ಕಾರಣಕ್ಕಾಗಿ ನಮ್ಮ ಭಾಗದಲ್ಲಿನ ಜನರಿಗೆ ಇನ್ನೂ ಅನೇಕ ಕಾಮಗಾರಿಗಳು ಆಗಬೇಕಾದ ಸಂದರ್ಭ ಇದೆ. ಇನ್ನೂ ಅನೇಕ ಕೆಲಸಗಳು ನಡೆಯಬೇಕಾಗಿದೆ ಎನ್ನುವುದನ್ನೂ ಕೂಡ ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗ ನೀರು ಬಿಡುತ್ತಾರೆ. 5ನೇ ತಾರೀಖಿನ ತನಕ ನಾರಾಯಣಪುರ ಬಲದಂಡೆ ಕಾಲುವೆಗೆ ನೀರು ಬಿಡುತ್ತೇವೆ, ಮತ್ತೆ ನಿಲ್ಲಿಸುತ್ತೇವೆನ್ನುವ ಮಾತನ್ನು ಹೇಳಿದರು. ಇವತ್ತು ಮಳೆ ಬಂದಿಲ್ಲ. ಬೇಸಿಗೆ ಬಂದಿದೆ. ಜನ-ಜಾನುವಾರುಗಳಿಗೆ ನೀರಿನ ತೊಂದರೆಯಾಗಿದೆ. ಅದರಿಂದಾಗಿ,

ನಾನು ಜಲಸಂಪನ್ಮೂಲ ಸಚಿವರನ್ನು ವಿನಂತಿ ಮಾಡುತ್ತೇನೆ. ಏನಾಗಿದೆ ಎಂದರೆ, ಈ ತಿಂಗಳ 15ರ ತನಕ ನಾರಾಯಣಪುರ ಬಲದಂಡೆ ಕಾಲುವೆಗೆ ನೀರು ಬಿಡತಕ್ಕಂಥ ಕೆಲಸ ಆಗಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೂಡ ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯ ಮಾಡಿ, ಮಾತನಾಡುವ ಅವಕಾಶ ಕೊಟ್ಟಿದ್ದೀರಿ, ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ್) : ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಮಹಾರಾಷ್ಟ್ರ ಗಡಿ ಪ್ರದೇಶದಿಂದ ಬಂದಂಥವರು. ಮಹಾರಾಷ್ಟ್ರ ಸರ್ಕಾರ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವ ಹಂತದಲ್ಲಿ ಅವರು ಯಾವ ರೀತಿ ನಡೆದುಕೊಂಡಿದ್ದರೆನ್ನುವುದನ್ನು ಸ್ವಲ್ಪ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನೀರಾವರಿ ಮತ್ತು ವಿದ್ಯುತ್ ಯೋಜನೆಗಳನ್ನು ಮುಗಿಸುವವರೆಗೂ ಮಹಾರಾಷ್ಟ್ರದಲ್ಲಿ ಹಳ್ಳಿಗಳಿಗೆ ರಸ್ತೆ ಕೂಡ ಅವರು ಮಾಡಲಿಲ್ಲ. ಅಂದರೆ, ಎಲ್ಲಾ ಹಣವನ್ನೂ ನೀರಾವರಿಗೆ ಮತ್ತು ವಿದ್ಯುತ್‌ಗೆ ಇಟ್ಟಿದ್ದರು. ಒಂದು ಹಂತದಲ್ಲಿ ಮಹಾರಾಷ್ಟ್ರದಲ್ಲಿ 3 ವರ್ಷ ಸರ್ಕಾರ ಕಟ್ಟಡಗಳಿಗೆ ಸುಣ್ಣ ಬಣ್ಣ ಹಚ್ಚುವುದನ್ನು ಕೂಡ ನಿಲ್ಲಿಸಿದರು. ಆ ಹಣವನ್ನೂ ಕೂಡ ನೀರಾವರಿ ಮತ್ತೆ ವಿದ್ಯುತ್ತಿಗೇ ಉಪಯೋಗ ಮಾಡಿದರು. ನಾನೇಕೆ ಈ ಮಾತನ್ನು ಹೇಳುತ್ತೇನೆಂದರೆ, ಸರ್ಕಾರ ಏನು ಈವತ್ತು ಬಡ್ಜೆಟ್‌ನಲ್ಲಿ ಹಣ ಇಡುತ್ತಿದೆ, ಆ ಹಣ ಸಾಕಾಗುವುದಿಲ್ಲ. ಏಕೆಂದರೆ, ಎಷ್ಟು ವೇಗದಲ್ಲಿ ನಾವು ನೆರೆ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರದವರನ್ನು ನೋಡಿಕೊಂಡು ಮಾಡಬೇಕಾಗಿದೆ. ಆ ವೇಗದಲ್ಲಿ ಇವತ್ತು ನಮ್ಮ ನೀರಾವರಿ ಯೋಜನೆಗಳಾಗುತ್ತಿಲ್ಲ. ಅದಕ್ಕೆ ನಾನೇನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆಂದರೆ, ಇವತ್ತು ಆಂಧ್ರಪ್ರದೇಶದ ಸರ್ಕಾರದವರು ಅನಧಿಕೃತವಾಗಿ 21 ಯೋಜನೆಗಳನ್ನು ಮಾಡುತ್ತಾರೆಂದು ನಾವು ಇವತ್ತು ಕಾದಾಟಕ್ಕೆ ನಿಂತಿದ್ದೇವೆಯೇ ಹೊರತು ಆ ಯೋಜನೆಗಳನ್ನು ಬಂದ್ ಮಾಡಬೇಕೆಂದು ಹೇಳಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಹೇಳುತ್ತಿದ್ದೇವೆ ಮತ್ತು ಸರ್ವಾನುಮತದ ನಿರ್ಣಯ ಮಾಡಬೇಕೆಂದು ಹೇಳುತ್ತಿದ್ದೇವೆ. ಅದರ ಜೊತೆಯಲ್ಲಿ ಇವತ್ತು ನಾವು ನಮ್ಮ ನೀರಾವರಿ ಯೋಜನೆಗಳಿಗೆ ಕಾಲಮಿತಿಯೊಳಗೆ ಮುಗಿಸಲಿಕ್ಕೆ ಹಣ ಹೆಚ್ಚು ಕೊಡಬೇಕಾಗುತ್ತದೆ. ಇವತ್ತು 3,900 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಅಷ್ಟರಲ್ಲಿ ಆಗುವುದಿಲ್ಲ. ಯುಕೆಪಿಗೇ ಇದೇ ವರ್ಷಕ್ಕೆ 4000 ಕೋಟಿ ರೂಪಾಯಿ ಕೊಟ್ಟರೆ ಮಾತ್ರ ನಾವು 'ಎ' ಸ್ಕೀಂ ಮೇಲೆ ಹಂಚಿದ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಸಾಧ್ಯವಾಗುವುದಿಲ್ಲ. ಇವತ್ತು

ಆಂಧ್ರಪ್ರದೇಶದವರೇನೂ ಖಜಾನೆ ತುಂಬಿಕೊಂಡು ಕುಳಿತಿಲ್ಲ. ಆದರೆ, ಅವರಿಗೊಂದು ಕಮಿಟ್‌ಮೆಂಟ್ ಇದೆ. ನೀರಾವರಿ ಯೋಜನೆಗಳನ್ನು ಮಾಡಿ ಏನು ಶೇಕಡಾ 80 ರಷ್ಟು ಜನ ಕೃಷಿಯನ್ನು ಅವಲಂಬಿಸಿ ಬದುಕುತ್ತಿದ್ದಾರೆಯೋ, ಆ ಜನರಿಗೆ ಸಹಾಯ ಮಾಡಬೇಕೆನ್ನುವಂಥ ಕಮಿಟ್‌ಮೆಂಟ್ ಇದೆ. ಆ ಕಾರಣಕ್ಕಾಗಿ ಇವತ್ತು ಅವರು 'ಬಿ' ಸ್ಕೀಂನಲ್ಲಿ ನೀರು ಹಂಚಿಕೆಯಾಗುವ ಮೊದಲೇ 4480 ಕೋಟಿ ರೂಪಾಯಿ ಖರ್ಚು ಮಾಡಿ 21 ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ನಾವು ಅದನ್ನು ವಿಚಾರ ಮಾಡಬೇಕಾಗುತ್ತದೆ. ಇವತ್ತು 5 ತಿಂಗಳಿಗೋ, 6 ತಿಂಗಳಿಗೋ ' ಬಿ' ಸ್ಕೀಂಗೆ ನೀರಿನ ಹಂಚಿಕೆಯಾದರೆ ಸುಮಾರು 284 ಟಿಎಂಸಿ ನೀರೇನು ನಮಗೆ ದಕ್ಕುತ್ತದೆ. ಅದನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ನಾವೇನು ವ್ಯವಸ್ಥೆ ಮಾಡಿಕೊಂಡಿದ್ದೇವೆ? ಯಾವ ಯೋಜನೆಗಳಿಗೆ ನಾವು ರೂಪುರೇಷೆ ಕೊಟ್ಟಿದ್ದೇವೆ. ಕರ್ನಾಟಕ ಸರ್ಕಾರ ಅದರಲ್ಲಿ ಬಹಳ ಹಿಂದೆ ಬೀಳುತ್ತಿದ್ದೇವೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಏನು ಆಂಧ್ರಪ್ರದೇಶದವರು ಅನಧಿಕೃತವಾಗಿ 21 ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ, ಅವುಗಳನ್ನು ಕೂಡಲೇ ನಿಲ್ಲಿಸಲಿಕ್ಕೆ ಈ ಸದನದಲ್ಲೊಂದು ಸರ್ವಾನುಮತದ ನಿರ್ಣಯ ಮಾಡಬೇಕು ಮತ್ತು ವೈಜನಾಥ ಪಾಟೀಲರು ಹೇಳಿದ ಹಾಗೆ, ನಿರ್ಣಯ ಮಾಡಿ ನಾವು ಡೆಲಿಗೇಷನ್ ತೆಗೆದುಕೊಂಡು ಹೋದರೆ ಅದಕ್ಕೊಂದು ಅರ್ಥ ಬರುತ್ತದೆ ಮತ್ತು ಜನರಿಗೆ ಸರಿಯಾದಂಥ ಸಂದೇಶ ಹೋಗುತ್ತದೆ. ಏಕೋ ಸರ್ಕಾರ ಈ ವಿಷಯದಲ್ಲಿ ಮೀನಾಮೇಷ ಮಾಡುತ್ತಿದೆ,ಮೊಂಡುತನ ಮಾಡುತ್ತಿದೆ. ನಮಗೇನು ಸಂಶಯ ಬರುತ್ತದೆಂದರೆ, ಕೇಂದ್ರ ಸರ್ಕಾರ ಕಾಂಗ್ರೆಸ್ ನೇತೃತ್ವದಲ್ಲಿದೆ. ಆಂಧ್ರದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಆ ಎರಡೂ ಸರ್ಕಾರಗಳ ಮುಲಾಜಿಗೆ ಬಿದ್ದು ಇವತ್ತೇನು ಕನ್ನಡ ನಾಡಿನ ಜನರಿಗೆ ಅದರಲ್ಲೂ ವಿಶೇಷವಾಗಿ ಕೃಷ್ಣಾ ಕೊಳ್ಳದ ಜನರಿಗೆ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ನಾವು ಸಂಶಯ ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ನಾನು ಈವತ್ತು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಸಾಕಷ್ಟು ಜನ ಈ ವಿಷಯದ ಮೇಲೆ ಮಾತನಾಡಿದ್ದಾರೆ. ಒಂದೇ ಒಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇನ್ನೂ ಕೃಷ್ಣಾ ಕಣಿವೆ ಕೊಳ್ಳದ ಯೋಜನೆಗಳ ಸಲುವಾಗಿ 2005 ಮತ್ತು 2006ನೇ ಸಾಲಿನ ಬಡ್ಜೆಟ್‌ನಲ್ಲಿ ಹೆಚ್ಚುವರಿಯಾಗಿ 4000 ಕೋಟಿ ರೂಪಾಯಿ ಕೊಡಬೇಕು. ಎರಡನೇಯದು, 21 ಕಾಮಗಾರಿಗಳನ್ನು ಅನಧಿಕೃತವಾಗಿ, ಕಾನೂನಿಗೆ ವಿರುದ್ಧವಾಗಿ, ಟ್ರಿಬ್ಯೂನಲ್ ಅವಾರ್ಡ್‌ಗೆ

ವಿರುದ್ಧವಾಗಿ ಇವತ್ತೇನು ಆಂಧ್ರದವರು ಮಾಡುತ್ತಿದ್ದಾರೆ, ಅದನ್ನು ಕೂಡಲೇ ನಿಲ್ಲಿಸುವ ಹಾಗೆ ಆಗಬೇಕು. ಅವರು ಯಾವ ರೀತಿಯಲ್ಲಿ ಕೋರ್ಟಿಗೆ ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಏನೇನೋ ಮಾಡಿ ನಮ್ಮ ಗೇಟ್‌ಗಳನ್ನು ಕತ್ತರಿಸಿ ಹಾಕಿದರಲ್ಲಾ ಅದೇ ರೀತಿಯಾಗಿ ಇವತ್ತು ಅವರು ಮಾಡತಕ್ಕಂಥ ಎಲ್ಲಾ ಯೋಜನೆಗಳನ್ನೂ ಅಲ್ಲಿಗೇ ನಿಲ್ಲಿಸಿ ಒಡೆದು ಹಾಕುವಂಥ ಕೆಲಸವನ್ನು ಮಾಡಿದರೆ ಸರ್ಕಾರಕ್ಕೆ ಶ್ರೇಯಸ್ಸು ಬರುತ್ತದೆ, ಶಹಭಾಷ್‌ಗಿರಿ ಬರುತ್ತದೆ. ಆ ಕೆಲಸವನ್ನು ಮಾಡಬೇಕು. ಕೊನೆಯದಾಗಿ, ಈ ಸದನದಲ್ಲಿ ಸರ್ವಾನುಮತದ ನಿರ್ಣಯವನ್ನು ಅಂಗೀಕಾರ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ. ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸರ್ಕಾರದಿಂದ ಉತ್ತರ.

ಶ್ರೀ ಸಿದ್ದು ಸಾವದಿ (ಜಮಖಂಡಿ) : ನಾನೂ ಆ ಕೃಷ್ಣಾ ಕೊಳ್ಳದ ಭಾಗದಿಂದ ಬಂದವನು, ಎರಡು ಮಾತನಾಡುತ್ತೇನೆ. ನಾನೂ ಸಹ ಈ ಆಲಮಟ್ಟಿ ಇದರ ಸಲುವಾಗಿ ಭೂಮಿಯನ್ನು ತ್ಯಾಗ ಮಾಡಿದಂಥ ಪ್ರದೇಶದಿಂದ ಬಂಥಂಥ ಒಬ್ಬ ಸದಸ್ಯನಿದ್ದು, ವಿಶೇಷವಾಗಿ ನಮ್ಮ ಭಾಗದಲ್ಲಿರತಕ್ಕಂಥ ಸರ್ಕಾರ ನಡೆದುಕೊಂಡಿರತಕ್ಕಂಥದ್ದರ ಬಗ್ಗೆ ಜನ ಯಾವ ರೀತಿ ಮಾತನಾಡುತ್ತಾರೆಂದರೆ, ಯಾವುದೇ ಸರ್ಕಾರವಿರಲಿ, ನಾನು ಬೊಟ್ಟು ಮಾಡಿ ತೋರಿಸಿಕೊಳ್ಳುವುದಿಲ್ಲ. ರಾಜಕೀಯ ಮಾಡುವ ಅವಶ್ಯಕತೆ ಇಲ್ಲ, ಉತ್ತರ ಕರ್ನಾಟಕದ ಬಗ್ಗೆ ಅದರಲ್ಲೂ ಸಹ ಕೃಷ್ಣಾ ಕೊಳ್ಳದ ಬಗ್ಗೆ ಮಲತಾಯಿ ಧೋರಣೆಯನ್ನು ಹಿಂದಿನ ಸರ್ಕಾರ ಅನುಸರಿಸಿಕೊಂಡು ಬಂದಿವೆ ಎನ್ನುವಂಥ ಆಪಾದನೆಯನ್ನು ಆ ಜನ ಮಾಡುವಂಥ ಪದ್ಧತಿ ಇದೆ. ಈಗಾಗಲೇ ಸಾಕಷ್ಟು ಹಿರಿಯ ನಾಯಕರು ಮಾತನಾಡಿದ್ದಾರೆ. ಅವರು ಹೇಳಿದಂಥ ಮಾತುಗಳು ಕೇವಲ ರಾಜಕೀಯಕ್ಕಾಗಿ ರಾಜಕೀಯ ಮಾಡುತ್ತಾರೇನೋ ಹೊಸ ಸದಸ್ಯರಿಗೆ ಎಂದು ಅನ್ನಿಸುತ್ತದೆ. ಯಾವ ರೀತಿ ಎಂದರೆ, ಇಲ್ಲ, ಅವರು ಮುಖ್ಯಮಂತ್ರಿಯಿದ್ದಾಗ ಇಂಥ ಯೋಜನೆ ಮಾಡಿದರು, ಇವರು ಮುಖ್ಯಮಂತ್ರಿಯಿದ್ದಾಗ ಇಂಥ ಯೋಜನೆ ಮಾಡಿದರು ಅನ್ನುವಂಥ ಮಾತನ್ನು ಇಲ್ಲಿ ನಾವು ಕೇಳುತ್ತಿದ್ದೇವೆ. ಇದರರ್ಥ ಏನೆಂದು ಅನಿಸುತ್ತದೆಂದರೆ, ತಂದೆ ಮಕ್ಕಳನ್ನು ಹಡೆದಿರುತ್ತಾನೆ. ನೋಡಪ್ಪ ಮಗು ನಿನ್ನ ಹುಟ್ಟಿಸಿದ್ದೇನೆ ನಾನು, ನಿನ್ನನ್ನು ಶಾಲೆಗೆ ಕಳುಹಿಸಿದ್ದೇನೆ, ನಿನಗೆ ಆಹಾರ ಕೊಟ್ಟಿದ್ದೇನೆ, ನಿನ್ನನ್ನು ದೊಡ್ಡವನನ್ನಾಗಿ ಮಾಡಿದ್ದೇನೆ. ಇದು ಈ ರಾಜ್ಯದ ಜನ ಈ ಕೆಲಸ ಮಾಡಲಿಕ್ಕಾಗಿಯೇ ಆರಿಸಿ ಕಳುಹಿಸಿದ್ದಾರೆ ವಿನಹಃ ನಾವು ಅಂಥದ್ದು

ಮಾಡಲಿ, ಇಂಥದ್ದು ಮಾಡಲಿ ಎಂದು ಹರಿಕಥೆ ಹೇಳಿಕೊಳ್ಳುವಂಥ ಕಾರಣಗಳು ಪ್ರಸ್ತುತ ಅಲ್ಲ ಅಂತ ನನಗನ್ನಿಸುತ್ತದೆ. ನಾನು ಹಿಂದೆ ಅಂಥ ಶೂರತನ ಮಾಡಿದ್ದೇನೆ, ಇಂಥ ಶೂರತನ ಮಾಡಿದ್ದೇನೆಂದು ಹೇಳುವಂಥ ಕಾರಣ ಬಿಟ್ಟು ಈಗ ನೀವೇನಿದ್ದೀರಿ, ಇವಾಗ ನೀವೇನು ಸಾಧನೆ ಮಾಡಿದ್ದೀರಿ ಎಂದು ಹೇಳುವಂಥ ಅವಶ್ಯಕತೆ ಇವತ್ತಿನ ಪರಿಸ್ಥಿತಿಯಲ್ಲಿದೆ. ಅಂಥ ಒಂದು ಶೂರತನ ಮಾಡಿ. ಮಾಡುವುದಾಗಿದ್ದರೆ ನಮಗೆ ಗೊತ್ತಿರುವ ಹಾಗೆ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡಿಗೆ ತುಲನೆ ಮಾಡಿದಾಗ ಅಲ್ಲಿ ಯಾವುದೇ ನೀರಿನ ಯೋಜನೆಗಳು ಇನ್‌ಟೈಂನಲ್ಲಿ ಅವರು ಹಾಕಿದಂಥ ಟೈಂನಲ್ಲಿ ಮುಗಿಸುವಂಥದ್ದನ್ನು ನಾವು ನಮ್ಮ ನೆರೆ ರಾಜ್ಯಗಳಲ್ಲಿ ಕಾಣುತ್ತಿದ್ದೇವೆ. ಆದರೆ, ನಮ್ಮ ಯೋಜನೆಗಳು ಯಾವ ರೀತಿ ನಡೆದು ಬಂದ ದಾರಿ ಇದೆ. ಹಿಪ್ಪರಗಿಯಾಗಲಿ, ಅಲಮಟ್ಟಿಯಾಗಲಿ 30–40 ವರ್ಷಗಳನ್ನು ತೆಗೆದುಕೊಂಡಿದ್ದಾರೆ. 5 ಕೋಟಿ ರೂಪಾಯಿಯಲ್ಲಾಗ ಬೇಕಾದುದ್ದನ್ನು 200–300 ಕೋಟಿ ರೂಪಾಯಿ ಖರ್ಚು ಮಾಡಿ 30 ವರ್ಷಗಳನ್ನು ತೆಗೆದುಕೊಳ್ಳುವಂಥ ಪರಿಸ್ಥಿತಿ ನಮ್ಮ ನಾಡಿನಲ್ಲಿದೆ. ಯಾವ ರೀತಿ ಹಿಂದಿನ ನಮ್ಮ ಸರ್ಕಾರಗಳ, ಈ ನಮ್ಮ ನೆಲದ, ಜಲದ ರಕ್ಷಣೆಗಾಗಿ ಯಾವ ರೀತಿ ಕೆಲಸ ಮಾಡಿವೆ ಎನ್ನುವುದನ್ನು ಆಧಾರವಾಗಿ ಇಟ್ಟುಕೊಳ್ಳಬಹುದೇ ವಿನಹಃ ಅದಕ್ಕೆ ಬೇರೆ ಉದಾಹರಣೆ ಬೇಡ. ಇಂಥ ಪರಿಸ್ಥಿತಿಯಲ್ಲಿ ಆ ರೀತಿ ನಾವೆಲ್ಲರೂ ಸಾಧನೆ ಮಾಡಿ ಈ ರಾಜ್ಯಕ್ಕೆ ಸೇವೆ ಮಾಡಿದರೆ ಈ ನಿರ್ಣಯ ತೆಗೆದುಕೊಳ್ಳಲಿಕ್ಕೆ ಏಕೆ ತಯಾರಿಲ್ಲ? ಈಗಿನ ಪರಿಸ್ಥಿತಿ ಬಗ್ಗೆ ಮಾತನಾಡಬೇಕೆ ವಿನಹಃ ಹಿಂದಿನ ಪರಿಸ್ಥಿತಿ ಬಗ್ಗೆ ಬೇಡ. ನಾವು ಯಾರಿಗೆ ಧನ್ಯವಾದಗಳನ್ನು ಹೇಳುವ ಕಾರಣವಿಲ್ಲ. ನಮ್ಮನ್ನು ಆರಿಸಿ ಕೊಟ್ಟಂಥ, ಈ ರಾಜ್ಯದ ಸೇವೆ ಮಾಡಲು ಕಳುಹಿಸಿಕೊಟ್ಟಿರತಕ್ಕಂಥ ಜನತೆಗೆ ನಾವು ಅಭಿನಂದನೆ ಸಲ್ಲಿಸಬೇಕೇ ವಿನಹಃ ಅವರು ಮಾಡಿದರು, ಇವರು ಮಾಡಿದರೆಂದು ಹೇಳುವ ಭೇದ ಭಾವನೆ ಮಾಡುವ ಅವಶ್ಯಕತೆ ಇಲ್ಲ. ಉತ್ತರ ಕರ್ನಾಟಕದ ಬಗ್ಗೆ ಈ ಸರ್ಕಾರದ ಧೋರಣೆ ಯಾವ ರೀತಿ ಇದೆ ಎಂಬ ಬಗ್ಗೆ ನಾನೊಂದು ಉದಾಹರಣೆ ಹೇಳಬಯಸುತ್ತೇನೆ. ನಾವು ಸುಮಾರು ಈ ಸದನ ಸ್ಟಾರ್ಟ್ ಆದಾಗಿನಿಂದ ಹಿಡಿದು ಒಂದು ತಿಂಗಳವರೆಗೆ ಯಾವ ಆಲಮಟ್ಟಿ ಅಣೆಕಟ್ಟಿಗಾಗಿ, ಈ ರಾಜ್ಯಕ್ಕಾಗಿ ತ್ಯಾಗ ಮಾಡಿದ 4–5 ತಾಲ್ಲೂಕಿನ ಲಕ್ಷಾವಧಿ ಜನ ಇವತ್ತು ಇದೊಂದೇ ಸೋರ್ಸ್ ಅಲ್ಲ. ಸುಮಾರು 4–5 ವರ್ಷಗಳಿಂದ ಅಲ್ಲಿ 4 ತಿಂಗಳು ಬೇಸಿಗೆಯಲ್ಲಿ ನೀರು ಹೋಗಿ ಅಲ್ಲಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪ್ರಸಂಗ ಬಂದರೂ

ಸಹ ನಾವು ನಾಲ್ಕಾರು ಬಾರಿ ಸಂಬಂಧಿಸಿದ ಸಚಿವರನ್ನು, ಮೊನ್ನೆ ನೀರಾವರಿ ಸಚಿವರನ್ನು ಭೇಟಿಯಾಗಿ ನಾವು ಮನವಿ ಸಲ್ಲಿಸಿದ್ದೇವೆ. ಅವರು ನಮಗೆ ಸ್ಪಂದನೆ ಮಾಡಿಲ್ಲವೆಂದು ನಾವು ಹೇಳುವುದಿಲ್ಲ. ನಮ್ಮ ಬಗ್ಗೆ ಅವರಿಗೆ ಸಾಕಷ್ಟು ಪ್ರೇಮ ಇದೆ, ಅವರು ಪ್ರಯತ್ನ ಮಾಡಿದ್ದಾರೆ, ಆದರೆ ಅವರ ಪ್ರಯತ್ನಕ್ಕೆ ಇನ್ನುವರೆಗೆ ಫಲ ಸಿಕ್ಕಿರುವುದಿಲ್ಲ. 15 ದಿವಸಗಳಿಂದ ನಾವು ಹೊಸ ಸದಸ್ಯರು ಇದರ ಬಗ್ಗೆ ಮಾತನಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ನಾಯಕರು ನಮಗೆ ಏನಾದರೂ ಅನ್ನಬಹುದೆಂದು ನಾವು ಸುಮ್ಮನೆ ಆ ದೃಷ್ಟಿಯಿಂದ ಕುಳಿತಿದ್ದೇವೆ. ಆದರೂ ಸಹಿತ ನಮ್ಮ ಭಾವನೆಯನ್ನು ಅರ್ಥ ಮಾಡಿಕೊಂಡು ನಾನು ಇದನ್ನು ಬಹಳ ನೋವಿನಿಂದ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯ ಸರ್ಕಾರಕ್ಕೆ ಬೇರೆ ರಾಜ್ಯದ ನೀರನ್ನು ತರುವಂಥ ಸಾಮರ್ಥ್ಯವೂ ಇಲ್ಲ, ನಮ್ಮಲ್ಲಿರತಕ್ಕಂಥ ನೀರನ್ನು ಹಿಡಿದಿಟ್ಟುಕೊಳ್ಳುವಂಥ ಸಾಮರ್ಥ್ಯವೂ ಇಲ್ಲ. ಉದಾಹರಣೆಯನ್ನು ಸಹಿತ ನಾವು ನೋಡಿದ್ದೇವೆ. ಕಾವೇರಿ ನೀರನ್ನೂ ಕೂಡ ರಾತ್ರೋ ರಾತ್ರಿ ಬಿಟ್ಟಿರುವುದನ್ನು ನೋಡಿದ್ದೇವೆ, ಕಾವೇರಿ ನೀರನ್ನು ಬಿಟ್ಟಾಗ ಇಡೀ ಕರ್ನಾಟಕ ರಾಜ್ಯದಲ್ಲೆಲ್ಲಾ ಹೋರಾಟ ಮಾಡುವುದರ ಜೊತೆಗೆ ಜಮಖಂಡಿಯಲ್ಲಿಯೂ ಕೂಡ ನಾವು ಬಂದ್‌ನ್ನು ಆಚರಿಸಿದ್ದೇವೆ. ಆದರೆ ಕೃಷ್ಣಾ ನದಿಯ ಈ ಸಮಸ್ಯೆ ಬಂದಾಗ ಇಡೀ ಕರ್ನಾಟಕದವರು ಒಂದಾಗಿ ನಿಂತು, ಈ ರಾಜ್ಯದ ಹಿತವನ್ನು ಕಾಪಾಡಬೇಕೇ ವಿನಹಃ ಯಾವುದೋ ಮುಲಾಜಿಗೆ ಒಳಗಾಗಿ ನಮ್ಮ ಅಧಿಕಾರಕ್ಕೆ ಏನೋ ಕುತ್ತು ಬರುತ್ತದೆಂದು ಹೆದರಿಕೆ ಬೇಡ. ನಿಮ್ಮ ಅಧಿಕಾರಕ್ಕೆ ಏನಾದರು ಕುಂದು ಬಂದರೆ ಅಧಿಕಾರಕ್ಕೆ ತೊಂದರೆ ಬಂದರೆ ನಾವು ಇದ್ದೇವೆ. ನಾವು ಸಪೋರ್ಟ್ ಮಾಡಿ ನಿಮಗೆ ಅಧಿಕಾರವನ್ನು ಉಳಿಸುವಂಥ ಪ್ರಯತ್ನ ಮಾಡುತ್ತೇವೆ ವಿನಹಃ ಈ ನಿರ್ಣಯ ಕೇಳುವುದಕ್ಕೆ ಅವರು ಯಾರು? ಇದರ ಬಗ್ಗೆ ಹಿಂದೆ ಮುಮದೆ ನೋಡುವ ಅವಶ್ಯಕತೆ ಇಲ್ಲ, ಮಾನ್ಯ ಸಚಿವರು ಚಿಕ್ಕವರಾದ ನಾವು ಹೇಳಿರುವ ಬಗ್ಗೆ ಏನೂ ಅಪಾರ್ಥವನ್ನು ತಿಳಿದುಕೊಳ್ಳದೆ ಈ ರಾಜ್ಯದ ಹಿತದೃಷ್ಟಿಯಿಂದ ತಾವು ಈ ನಿರ್ಣಯವನ್ನು ತೆಗೆದುಕೊಂಡು ಆಂಧ್ರದಲ್ಲಿರತಕ್ಕಂಥ ಈ 21 ಯೋಜನೆಗಳನ್ನು ಬಂದ್ ಮಾಡುವಂಥ ಒಂದು ವ್ಯವಸ್ಥೆ ತಾವು ಈ ನಿರ್ಣಯದ ಮೂಲಕ ಮಾಡಬೇಕೆನ್ನುವ ವಿನಂತಿಯನ್ನು ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ರಾಮನಗರ) : ಮಾನ್ಯ ಉಪಾಧ್ಯಕ್ಷರೆ, ಮಧ್ಯಾಹ್ನ 3 ಗಂಟೆಯಿಂದ ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಆಂಧ್ರ ಸರ್ಕಾರದ ಈ ಹೊಸ ಕಾಮಗಾರಿಗಳಿಂದ ನಮ್ಮ ರಾಜ್ಯಕ್ಕೆ ಆಗತಕ್ಕಂಥ ಅನ್ಯಾಯಗಳ ಬಗ್ಗೆ ಮಾತನಾಡಲು ಅವರು ಸಮಯವನ್ನು ಕೊಡಬೇಕೆಂದು ಹೇಳಿ, ಬಹಳ ನೋವಿನಿಂದ ಅವರು ಮಧ್ಯಾಹ್ನ 3 ಗಂಟೆಯಿಂದ ಈ ವಿಷಯದ ಬಗ್ಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳಿ ತಮ್ಮ ಗಮನಕ್ಕೆ ತರಬೇಕೆಂದು ಏನು ಪ್ರಯತ್ನವನ್ನು ಪಡುತ್ತಿದ್ದರು,ಅದಕ್ಕಾಗಿ ನಾನು ಅವರಿಗೆ ಮೊದಲನೆಯದಾಗಿ ಈ ಸಂದರ್ಭದಲ್ಲಿ ನನ್ನ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಪ್ರಯತ್ನಿಸುತ್ತೇನೆ. ಆಂಧ್ರ ಸರ್ಕಾರದವರು ಆ ಭಾಗದಲ್ಲಿ ನೀರಾವರಿಯ ಬಗ್ಗೆ ಅಷ್ಟೊಂದು ಕಾಳಜಿಯನ್ನು ಅವರು ತೋರಿಸುತ್ತಿದ್ದಾರೆ. ಇವತ್ತು ಈ ಸದನದ ಮುಖಾಂತರ ಕೇಂದ್ರ ಸರ್ಕಾರಕ್ಕೆ ನಿರ್ಣಯವನ್ನು ಮಾಡುವುದರ ಮುಖಾಂತರ ಎಚ್ಚರವನ್ನು ಕೊಡಬೇಕೆಂದು ಹೇಳಿ ಮಾನ್ಯ ವಿರೋಧ ಪಕ್ಷದ ನಾಯಕರು ಏನೊಂದು ಈ ನಿರ್ಣಯವನ್ನು ಮಂಡನೆ ಮಾಡಿದ್ದಾರೆ, ಇದರಿಂದ ನಮ್ಮ ರಾಜ್ಯಕ್ಕೆ ಎಲ್ಲಾ ರೀತಿಯ ಅನುಕೂಲವಾಗುವುದಾದರೆ ಇದಕ್ಕೆ ನಾನು ನನ್ನ ಸಹಮತವನ್ನು ಕೊಡಲಿಕ್ಕೆ ಸಿದ್ಧನಿದ್ದೇನೆ. ಆದರೆ ಈ ರಾಜ್ಯದ ಕೃಷ್ಣಾ ಮತ್ತು ಕಾವೇರಿಯ ನೀರಿನ ಸಮಸ್ಯೆ ಉದ್ಭವವಾದ ಸಂದರ್ಭದಲ್ಲಿ ಹಲವಾರು ಭಾರಿ ಹಲವಾರು ನಿರ್ಣಯಗಳನ್ನು ಈ ಸದನ ಠರಾವು ಮಾಡಿತ್ತು. ಆದ್ದರಿಂದ ನಮಗೆ ಈ ಒಂದು ಕೃಷ್ಣಾ ಮತ್ತು ಕಾವೇರಿಯ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ಇವತ್ತು ನಾವು ಚಿಂತನೆಯನ್ನು ಮಾಡಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ಸ್ನೇಹಿತರುಗಳು ಮಾನ್ಯ ದೇವೇಗೌಡರು ರಕ್ತವನ್ನು ಕೊಡುತ್ತೇನೆ, ನಮ್ಮ ರಾಜ್ಯದ ನೀರಿಗಾಗಿ ಎಂದು ಹೇಳುವವರು ಒಂದು ಕಡೆ, ಇನ್ನೊಬ್ಬರು ಹೆಚ್.ಕೆ.ಪಾಟೀಲರ ಬಗ್ಗೆ ಕೃಷ್ಣಾ–ಕಾವೇರಿ ಕಣ್ಣೀರಿನ ಕಥೆಯನ್ನು ಬರೆದವರು ಅವರು ಎಲ್ಲಿ ಎನ್ನುವವರು ಒಬ್ಬರು, ಎನ್ನುವ ಒಂದು ದುಗುಡವನ್ನು ಅವರು ವ್ಯಕ್ತಪಡಿಸಿದ್ದಾರೆ. ಇವತ್ತು ನಾನು ಮಾನ್ಯ ಹೆಚ್.ಕೆ.ಪಾಟೀಲ್‌ರವರನ್ನು ನೆನೆಸಿಕೊಳ್ಳಬೇಕು. ಕಳೆದ ಸರ್ಕಾರದಲ್ಲಿ ಕೃಷ್ಣಾ ಕಣಿವೆಯ ನೀರಾವರಿಯ ವಿಷಯದಲ್ಲಿ ಅವರು ತೋರಿಸಿದಂಥ ಕಾಳಜಿ ಬಗ್ಗೆ ನಾನು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಆದರೆ ಇವತ್ತು ರಾಜ್ಯದ ಹಲವಾರು ಪಕ್ಷಗಳವರು, ನಾವು ನೀರಾವರಿ ವಿಷಯದಲ್ಲಿ ರಾಜಕೀಯವನ್ನು ಮಾಡುವುದು ಬೇಡವೆಂದು ಹೇಳಿಕೊಂಡು, ರಾಜಕೀಯವನ್ನೇ ಮಾಡಿಕೊಂಡು ಇಲ್ಲಿಯವರೆಗೆ

ಬಂದಿದ್ದೇವೆ. ನಾನು ಈ ಸಂದರ್ಭದಲ್ಲಿ ಸದನದ ಎಲ್ಲಾ ಹಿರಿಯ ಸದಸ್ಯರುಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒಂದು ಮನವಿಯನ್ನು ಮಾಡುವುದಕ್ಕೆ ಬಯಸುತ್ತೇನೆ. ಉತ್ತರ ಕರ್ನಾಟಕದ ಇನ್ನೊಬ್ಬ ಸ್ನೇಹಿತರು, ಕಾವೇರಿ ವಿಷಯ ಬಂದಾಗ ನಾವು ಜಮಖಂಡಿಯಲ್ಲಿ ಬಂದ್‌ನ್ನು ಮಾಡಿದೆವು ಕೃಷ್ಣಾನದಿ ವಿಷಯದಲ್ಲಿ ಈ ಭಾಗದ ಜನ ಸ್ಪಂದಿಸಲಿಲ್ಲ ಎನ್ನುವ ಒಂದು ನೋವನ್ನು ವ್ಯಕ್ತಪಡಿಸಿದರು. ನಾನು ಈ ಸಂದರ್ಭದಲ್ಲಿ ಸದನದಲ್ಲಿ ಒಂದು ವಿಷಯವನ್ನು ಹಾಗೂ ನನ್ನ ಭಾವನೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕೃಷ್ಣಾ ಕಣಿವೆಯ ನೀರನ್ನು ಸಂಪೂರ್ಣವಾಗಿ 734 ಟಿಎಂಸಿ ಯನ್ನು ಬಳಸಿಕೊಳ್ಳಲಿಕ್ಕೆ ಕ್ರೋಢೀಕರಿಸಿ ಇಟ್ಟಿದ್ದೇವೆ. ಇವತ್ತು ರೈತರಿಗೆ ಕೊಡತಕ್ಕಂಥ ವಿಷಯದಲ್ಲಿ ನಾವು ಏನೂ ಕಾರ್ಯಕ್ರಮವನ್ನು ನಿರೂಪಿಸಿಲ್ಲ, ಮತ್ತು ಇವತ್ತು ಅದಕ್ಕೆ ಬೇಕಾಗಿರತಕ್ಕಂಥ ಹಣದ ಬಗ್ಗೆ ಸನ್ಮಾನ್ಯ ಉಪನಾಯಕರು ಒಂದು ಮಾತನ್ನು ಹೇಳಿದರು. ಮಹಾರಾಷ್ಟ್ರದಲ್ಲಿ ಅವರು ನೀರಾವರಿ ವಿಷಯದಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಹೇಳಿ ನಾವೂ ಕೂಡ ಚಿಂತನೆ ಮಾಡಬೇಕೆಂದು ಹೇಳಿದರು. ಇವತ್ತು ಸದನ ಒಪ್ಪಿಗೆ ಕೊಡುವುದಾದರೆ ಆಂಧ್ರ ಸರ್ಕಾರದವರು 4900 ಕೋಟಿ ರೂ.ಗಳ ವೆಚ್ಚದಲ್ಲಿ ಇವತ್ತು ಹೊಸ ಕಾರ್ಯಕ್ರಮಗಳನ್ನು ನಿರೂಪಿಸಲಿಕ್ಕೆ ಹೊರಟಿದ್ದಾರೆ ಮತ್ತು ನಮ್ಮ ಸರ್ಕಾರಕ್ಕೆ ಆ ಶಕ್ತಿ ಇಲ್ಲವೇ ಎಂಬ ನಾವು ಪ್ರಶ್ನೆಯನ್ನು ಮಾಡಬೇಕಾಗುತ್ತದೆ. ನಮ್ಮ ಸರ್ಕಾರ, ಎಲ್ಲಾ ವಿರೋಧ ಪಕ್ಷದವರ ಒಂದು ಸಹಕಾರದಿಂದ ಇವತ್ತು ಕೃಷ್ಣಾ ಕಣಿವೆಯ ನೀರಾವರಿಯ ಕಾಮಗಾರಿಯನ್ನು ಸಂಪೂರ್ಣಗೊಳಿಸಲಿಕ್ಕೆ 6 ಅಥವಾ 8 ತಿಂಗಳ ಟೈಮ್‌ಬಾಂಡ್ ಹಾಕಿಕೊಳ್ಳುತ್ತೀರೋ ಇವತ್ತು ಹಣವನ್ನು ಸಾಲದ ರೂಪದಿಂದಲಾದರು ತಂದು ಮಾಡಬೇಕು. ಇವತ್ತು ಅಧಿಕಾರಿಗಳ ಸಮಸ್ಯೆ ಇದೆ. ಅಲ್ಲಿ ವರ್ಕನ್ನು ಎಗ್ಜಿಕ್ಯೂಟ್ ಮಾಡುವುದಕ್ಕೆ, ಇವತ್ತು ಅಧಿಕಾರಿಗಳ ಒಂದು ತೊಂದರೆ ಇದೆ ಎನ್ನುವುದಾದರೆ ರಿಟೈರ್ಡ್ ಆಗಿರತಕ್ಕಂಥ ಪ್ರಾಮಾಣಿಕ ಅಧಿಕಾರಿಯನ್ನು ಮತ್ತೆ ಅವರಿಗೆ ಅಲ್ಲಿಯ ಕೆಲಸವನ್ನು ಕೊಡುವುದರ ಮೂಲಕ ಅಥವಾ ಈ ಭಾಗದ ಅಧಿಕಾರಿಗಳನ್ನು ಅಲ್ಲಿಗೆ ಡೆಪ್ಯೂಟ್ ಮಾಡುವುದರ ಮುಖಾಂತರ ಈ 2005ನೇ ಇಸ್ವಿಯೊಳಗೆ ಸಂಪೂರ್ಣವಾಗಿ ಕೃಷ್ಣಾ ಕಣಿವೆಯ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ನಾನು ಈ ಸದನದ ಮೂಲಕ ತೀರ್ಮಾನ ಮಾಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಎಲ್ಲಾ ಕಾರ್ಯಕ್ರಮಗಳನ್ನು ಬದಿಗಿಟ್ಟು,

ಮಾನ್ಯ ಉಪನಾಯಕರು ಇವತ್ತು ಹೇಳಿದ ಹಾಗೆ, ಈ ಭಾಗದಲ್ಲಿ ನಾವು ಇದ್ದೇವೆ. ನಿಮ್ಮ ಕೃಷ್ಣಾ ಕಣಿವೆಯ ವಿಷಯದಲ್ಲಿ ನಮಗೂ ನಿಮ್ಮಷ್ಟೇ ಕಾಳಜಿ ಇದೆ ಎಂದು ಹೇಳುತ್ತೇನೆ. ಇವತ್ತು ಹಲವಾರು ಬಾರಿ, ಕೇಂದ್ರಕ್ಕೆ ಎಲ್ಲಾ ಸರ್ವಪಕ್ಷ ನಿಯೋಗವನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಯಾವುದೇ ರೀತಿಯ ಅನುಕೂಲಗಳು ಯಾವುದೇ ಒಂದು ಸರ್ಕಾರದಲ್ಲಿ ಆಗಲಿಲ್ಲವೆನ್ನುವುದನ್ನು ಹಿಂದಿನ ನಿದರ್ಶನಗಳನ್ನು ನಾವು ನೋಡಿದ್ದೇವೆ. ಈ ಸಂದರ್ಭದಲ್ಲಿ ನಾನು ಮನವಿ ಮಾಡುತ್ತೇನೆ. ಏಕೆಂದರೆ ಈ ಸಮ್ಮಿಶ್ರ ಸರ್ಕಾರ ಬಂದ ನಂತರ ಇವತ್ತು ಕಳಸಾ ಬಂಡೂರಿ ನಾಲೆಯ ವಿಷಯದಲ್ಲಿ ಆ ಭಾಗದ ಜನ ಕೆಲಸವಾಗಲಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ಆ ಕಳಸಾ–ಬಂಡೂರಿ ನಾಲೆಯ ಕಾರ್ಯಕ್ರಮ 20 ಕೋಟಿ ರೂ.ಗಳ ವೆಚ್ಚದಲ್ಲಿ ಒಂದು ಎಸ್ಟಿಮೇಟ್ ಆಯಿತು, ಅದರೆ ಅದು ಈಗ 70 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಅದೇ ರೀತಿ ಇವತ್ತು ಕಾರಂಜಾ ಪ್ರಾಜೆಕ್ಟ್‌ಗೆ 8 ಕೋಟಿ ರೂ.ಗಳಿಂದ ಇಂದು 350 ಕೋಟಿ ರೂ.ಗಳ ಹಣದ ವೆಚ್ಚವನ್ನು ಮಾಡಿದರು. ಇವತ್ತು ಅಲ್ಲಿ ಒಂದು ಎಕರೆಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಪ್ರಾಮಾಣಿಕವಾಗಿ ಈ ಒಂದು ಸರ್ಕಾರದಿಂದ ಇವತ್ತು ಈ ಸದನದಿಂದ ಈ ನಮ್ಮ ಜನರಿಗೆ ನೀರಾವರಿ ವಿಷಯದಲ್ಲಿ ನಮಗೆ ಅನ್ಯಾಯವಾಗುತ್ತಿದೆ ಎನ್ನುವ ಒಂದು ಕೂಗು ಏನಿದೆ, ಆ ಕೂಗನ್ನು ಸರಿಪಡಿಸಲಿಕ್ಕೆ ಸರಿಯಾದ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಹಿರಿಯ ಸದಸ್ಯರು, ಇವತ್ತು ಮಾನ್ಯ ರಾಮಸ್ವಾಮಿಯವರ ವಿಷಯದಲ್ಲಿ ಕಾವೇರಿ ನೀರಿನ ವಿಷಯದಲ್ಲಿ ಆಗುತ್ತಿರುವ ಅನ್ಯಾಯದಲ್ಲಿ ರಾಜೀನಾಮೆಯನ್ನು ಕೊಡಬೇಕೆಂದು ಅವರು ಹೇಳಿದರು. ರಾಮಸ್ವಾಮಿಯವರು ರಾಜೀನಾಮೆ ಕೊಡುವುದರಿಂದ ಕಾವೇರಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುವುದಾದರೆ ನಾನು ನಾಳೆ ಬೆಳಿಗ್ಗೆ ಅವರಿಂದ ರಾಜೀನಾಮೆ ಕೊಡಿಸಲಿಕ್ಕೆ ಸಿದ್ಧನಿದ್ದೇನೆ. ರಾಮಸ್ವಾಮಿಯವರ ರಾಜೀನಾಮೆಯ ಬಗ್ಗೆ ಈ ಒಂದು ಸವಾಲನ್ನು ಎದುರಿಸಲಿಕ್ಕೆ ಸಿದ್ಧನಿದ್ದೇನೆ. ಇವತ್ತು ಕಾವೇರಿ ಸಮಸ್ಯೆ ಬಗೆಹರಿಯುವುದಾದರೆ ನಾಳೆ ಬೆಳಿಗ್ಗೆ ಆ ಕೆಲಸವನ್ನು ಮಾಡಲಿಕ್ಕೆ ನಮ್ಮ ಪಕ್ಷದ ವತಿಯಿಂದ ನಾವು ತೀರ್ಮಾನ ಮಾಡಲಿಕ್ಕೆ ಸಿದ್ಧವಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನೀರಾವರಿ ವಿಷಯದಲ್ಲಿ ಈ ಒಂದು ರಾಜ್ಯದಲ್ಲಿ ಮಾತನಾಡುವುದು ನಮ್ಮ ಜವಾಬ್ದಾರಿ ಇದೆ. ಯಾರೇ ಮುಖ್ಯಮಂತ್ರಿಯಾಗಲಿ, ಯಾರೇ ಮಂತ್ರಿಗಳಾಗಿರಲಿ, ಇವತ್ತು ಆ

ಕೆಲಸವನ್ನು ಮಾಡಬೇಕಾದರೆ, ರಾಜ್ಯದ ಜನ ನಮಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು, ಇವತ್ತು ಕೆಲಸವನ್ನು ಮಾಡಬೇಕಾದ ಸಂದರ್ಭದಲ್ಲಿ ಈ ರಾಜ್ಯದ 5 ಕೋಟಿ ಜನಸಂಖ್ಯೆಗೆ ನಾವು ನ್ಯಾಯವನ್ನು ಕೊಡಬೇಕಾಗುತ್ತದೆ. ಇವತ್ತು ಯಾವೊಬ್ಬ ಮುಖ್ಯಮಂತ್ರಿ ಇರಲಿ, ಯಾರೋ ಒಬ್ಬ ನೀರಾವರಿ ಮಂತ್ರಿಯಾಗಿರಲಿ ಆ ಕೆಲಸವನ್ನು ಮಾಡಬೇಕಾದ ಜವಾಬ್ದಾರಿ ಏನಿದೆ, ಆ ಜವಾಬ್ದಾರಿಯನ್ನು ನಿರ್ವಹಿಸಲು ಯಾರೂ ಕೆಲಸವನ್ನು ಮಾಡಿಲ್ಲವೆನ್ನುವ ಸರ್ಟಿಫಿಕೇಟ್ ಪಡೆಯಬೇಕಾದ ಅವಶ್ಯಕತೆ ಇವತ್ತು ಇಲ್ಲವೆನ್ನುವ ಭಾವನೆ ಈ ಸಂದರ್ಭದಲ್ಲಿ ನನ್ನದಾಗಿದೆ. ಏಕೆಂದರೆ ಮಾನ್ಯ ದೇವೇಗೌಡರ ಬಗ್ಗೆ ಹಲವಾರು ಸದಸ್ಯರುಗಳು ಅವರ ವಿಷಯದಲ್ಲಿ ಪ್ರಸ್ತಾಪವನ್ನು ಮಾಡಿದರು. ಇವತ್ತು ಮಾನ್ಯ ದೇವೇಗೌಡರಿಗೆ, ಎಲ್ಲಾ ರೀತಿಯ ಒಂದು ಸರ್ಟಿಫಿಕೇಟ್‌ನ್ನು ಕೊಟ್ಟಿರತಕ್ಕಂಥದ್ದನ್ನು ನಾವು ನೋಡಿರುತ್ತೇವೆ. ಮಾನ್ಯ ದೇವೇಗೌಡರು 1985 ರಿಂದ 1989 ನೇ ಇಸ್ವಿಯವರೆಗೆ ನೀರಾವರಿ ಸಚಿವರಾಗಿದ್ದಾಗ ನೀರಾವರಿ ಸಲುವಾಗಿ 300 ಕೋಟಿ ರೂ.ಗಳನ್ನು ಇಡಬೇಕೆಂದು ಆಗ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒತ್ತಡವನ್ನು ತಂದರು. ಮಾನ್ಯ ದೇವೇಗೌಡರು ರಾಜಕೀಯಕ್ಕೋಸ್ಕರವಾಗಿ ಈ ಒಂದು ಕೆಲಸ ಮಾಡುತ್ತಿದ್ದಾರೆಂದು ಆ ಸಮಯದಲ್ಲಿ ಏನು ಆಪಾದನೆ ಮಾಡಿದಿರಿ. 1994ನೇ ಇಸ್ವಿಯಲ್ಲಿ ಅವರು ಮುಖ್ಯಮಂತ್ರಿಯಾದಾಗ ಪ್ರಥಮವಾಗಿ ಒಂದು ನಿರ್ಧಾರವನ್ನು ತೆಗೆದುಕೊಂಡರು. ಕೃಷ್ಣಾ ಕಣಿವೆಯ ಸಲುವಾಗಿ 1000 ಕೋಟಿ ರೂ.ಗಳನ್ನು ಅದರ ಕಾಮಗಾರಿಗಾಗಿ ಸರ್ಕಾರದಿಂದ ವೆಚ್ಚ ಮಾಡಬೇಕೆಂದು ಏನೊಂದು ತೀರ್ಮಾನವನ್ನು ತೆಗೆದುಕೊಂಡರು, ಅದಕ್ಕೆ ಶಹಬಾಸ್‌ಗಿರಿ ಕೊಡಿ ಎಂದು ಇವತ್ತು ಈ ಸದನದಲ್ಲಿ ನಿಮ್ಮ ಮುಂದೆ ನಾನು ಮನವಿಯನ್ನು ಮಾಡುತ್ತಿಲ್ಲ. ಮಾನ್ಯ ನಮ್ಮ ಹಿರಿಯ ಸದಸ್ಯರಾದ ಮಾನ್ಯ ವೈಜನಾಥ್ ಪಾಟೀಲ್‌ರವರು ಇಲ್ಲಿಯೇ ಕುಳಿತಿದ್ದಾರೆ. ಮಾನ್ಯ ದೇವೇಗೌಡರು ತೆಗೆದುಕೊಂಡಂಥ ಕೃಷ್ಣಾ ಕಣಿವೆಯ ಹಲವಾರು ಕಾಮಗಾರಿ ವಿಷಯದಲ್ಲಿ ವೇಗವಾಗಿ ಕೆಲಸವಾಗಬೇಕೆಂದು ಒಂದು ತೀರ್ಮಾನವನ್ನು ಮಾಡಿದರು. ಆ ಒಂದು ತೀರ್ಮಾನದಲ್ಲಿ ಅವರ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿ ಈ ಒಂದು ಸದನದಲ್ಲಿ ಅವರು ಈ ಒಂದು ಸದನದಿಂದ ಮಾನ್ಯ ಪ್ರಧಾನ ಮಂತ್ರಿಗಳಾಗಿ ಹೋದ ನಂತರ, ಈ ಸದನದಲ್ಲಿ ಹಲವಾರು ಬಾರಿ ಮಾನ್ಯ ದೇವೇಗೌಡರ ಬಗ್ಗೆ ಹಲವಾರು ಏನು ಚರ್ಚೆಗಳಾಗಿವೆ.. ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಐ ಆಮ್ ಆನ್ ದಿ ಪಾಯಿಂಟ್ ಆಫ್ ಆರ್ಡರ್.

ಶ್ರೀ ಕೆ.ಅನ್ನದಾನಿ : ಮಾನ್ಯ ಮಾಧುಸ್ವಾಮಿಯವರೆ, ಒಂದು ನಿಮಿಷ ಇರಿ. ದಯಮಾಡಿ ತಾವು ಮಧ್ಯೆ ಏಕೆ ಎದ್ದು ನಿಲ್ಲುತ್ತೀರಿ, ಅವರು ಒಂದೆರಡು ನಿಮಿಷ ಹೇಳಲಿ. ದಯಮಾಡಿ ತಾವು ಕುಳಿತುಕೊಳ್ಳಿ ಸ್ವಾಮಿ, ಸ್ವಲ್ಪ ಚರ್ಚೆ ನಡೆಯಲಿ. ನೀವು ಪದೇ ಪದೇ ಏಕೆ ಮಧ್ಯದಲ್ಲಿ ಏಳುತ್ತೀರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಏಕೆ ನೀವು ನನಗೆ ಮಾತನಾಡಲು ಅವಕಾಶವನ್ನು ಕೊಡುತ್ತಿಲ್ಲ? ನೀವು ನನಗೆ ಕೆಲವು ವಿಷಯಗಳನ್ನು ಹೇಳಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನಾನು ಯಾರ ಬಗ್ಗೆ ಏನೂ ದೂರುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿರುವುದರಿಂದ ಏನು ಎಂದು ಕೇಳಿ. ಇದರಲ್ಲಿ ಮಾನ್ಯ ವೈಜನಾಥ್ ಪಾಟೀಲರವರು ಮಾತನಾಡಿದ್ದು ಮತ್ತೊಂದು ಏನೂ ಅಲ್ಲ. ಎಸ್ಟಿಮೇಟ್ ಕಮಿಟಿ ಶಿಫಾರಸ್ಸುಗಳನ್ನು ನಾವು ಈ ಸಭೆಗೆ ಮಂಡಿಸಿದ್ದೇವೆ. ನಾವು ಅದರಲ್ಲಿ ಹೇಳಿದ್ದೇವೆ, ಅದನ್ನು ಹೇಳುವುದಕ್ಕೆ ನಾನು ಎದ್ದು ನಿಂತಿದ್ದೆ. ಅಂದಾಜುಗಳ ಸಮಿತಿ ನೀಡಿರತಕ್ಕಂಥ ವರದಿಯಲ್ಲಿ ಮಾನ್ಯ ದೇವೇಗೌಡರ ಹೆಸರನ್ನು ಎಲ್ಲಿಯೂ ಕೂಡ ಬಳಸಿಲ್ಲ. ಆದರೆ, ಅವರ ಹೆಸರನ್ನು ಆಗಾಗ ಏತಕ್ಕೆ ತೆಗೆದುಕೊಂಡು ಬರುತ್ತಿದ್ದೀರೆಂಬುದು ನಮಗೆ ಅರ್ಥವಾಗುತ್ತಿಲ್ಲ. ನಾನೂ ಕೂಡ ಆ ಕಮಿಟಿಯ ಸದಸ್ಯನಾಗಿದ್ದರಿಂದ ಈ ವಿಷಯನ್ನು ನಾನು ಇಲ್ಲಿ ಹೇಳಬೇಕಾಗಿದೆ. ಕಮಿಟಿಯಲ್ಲಿ ನಮಗೆ ಏನು ಸತ್ಯ ಎಂದು ತಿಳಿದಿದೆಯೋ ಅದನ್ನು ನಾವು ಮಾಡಿದ್ದೇವೆ. ಮಿಕ್ಕದ್ದು ಸರ್ಕಾರಕ್ಕೆ ಬಿಟ್ಟಿದೆ. ಆದ್ದರಿಂದ, ಈ ಒಂದು ಪ್ರಸ್ತಾಪವನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಒಂದು ಕಮಿಟಿ ಮಾಡಿರತಕ್ಕಂಥ ಶಿಫಾರಸನ್ನು ಇಲ್ಲಿ ಒಪ್ಪಿದ ಮೇಲೆ ಮತ್ತೆ ಇಲ್ಲಿ ನಿಂತುಕೊಂಡು ಟೀಕೆ ಮಾಡತಕ್ಕಂಥದ್ದು ತಪ್ಪೆಂದು ನಾನು ಪಾಯಿಂಟ್ ಆಫ್ ಆರ್ಡ್‌ರನ್ನು ತಂದಿದ್ದೇನೆ. It is a committee Report. It is not Vaijanath Patil Report.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಮಿತಿ ಕೊಡತಕ್ಕಂಥ ರಿಪೋರ್ಟ್‌ಗಳ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದೇವಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವೇ ಇಲ್ಲಿ ಆ ವಿಷಯದ ಬಗ್ಗೆ ಚರ್ಚೆ ಮಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಸದನದಲ್ಲಿ ಚರ್ಚೆ ಮಾಡಿದ ಮೇಲೆ ಮತ್ತೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಹೇಳುವುದು ಸ್ವಲ್ಪ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆ ಕಮಿಟಿ ಮಾಡಿರತಕ್ಕಂಥ ಶಿಫಾರಸ್ಸು ತಪ್ಪು ಎನ್ನುವುದಾದರೆ ಮತ್ತೆ ಅದನ್ನು ಚರ್ಚೆಗೆ ಇಟ್ಟು ನಮಗೆ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಮತ್ತು ಅಂದಾಜುಗಳ ಸಮಿತಿ, ಸಾರ್ವಜನಿಕ ಉದ್ದಿಮೆಗಳ ಸಮಿತಿ ಅಥವಾ ಯಾವುದೇ ಕಮಿಟಿ ನೀಡತಕ್ಕಂಥ ವರದಿಯನ್ನು ಅನೇಕ ಸಾರಿ ಇಲ್ಲಿ ರೆಫರ್ ಮಾಡಿದ್ದೇವೆ ಮತ್ತೆ ಅದರ ಬಗ್ಗೆ ಚರ್ಚೆ ಕೂಡ ಮಾಡಿದ್ದೇವೆ. ಆದ್ದರಿಂದ, ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಆ ಕಮಿಟಿಯ ಅಧ್ಯಕ್ಷರಾಗಿ ಕೆಲಸ ಮಾಡಿರತಕ್ಕಂಥ ಸನ್ಮಾನ್ಯ ವೈಜನಾಥ ಪಾಟೀಲ್‌ರವರು ಇದನ್ನು ದುರುದ್ದೇಶಪೂರ್ವಕವಾಗಿ ಮಾಡಿದ್ದಾರೆ ಎನ್ನತಕ್ಕಂಥ ಭಾವನೆಯಲ್ಲಿ ಆಗುತ್ತಿರುವುದು ತಪ್ಪೆಂದು ಹೇಳುತ್ತಿದ್ದೆನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಮಿಟಿ ರಿಪೋರ್ಟ್‌ನ್ನು ಈ ಸದನದಲ್ಲಿ ಚರ್ಚೆ ಮಾಡಬಹುದೆಂಬುದು ನಮಗೆಲ್ಲಾ ಗೊತ್ತಿರತಕ್ಕಂಥ ವಿಷಯ. ಈಗಾಗಲೇ ಅನೇಕ ಕಮಿಟಿ ರಿಪೋರ್ಟ್‌ನ್ನು ಚರ್ಚೆ ಮಾಡಿದ್ದೇವೆ. ಅವರೊಂದು ಪಾಸಿಂಗ್ ರೆಫರೆನ್ಸ್ ಕೊಟ್ಟಿದ್ದಾರಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಪಾಸಿಂಗ್ ರೆಫರೆನ್ಸ್‌ನಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅದೇನೆಂದರೆ ಆ ಕಮಿಟಿಯವರು ದೇವೇಗೌಡರನ್ನು ತೇಜೋವಧೆ ಮಾಡಿದ್ದಾರೆಂದು ಅವರು ಹೇಳಿದ್ದಾರೆ. ಆದರೆ, ನಾವು ಮಾಡಿಲ್ಲವೆಂದು ಸ್ಪಷ್ಟವಾಗಿ ಈ ಸಭೆಗೆ ಹೇಳಬೇಕಲ್ಲವೇ ಅವರು ಈ ರೀತಿಯಾಗಿ ಹೇಳಿದ್ದಾರೆ, ಬೇಕಾದರೆ ಕಡತ ತೆಗೆಸಿ ನೋಡಿ. ಸರ್ಕಾರ ಮಾಡಿರತಕ್ಕಂಥದರಲ್ಲಿ ಹೆಚ್ಚು ಕಡಿಮೆಯಾಗಿದೆ ಎಂದು ವರದಿಯಲ್ಲಿ ಹೇಳಿದೆಯೇ ಹೊರತು ಮಾನ್ಯ ದೇವೇಗೌಡರ ಹೆಸರನ್ನು ಕಮಿಟಿ ನೀಡಿರತಕ್ಕಂಥ ವರದಿಯಲ್ಲಿ ಎಲ್ಲಿಯೂ ರೆಫರ್ ಮಾಡಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಪತ್ರಿಕೆಗಳಲ್ಲಿ ಹಲವಾರು ರೀತಿಯಲ್ಲಿ ಏನು ಬಿಂಬಿಸಿದ್ದಾರೆಯೋ ಅದಕ್ಕೆ ಸಂಬಂಧಪಟ್ಟಂತೆ ಕೆಲವೊಂದು ವಿಷಯಗಳನ್ನು ನಾನು ಇಲ್ಲಿ ಹೇಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ದೇವೇಗೌಡರ ಹೆಸರನ್ನು ಆ ವರದಿಯಲ್ಲಿ ನಾವು ಎಲ್ಲಿಯೂ ಕೂಡ ಮೆನ್‌ಷನ್‌ಮಾಡಿಲ್ಲ. ಮೊದಲು ಇದ್ದಂಥ ಸರ್ಕಾರದ ಅವಧಿಯಲ್ಲಿ ಅನೇಕ ಕೆಲಸಗಳು ಆಗಿರತಕ್ಕದ್ದಂಥರ ಬಗ್ಗೆ ಹೇಳಿದ್ದೇವೆ. ಆದರೆ, ಇವೆಲ್ಲವನ್ನೂ ಬಿಟ್ಟು ದೇವೇಗೌಡರ ಹೆಸರು ಇದೆ ಎನ್ನತಕ್ಕಂಥ ತಪ್ಪು ಕಲ್ಪನೆ ಇಟ್ಟುಕೊಳ್ಳತಕ್ಕಂಥದ್ದು ಬೇಡ. ರಿಪೋರ್ಟ್‌ನ್ನು ಸರಿಯಾಗಿ ಓದಿದರೆ ಗೊತ್ತಾಗುತ್ತದೆ. ಆದರೆ ರಿಪೋರ್ಟ್‌ನ್ನು ಓದಲಾರದೆ ಇದೇ ವಿಷಯವನ್ನು ಪ್ರತಿಪಾದಿಸತಕ್ಕಂಥದ್ದು ಸರಿಯಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದೇ ವಿಷಯಕ್ಕೆ ನಾನು ಬರುತ್ತಿದ್ದೇನೆ. ಆದ್ದರಿಂದ, ತಾವು ಇಲ್ಲಿಯೇ ಇರತಕ್ಕಂಥದ್ದು ಒಳ್ಳೆಯದು. ಮೊನ್ನೆದಿವಸ ಮಂತ್ರಿಮಂಡಲ ರಚನೆಯಾಗತಕ್ಕಂಥ ಸಂದರ್ಭದಲ್ಲಿ ಇವರೇ ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆ ಏನೆಂದರೆ, ಅಂದಾಜುಗಳ ಸಮಿತಿ ನೀಡಿರತಕ್ಕಂಥ ವರದಿಯಲ್ಲಿ ಅವರ ವಿರುದ್ಧವಾಗಿ ವರದಿ ಕೊಟ್ಟಿದ್ದರಿಂದ ನನ್ನನ್ನು ಮಂತ್ರಿಮಾಡಿಲ್ಲವೆಂದು ಅವರೇ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ತಾವು ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಬೇಕು. ನಾನು ಹೇಳಿದ ಮೇಲೆ ತಾವು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ದೇವೇಗೌಡರ ವಿರುದ್ಧ ವರದಿ ಕೊಟ್ಟಿದ್ದಾರೆಂದು ಅವರು ನನ್ನ ಹೆಸರನ್ನು ಪುನ: ಪುನ: ಪ್ರಸ್ತಾಪ ಮಾಡುತ್ತಿದ್ದರು. ಈ ರೀತಿಯಾಗಿ ವರದಿಯಲ್ಲಿ ನೀಡಿಲ್ಲವೆಂದು ಅದೇ ಸಭೆಯಲ್ಲಿ ನಾನು ಎದ್ದು ನಿಂತು ಹೇಳಿದ್ದೇನೆ. ಹಾಗೆಯೇ ಎಷ್ಟೋ ಸಲ ನಾನು ಪರ್ಸನಲ್ ಆಗಿ ಭೇಟಿ ಮಾಡಿ ಕೂಡ ಹೇಳಿದ್ದೇನೆ. ಆ ವರದಿಯಲ್ಲಿ ನಿಮ್ಮ ಹೆಸರು ಇಲ್ಲ ಮತ್ತು ನಿಮ್ಮ ವಿರುದ್ಧ ಕೂಡ ಇಲ್ಲವೆಂದು ಹಾಗೂ ಮೊದಲು ಇದ್ದಂಥ ಸರ್ಕಾರಕ್ಕೆ ಸಂಬಂಧಪಟ್ಟಿದೆ ಎಂದೂ ಸಹ ಹೇಳಿದ್ದೇನೆ. ಆದರೆ, ಅವರು ಅನೇಕಸಲ ಪುನ: ಪುನ: ಈ ಮಾತನ್ನು ಹೇಳಿಕೊಂಡು ಬಂದಿದ್ದಾರೆ. ಒಂದು ಸಾರಿ ನಮ್ಮ ಪಕ್ಷದ ಶಾಸಕಾಂಗದ ಸಭೆಯಲ್ಲಿಯೂ ಕೂಡ ಮಾನ್ಯ ವೈಜನಾಥ ಪಾಟೀಲರವರು ನನ್ನ ವಿರುದ್ಧ ವರದಿ ಕೊಟ್ಟಿದ್ದಾರೆಂದು ಸಹ

ಹೇಳಿದ್ದಾರೆ. ಅವರ ತಲೆಯಲ್ಲಿ ಅದು ಬಹುಶ: ಕೂತಿರಬಹುದು ನನ್ನ ಬಗ್ಗೆ ಎಂದು ನಾನು ಇಲ್ಲಿ ಒಂದು ಸಲ ಹೇಳಬೇಕಾಗಿ ಬಂತು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಏತಕ್ಕೆ, ಈ ವಿಷಯವನ್ನು ತಗೆದುಕೊಂಡು ಬಂದಿದ್ದೇನೆಂದರೆ, ನಮ್ಮ ಸನ್ಮಾನ್ಯ ಸದಸ್ಯರ್ಯಾರೂ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆ ಇಲ್ಲ. ನಿಮಗೆ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ನೆರವೇರಿಸಿದ್ದಾರೆಂಬ ಬಗ್ಗೆ ಅವರ ಮನಸ್ಸಿನಲ್ಲಿರತಕ್ಕಂಥ ಭಾವನೆಯನ್ನು ಹೇಳಿದರು. ಈ ಒಂದು ಕಾರಣಕ್ಕೋಸ್ಕರ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ ಇಲ್ಲದಿದ್ದರೆ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿರಲಿಲ್ಲ. ಕೃಷ್ಣಾ ಕಣಿವೆ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಡುವುದರ ಜೊತೆಗೆ ಮತ್ತು ಅವರಿಂದ ನಮಗೆ ಎಷ್ಟು ಪ್ರಮಾಣದಲ್ಲಿ ನ್ಯಾಯ ಸಿಗುತ್ತದೆ ಎನ್ನತಕ್ಕಂಥದ್ದನ್ನು ನಾವು ಹಿಂದಿನ ಹಲವು ನಿದರ್ಶನಗಳಲ್ಲಿ ನೋಡಿದ್ದೇವೆ. ಇವತ್ತಿನ ದಿವಸ ನಮ್ಮಲ್ಲಿರುವ ಕಾಮಗಾರಿಗಳನ್ನು ಸಂಪೂರ್ಣಗೊಳಿಸುವುದಕ್ಕೆ ಯಾವರೀತಿಯಾದ ಕಾರ್ಯಕ್ರಮಗಳನ್ನು ನಿರೂಪಿಸ ಬೇಕಾಗುತ್ತದೆಂದರೆ, ಡಿಸೆಂಬರ್ 2005 ರೊಳಗೆ ಯುದ್ಧೋಪಾದಿಯಲ್ಲಿ ಎಲ್ಲಾ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ಕಾರ್ಯಕ್ರಮಗಳನ್ನು ನಿರೂಪಿಸುವುದರ ಮುಖಾಂತರ ಇವತ್ತಿನ ದಿವಸ ನಮ್ಮ ಪಾಲಿಗೆ ಬರಬೇಕಾಗಿರತಕ್ಕಂಥ 150 ಟಿ.ಎಂ.ಸಿ. ನೀರನ್ನು ನಮ್ಮ ರೈತರಿಗೆ ಕೊಡತಕ್ಕಂಥ ಜವಾಬ್ದಾರಿ ಸದನಕ್ಕೆ ಏನಿದೆ, ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದರ ಮುಖಾಂತರ ಈ ಒಂದು ಗೊಂದಲಗಳಿಗೆಲ್ಲಾ ಒಂದು ಅಂತಿಮ ತೆರೆ ಎಳೆಯಬೇಕೆಂದು ಈ ಸದನದಲ್ಲಿ ತಮಗೆಲ್ಲಾ ಮನವಿ ಮಾಡುತ್ತಾ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಮಹಿಮಾ ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ನನಗೂ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಸರ್ಕಾರದಿಂದ ಉತ್ತರ.......

ಶ್ರೀ ಜೆ. ಮಹಿಮಾ ಪಟೇಲ್(ಚೆನ್ನಗಿರಿ) : ಮಾನ್ಯ ಉಪಾಧ್ಯಕ್ಷರೆ, ನೀರಿಗಾಗಿ ಮೂರನೇ ಮಹಾಯುದ್ಧವಾಗುತ್ತದೆಂದು ನಾನು ಹಿಂದೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದೆ. ಈಗಾಗಲೇ ಮೂರನೇ ಮಹಾಯುದ್ಧ ಪ್ರಾರಂಭವಾಗಿದೆ. ಹಿಂದೆ ಯುದ್ಧ ಮಾಡತಕ್ಕಂಥ ಸಂದರ್ಭದಲ್ಲಿ ಕತ್ತಿ ಬಾಣ ಹಿಡಿದುಕೊಂಡು ಹೊಡೆದಾಡುತ್ತಿದ್ದರು. ಆನಂತರದ ದಿವಸಗಳಲ್ಲಿ ಗುಂಡು ಮದ್ದು ಉಪಯೋಗ ಮಾಡುತ್ತಿದ್ದರು. ಆದರೆ, ಇವತ್ತಿನ ರಾಜಕೀಯದ ಹೊಡೆದಾಟ ಯಾವ ರೀತಿಯಾಗಿದೆ ಎಂದರೆ, ಸಂಖ್ಯಾಧಾರಿತ ರಾಜಕೀಯವಾಗಿರುವುದರಿಂದ ಸಂಖ್ಯೆಗಳ ಮೇಲೆ ಹೊಡೆದಾಟ ಮಾಡತಕ್ಕಂಥದ್ದು ಇದ್ದೇ ಇರುತ್ತದೆ. ಆಂಧ್ರಪ್ರದೇಶದವರು ಬಹಳಷ್ಟು ಟೆಕ್ನಿಕಲ್ ಆಗಿ ಮತ್ತು ನ್ಯಾಯಾಲಯದ ಮೂಲಕ ಹೋರಾಟ ಮಾಡುತ್ತಿದ್ದಾರೆ. ಹಾಗೆಯೇ, ಕೇಂದ್ರ ಸರ್ಕಾರದ ಮೇಲೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಒತ್ತಡವನ್ನು ತಂದು ತಮ್ಮ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ. ಮತ್ತೆ ಅವರಿಗೆ ಹೆಚ್ಚಿನ ಬಲ ಏಕೆ ಇದೆ ಎಂದರೆ, ಅವರಲ್ಲಿ ಹೆಚ್ಚು ಜನ ಎಂ.ಪಿ. ಗಳಿದ್ದು, ಅವರೆಲ್ಲಾ ಒಂದು ಕಡೆ ನಿಂತುಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದ ಸಂಸದರು ಈ ರೀತಿಯಾದ ಕೆಲಸವನ್ನು ಮಾಡದೇ ಇರುವುದರಿಂದ ಕೇಂದ್ರದ ಮೇಲೆ ಹೆಚ್ಚು ಒತ್ತಡ ಹಾಕತಕ್ಕಂಥ ಕೆಲಸ ಆಗುತ್ತಿಲ್ಲ. ಇವತ್ತಿನ ದಿವಸ ಆಂಧ್ರಪ್ರದೇಶದ ವಿರುದ್ಧ ನಮ್ಮ ಹೋರಾಟ ಎಂದು ಹೇಳುವ ಬದಲು ನ್ಯಾಯದ ಪರವಾಗಿ ನಮ್ಮ ಹೋರಾಟ ಎಂದು ಹೇಳಿಕೊಂಡು ಹೋಗುವುದು ಉತ್ತಮ. ನಾವು ಇವತ್ತಿನ ದಿವಸ ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ವಿರುದ್ಧ ಹೋಗುವುದು ಬೇಡ. ನಾವು ನ್ಯಾಯದ ಪರವಾಗಿ ಹೋಗಬೇಕಾಗಿದೆ. ಆದ್ದರಿಂದ, ನಾವೆಲ್ಲಾ ನ್ಯಾಯದ ಪರವಾದ ಹೋರಾಟ ಮಾಡೋಣ. ಸರ್ಕಾರದ ವತಿಯಿಂದ ರಾಜ್ಯದ ಸಂಪೂರ್ಣ ಬಂದ್ ಆಚರಿಸೋಣವೆಂದು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದರು. ಈ ರೀತಿಯಾಗಿ ಬಂದ್ ಆಚರಿಸತಕ್ಕಂಥದ್ದು ನಿಜವಾಗಿಯೂ ಕೂಡ ನನಗೆ ಇಷ್ಟವಿಲ್ಲ. ಏಕೆಂದರೆ, ಇದು ಯಾವುದೊಂದು ಹಿಂಸೆಗೆ ಅವಕಾಶ ಮಾಡಿಕೊಡತಕ್ಕಂಥ ಸಾಧ್ಯತೆ ಇರುತ್ತದೆ. ಈ ರೀತಿಯಾದ ಬಂದ್ ಹಿಂದೆ ಒಂದು ಸಲ ಆದಂಥ ಸಂದರ್ಭದಲ್ಲಿ ಬಹಳಷ್ಟು ಹಿಂಸೆ ಆಗಿತ್ತು. ಈ ರೀತಿಯಾದ

ಬಂದ್ ಆಚರಿಸುವುದರ ಬದಲು ಸರ್ವ ಪಕ್ಷದ ನಿಯೋಗವನ್ನು ಕರೆದುಕೊಂಡು ಹೋಗಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆದರೆ, ಸರ್ವ ಪಕ್ಷದ ನಿಯೋಗಕ್ಕಿಂತ ಸರ್ವ ಸದಸ್ಯರ ನಿಯೋಗ ಕರೆದುಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಸದನದ ಬಾವಿಯ ಸುತ್ತಮುತ್ತ ಇರತಕ್ಕಂಥ ಸದಸ್ಯರು ಮತ್ತು ಮಂತ್ರಿಗಳು ಇಲ್ಲಿಂದ ವಿಮಾನದ ಮೂಲಕ ದೆಹಲಿಗೆ ಹೋಗಿ ಅಲ್ಲಿದ್ದು ಬರುವುದಕ್ಕೆ ಎಷ್ಟು ಖರ್ಚಾಗುತ್ತದೆಯೋ ಅಷ್ಟೇ ಹಣಕ್ಕೆ ಎಲ್ಲಾ ಸದಸ್ಯರು ಟ್ರೈನ್‌ನಲ್ಲಿ ದೆಹಲಿಗೆ ಹೋಗುವುದಕ್ಕೆ ಅಷ್ಟೇ ಹಣ ಖರ್ಚಾಗುತ್ತದೆ. ಎಲ್ಲಾ ಸದಸ್ಯರು ದೆಹಲಿಗೆ ಹೋಗಿ ಮಾನ್ಯ ಪ್ರಧಾನಮಂತ್ರಿಗಳ ಮುಂದೆ ನಮ್ಮ ಬೇಡಿಕೆಯನ್ನು ಇಡೋಣ. ಒಂದು ವೇಳೆ ಅವರು ಇದಕ್ಕೆ ಒಪ್ಪದಿದ್ದರೆ, ಅಹಿಂಸೆ ಮೂಲಕ ನಾವು ಭಾರತಕ್ಕೆ ಯಾವ ರೀತಿಯಾಗಿ ಸ್ವಾತಂತ್ರ್ಯವನ್ನು ತಂದೆವೋ ಅದೇ ರೀತಿಯಲ್ಲಿ ನಾವೆಲ್ಲರೂ ಮಾನ್ಯ ಪ್ರಧಾನ ಮಂತ್ರಿಗಳ ನಿವಾಸದಮುಂದೆ ಅಥವಾ ಪಾರ್ಲಿಮೆಂಟ್ ಮುಂದೆ ಉಪವಾಸ ಕುಳಿತುಕೊಂಡು ನಮ್ಮ ಪ್ರತಿಭಟನೆಯನ್ನು ಅಹಿಂಸೆಯ ಮೂಲಕ ವ್ಯಕ್ತಪಡಿಸುವುದರ ಮೂಲಕ ನಮ್ಮ ಹಕ್ಕನ್ನು ಪಡೆಯೋಣ ಎಂದು ಹೇಳುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರಗಳು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಸಾರಿಗೆ ಮತ್ತು ಜಲಸಂಪನ್ಮೂಲ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ನೆನ್ನೆ ದಿವಸ ದೀರ್ಘವಾದಂಥ ಉತ್ತರವನ್ನು ಇಲ್ಲಿ ಕೊಟ್ಟಿದ್ದೇನೆ. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಶ್ರೀ ಯಡಿಯೂರಪ್ಪನವರು ಮತ್ತು ಮಾನ್ಯ ಗೋವಿಂದ ಕಾರಜೋಳರವರು ಹಾಗೂ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮತ್ತು ಮಾನ್ಯ ರಾಜೇಂದ್ರನ್‌ರವರು ಮತ್ತು ಇನ್ನು ಅನೇಕ ಮಾನ್ಯ ಸದಸ್ಯರು ನೆನ್ನೆ ದಿವಸ ಮಾತನಾಡಿದ್ದರೂ ಕೂಡ ಸಾಕಷ್ಟು ಇವತ್ತು ಸಹ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ನಿಲುವು ಸ್ಪಷ್ಟವಾಗಿದೆ ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಮತ್ತೆ ನಮ್ಮ ಕಡೆ ಇರತಕ್ಕಂಥ ಅನೇಕ ಮಾನ್ಯ ಸದಸ್ಯರುಗಳೂ ಕೂಡ ವಿಷಯಗಳನ್ನು ಸದನದ ಮುಂದೆ ಇಟ್ಟಿದ್ದಾರೆ. ನಾವು ಈಗಾಗಲೇ ಹೇಳಿರುವಂತೆ ನಮ್ಮ ಭಾಗದ ಅಲೋಕೇಶನ್ ಇರತಕ್ಕಂಥ ಸುಮಾರು 734 ಟಿ.ಎಂ.ಸಿ. ನೀರಿನಲ್ಲಿ 5 ಟಿ.ಎಂ.ಸಿ. ನೀರನ್ನು ನಾವು ತಮಿಳುನಾಡಿಗೆ ಕುಡಿಯುವುದಕ್ಕೆ ಕೊಟ್ಟಿದ್ದೇವೆ. ಉಳಿದಂಥ 729 ಟಿ.ಎಂ.ಸಿ. ನೀರನ್ನು ನಾವು

ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಈಗಾಗಲೇ ಅನೇಕ ಕಟ್ಟಡಗಳನ್ನು ಮತ್ತು ಅನೇಕ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿದ್ದೇವೆ. ಮತ್ತೆ ಕೆಲವು ಕೆಲಸಗಳೂ ಕೂಡ ಈಗಾಗಲೇ ಪ್ರಗತಿಯ ಹಂತದಲ್ಲಿವೆ. ಮತ್ತೆ ಇದರಲ್ಲಿ ಕೆಲಸವು ಕೆಲಸಗಳು ಈಗಾಗಲೇ ಮುಗಿದು ಹೋಗಿವೆ. ಮತ್ತೆ ಕೆಲಸವು ಕೆಲಸಗಳು ಮುಗಿಯತಕ್ಕಂಥ ಹಂತದಲ್ಲಿಯೂ ಕೂಡ ಇವೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಈ ಒಂದು ಅವಧಿಯಲ್ಲಿ ಆಂಧ್ರಪ್ರದೇಶದವರು ನಮ್ಮ ಭಾಗದ ನೀರನ್ನು ಕಬಳಿಸತಕ್ಕಂಥ ಪ್ರಯತ್ನವನ್ನು ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಮಾಡುತ್ತಿದ್ದಾರೆ. ಅದರ ಬಗ್ಗೆ ಕೂಡ, ಅಂದರೆ, ಅದನ್ನು ನಿಲ್ಲಿಸತಕ್ಕಂಥ ಸಾಕಷ್ಟು ಪ್ರಯತ್ನಗಳನ್ನು ನಾವೂ ಕೂಡ ಮಾಡಿದ್ದೇವೆ. ಶ್ರೀಮಾನ್ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗಲೂ ಕೂಡ ಮಾಡಿತ್ತು. ಮತ್ತು ಸರ್ವ ಪಕ್ಷದ ನಿಯೋಗವನ್ನೂ ಕೂಡ ತೆಗೆದುಕೊಂಡು ಹೋಗಿ, ಅಂದಿನ ಉಪ ಪ್ರಧಾನಿಯವರಿಗೂ ಹಾಗೂ ಅಂದಿನ ಅಧ್ಯಕ್ಷರಿಗೂ ಕೂಡ ಭೇಟಿಯಾಗಿ ಮೆಮೋರ್ಯಾಂಡಮ್ ಕೂಡ ಕೊಟ್ಟಿದ್ದೇವೆ. ಆಗ ಮಾನ್ಯ ಅನಂತ ಕುಮಾರ್‌ರವರೂ ಕೂಡ ಕೇಂದ್ರದ ಸಚಿವರಾಗಿದ್ದರು. ನಾವು ಯಾವ ಮೆಮೋರ್ಯಾಂಡಮ್ ಕೊಟ್ಟಿದ್ದೇವೆ, ಹಾಗೂ ನಾವು ಈ ಸುಮಾರು 10 ಯೋಜನೆಗಳು ಇಲ್ಲೀಗಲ್ ಇವೆ, ಈ 10 ಯೋಜನೆಗಳನ್ನೂ ಕೂಡ ಕೇಂದ್ರ ಸರ್ಕಾರದ ಸೆಂಟ್ರಲ್ ವಾಟರ್ ಕಮಿಷನ್‌ನಿಂದ ಒಪ್ಪಿಗೆ ಇಲ್ಲದೇ ಅವರು ಮಾಡುತ್ತಿದ್ದಾರೆ. ಅದಕ್ಕಾಗಿ ಅದನ್ನು ನಿಲ್ಲಿಸಬೇಕೆಂದು ನಾವು ಒಂದು ಸಲ ಅಲ್ಲ ಪದೇ ಪದೇ ಹೇಳಿದ್ದೇವೆ. ಇದರ ಬಗ್ಗೆ ಪ್ರತಿ ತಿಂಗಳಿನಲ್ಲಿ ಯಾವ್ಯಾವ ತಾರೀಖು, ಏನೇನು ಮಾಡಿದ್ದೇವೆ ಎಂಬ ಎಲ್ಲಾ ವಿವರಗಳನ್ನು ನಾನು ಈಗಾಗಲೇ ಹೇಳಿದ್ದೇನೆ. ಆ ಕಾಲದಲ್ಲಿ ನಾವು ಮೆಮೋರ್ಯಾಂಡಮ್ ಕೊಟ್ಟರೂ ಅದಕ್ಕೆ ಯಾರೂ ಸ್ಪಂದಿಸಲಿಲ್ಲ. ನಂತರ ನಮ್ಮ ಸಮ್ಮಿಶ್ರ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ, ಮಾನ್ಯ ಮುಖ್ಯಮಂತ್ರಿಗಳೇ ಸುಮಾರು 3-4 ಪತ್ರಗಳನ್ನು ಬರೆದಿದ್ದಾರೆ. ಆ ಪತ್ರದಿಂದ ಏನಾಯಿತು ಎಂದು ಕೇಳಿದಿರಿ. ಪ್ರಜಾಪ್ರಭುತ್ವದಲ್ಲಿ ಮನವಿಕೊಡುತ್ತೇವೆ, ನಿಯೋಗ ಹೋಗುತ್ತೇವೆ, ಕೋರ್ಟಿಗೆ ಹೋಗುತ್ತೇವೆ, ಟ್ರಿಬ್ಯೂನಲ್‌ಗೆ ಹೋಗುತ್ತೇವೆ, ಇದು ಎಲ್ಲಾ ಕಾನೂನು ಚೌಕಟ್ಟಿನಲ್ಲಿ, ಸಂವಿಧಾನದ ಚೌಕಟ್ಟಿನಲ್ಲಿ, ಏನು ಪ್ರಯತ್ನ ಮಾಡಬೇಕು, ಆ ಪ್ರಯತ್ನ ಎಲ್ಲವನ್ನೂ ಕೂಡ ಸರ್ಕಾರ ಮಾಡುತ್ತಿದೆ. ಎಲ್ಲಿಯವರೆಗೆ ಎಂದರೆ, ಮೊನ್ನೆ ನಾನು ಹೇಳಿದೆ, 15ನೇ ಮಾರ್ಚ್, ದಾಸ್ ಮುನ್ಷಿಯವರು ನಮಗೇನು ಉತ್ತರ ಕೊಟ್ಟಿದ್ದರು ಅದನ್ನೂ ಕೂಡ ನಾನು ಈ ಸದನದಲ್ಲಿ ಓದಿಹೇಳಿದ್ದೇನೆ. ಅವರು ಏಳನೇ ಮಾರ್ಚಿಗೆ ಬರದಂಥ ಪತ್ರ, 14

ನೇ ಮಾರ್ಚಿಗೆ ಬರದಂಥ ಪತ್ರ, ಮತ್ತು ಫೆಬ್ರುವರಿ ತಿಂಗಳಿನಲ್ಲಿ ಮಾನ್ಯ ಮನಮೋಹನ್ ಸಿಂಗ್‌ಜಿರವರು ಇಲ್ಲಿಗೆ ಬಂದಾಗ ನಾವು ಭೇಟಿಯಾಗಿ ಮೆಮೋರ್ಯಾಂಡಮ್‌ನ್ನು ಸಲ್ಲಿಸಿದ್ದು ಅದರೊಳಗೆ ಕೂಡ ಇಲ್ಲೀಗಲ್ ಪ್ರಾಜೆಕ್ಟ್ ಅವರು ಯಾವರೀತಿಯಲ್ಲಿ ತೆಗೆದುಕೊಳ್ಳುತ್ತಿದ್ದಾರೆ, ಮಹಾರಾಷ್ಟ್ರ ಸರ್ಕಾರ ಕೂಡ ಇವತ್ತು ಯಾವ ರೀತಿಯಾಗಿ ಇಲ್ಲೀಗಲ್ ಪ್ರಾಜೆಕ್ಟ್‌ನ್ನು ಕಟ್ಟುತ್ತಿದೆ, ಇದರ ಬಗ್ಗೆ ಎಲ್ಲಾ ಮಾಹಿತಿ ಕೊಟ್ಟು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮನವರಿಕೆ ಮಾಡುವ ಪ್ರಯತ್ನ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಮಾಡಿದರು, ನಾನೂ ಕೂಡ ಮಾಡಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಸದಸ್ಯರೂ ಕೂಡ ಆ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಹೀಗಿದ್ದರೂ ಸರ್ಕಾರ ಏನೂ ಪ್ರಯತ್ನ ಮಾಡಿಲ್ಲ, ಅವರು ಟೆಂಡರ್ ಕರೆದರು ಅದರ ಬಗ್ಗೆ ನೀವು ಏನು ಕ್ರಮ ಜರುಗಿಸುತ್ತೀರಿ ಎಂದು ಕೇಳಿದಿರಿ. ನಾವು ಇಡೀ ಪ್ರಾಜೆಕ್ಟ್‌ಗಳಿಗೆ ಅಪೋಸ್ ಮಾಡಿದ್ದೇವೆ, ಆ ಪ್ರಾಜೆಕ್ಟ್‌ಗಳನ್ನು ವಿಂಗಡಿಸಿ ಅವರು ಕಾಲುವೆಗಳು, ಉಪ ಕಾಲುವೆಗಳು, ಲೈನಿಂಗ್‌ಗಳು. ಇದರ ಬಗ್ಗೆ ಟೆಂಡರ್‌ನ್ನು ಸವಿಸ್ತಾರವಾಗಿ ಕರೆದಿದ್ದಾರೆ. ಹಿಂದಕ್ಕೆ ನಾವೇನು 10ಕ್ಕೆ ಅಪೋಸ್ ಮಾಡಿಕೊಂಡು ಬಂದಿದ್ದೆವು, ಮೊನ್ನೆವರೆವಿಗೂ ನಾವು ಏನು ಇದರ ಬಗ್ಗೆ ಪತ್ರ ಬರೆದಿದ್ದೇವೆ, ಅದಕ್ಕೆ ಎಲ್ಲಾ ಕೂಡ ಆ 10 ಪ್ರಾಜೆಕ್ಟಿನಲ್ಲಿರುವ ಯೋಜನೆಗಳು. ಅದಲ್ಲದೇ ಗೋದಾವರಿಯ ಬಗ್ಗೆ ಏನು ಇದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಈ ಗೋದಾವರಿ ಡೈವರ್ಷನ್‌ನಿಂದ ನಮಗೆ ಏನು 23 ಟಿಎಂಸಿ ನೀರು ಸಿಗುತ್ತದೆ. ಅದರ ಬಗ್ಗೆಯಂತೂ ಅದನ್ನು ಮಾಡಬೇಕೆನ್ನುವ ಒತ್ತಾಯ ರಾಜ್ಯ ಸರ್ಕಾರದ್ದು ಇತ್ತು. ಹೀಗಿರುವಾಗ ನಮಗೆ ಕೆಲವುದರಿಂದ ಏನು ತೊಂದರೆ ಇದೆ ಅದರ ಬಗ್ಗೆ ಸ್ಪಷ್ಟವಾದ ನಿಲುವು ತೆಗೆದುಕೊಂಡು ಈಗಾಗಲೇ ಪ್ರತಿಭಟನೆ ಮಾಡಿದ್ದೇವೆ ಮತ್ತು ಇನ್ನು ಮುಂದೆಯೂ ಕೂಡ ಮಾಡುತ್ತೇವೆ ಎನ್ನತಕ್ಕಂಥಾದ್ದೂ ಕೂಡ ಸ್ಪಷ್ಟಪಡಿಸಿದ್ದೇವೆ. ಅದರ ಜೊತೆಯಲ್ಲಿ ಇದನ್ನು ಯಾವ ರೀತಿಯಲ್ಲಿ ನಿಲ್ಲಿಸಬೇಕು ಎನ್ನುವುದರ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. 15 ದಿವಸಗಳ ಹಿಂದೆಯೇ ಮಾನ್ಯ ಕಾನೂನು ಸಚಿವರಿಗೆ ಕಳುಹಿಸಿದ್ದೇವೆ, ಟ್ರಿಬ್ಯೂನಲ್‌ನಲ್ಲಿ ನಮ್ಮ ನಿಲುವನ್ನು ಹೇಗೆ ತೆಗೆದುಕೊಳ್ಳಬೇಕು ಅಥವಾ ಸುಪ್ರೀಂಕೋರ್ಟ್‌ನಲ್ಲಿ ಕಾನೂನಿನ ಪ್ರಕಾರ ಏನು ಮಾಡಬೇಕು, ನಮ್ಮ ನಾರಿಮನ್ ಅವರ ಸಲಹೆಯನ್ನು ಪಡೆದುಕೊಂಡು ಇದನ್ನು ಮುಂದುವರಿಸಬೇಕೆಂಬುದರ ಬಗ್ಗೆ ಈಗಾಗಲೇ ಚಿಂತನೆಯನ್ನು ನಡೆಸಿದ್ದೇವೆ. ಇದಲ್ಲದೆ ತಾವು ಸಲಹೆಗಳನ್ನು ಇದೇಸದನದಲ್ಲಿ ಕೊಟ್ಟಿದ್ದಿರಿ, ಮಾನ್ಯ

ವಾಟಾಳ್ ನಾಗರಾಜ್‌ರವರು, ತಾವು ಮಾನ್ಯ ಯಡಿಯೂರಪ್ಪನವರು ಹಾಗೂ ಅನೇಕ ವಿರೋಧ ಪಕ್ಷದಲ್ಲಿರುವ ಮುಖಂಡರು ಕೊಟ್ಟರು. ಏನು ಎಂದರೆ, ಪ್ರಧಾನ ಮಂತ್ರಿಗಳ ಬಳಿಗೆ ಇಲ್ಲಿಂದ ಸರ್ವಪಕ್ಷ ನಿಯೋಗವನ್ನು ತೆಗೆದುಕೊಂಡು ಹೋಗಬೇಕೆನ್ನುವ ಸಲಹೆಯನ್ನು ಕೊಟ್ಟಿರಿ. ಎರಡನೇಯದಾಗಿ, ಈ ಸದನದಲ್ಲಿ ಒಂದು ನಿರ್ಣಯವನ್ನು ಪಾಸ್ ಮಾಡಿ ಅದಕ್ಕೆ ಬೆಂಬಲ ನೀಡತಕ್ಕಂಥ ರೀತಿಯಲ್ಲಿ ಮಾಡಬೇಕೆನ್ನುವ ಸಲಹೆಯನ್ನು ಕೊಟ್ಟಿರಿ. ಅದಕ್ಕೆ ನಾವು ಈಗಾಗಲೇ ಹೇಳಿದ್ದೇವೆ. ಮೊದಲನೆಯ ಹೆಜ್ಜೆಯಾಗಿ ನಾವು ಎಲ್ಲಾ ಸರ್ವಪಕ್ಷದ ನಿಯೋಗವನ್ನು ಕರೆದುಕೊಂಡು ಹೋಗುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಸದನದಲ್ಲಿ ಹೇಳಿದ್ದಾರೆ. ಎಲ್ಲರೂ ಕೂಡಿಕೊಂಡು ಒಂದು ಸಾರಿ ಮನವರಿಕೆ ಮಾಡಿಕೊಟ್ಟು ನಂತರ ಅದರದ್ದು ಏನು ಪರಿಣಾಮ ಆಗಿಲ್ಲವೆಂದರೆ, ಮುಂದೆ ಏನು ಮಾಡಬೇಕು, ಏನು ಹೆಜ್ಜೆ ಇಡಬೇಕು, ಎಂಬುದರ ಬಗ್ಗೆ ತಮ್ಮ ಜೊತೆ ಮಾತನಾಡಿ, ನಾವು ಮುಂದಿನ ಕ್ರಮ ಜರುಗಿಸುತ್ತೇವೆ ಎನ್ನುವ ಮಾತನ್ನೂ ಕೂಡ ಹೇಳಿದ್ದೇವೆ. ಇದು ಇಲ್ಲಿಗೇ ಮುಗಿಯಿತು, ಮುಂದಿನ ಹೆಜ್ಜೆ ಬಗ್ಗೆ ಏನು ಮಾಡುವುದೇ ಇಲ್ಲವೆಂದು ನಾವೇನೂ ಹೇಳಿಲ್ಲ. ಓಪನ್ ಮೈಂಡ್ ಇಟ್ಟುಕೊಂಡು ಮುಂದೆ ಏನು ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡುತ್ತೇವೆ, ನೀವು ನಾವು ಕೂಡಿಯೇ ಚಿಂತನೆ ಮಾಡಬೇಕು ಎಂಬುದನ್ನೂ ಕೂಡ ಹೇಳಿದ್ದೇವೆ. ಇದರಲ್ಲಿ ರಾಜಕೀಯ ಬೆಳೆಸುವುದಕ್ಕೆ ಯಾರಂತೂ ಹೋಗೇ ಇಲ್ಲ. ನಾನಂತೂ ಏನು ಫ್ಯಾಕ್ಟ್ಸ್ ಇತ್ತು ಅದರ ಬಗ್ಗೆ ಮಾತನಾಡುತ್ತೇನೇ ವಿನಹ: ಹಿಂದೆ ಯಾರ್‍ಯಾರ ಕಾಲದಲ್ಲಿ ಏನಾಯಿತು, ಯಾರ್‍ಯಾರು ಏನು ಮಾಡಿದರು, ಎಂದು ಹೇಳಿಲ್ಲ, ಕೆಲವು ಜನರು ಹೆಚ್ಚಿಗೆ ಮಾಡಿರಬಹುದು, ಕೆಲವು ಜನ ಕಡಿವೆ ಮಾಡಿರಬಹುದು. ಅನೇಕ ಸಾರಿ ರೀಸೋರ್ಸ್ಸ್ ನೋಡಿ ಕೊಂಡು ಮಾಡುತ್ತಾರೆ. ಈಗ 46 ಸಾವಿರ ಕೋಟಿ ರೂಪಾಯಿ ಯೋಜನೆಗೆ ಆಂಧ್ರಪ್ರದೇಶದವರು ಒಂದು ಶಾಟ್‌ಲೈನ್ ಹಾಕಿದ್ದಾರೆ. ಅದರಲ್ಲಿ 21 ಪ್ಯಾಕೇಜ್‌ಮಾಡಿ ಅದರಲ್ಲಿ 4 ಸಾವಿರ ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ. ಸಾಲ ಪಡೆದುಕೊಂಡು ಇನ್ನು ಕೆಲವು ಯೋಜನೆಗಳನ್ನು ಮಾಡುವವರು ಇದ್ದಾರೆಂಬುದೂ ಕೂಡ ನನಗೆ ಮಾಹಿತಿ ಇದೆ. ಆದರೆ, ನಮ್ಮ ಇತಿಮಿತಿಯಲ್ಲಿ ನಾವು ಕೆಲಸ ಮಾಡುತ್ತೇವೆ, ಅವರ ಇತಿಮಿತಿಯಲ್ಲಿ ಅವರು ಕೆಲಸ ಮಾಡುತ್ತಾರೆ. ಆದರೆ ನಮ್ಮ ಹಿತಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಹಾಗೂ ನಮ್ಮ ಹಿತವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕು, ನಾವು ಯಾವ ರೀತಿ ಹೆಜ್ಜೆ

ಹಾಕಬೇಕು, ಅದನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಅದಕ್ಕೂ ಕೂಡ ನಾವು ಈ ಸಾರಿ ಹಣವನ್ನು ಸಂಗ್ರಹಣೆ ಮಾಡಿಕೊಂಡಿದ್ದೇವೆ, ಇನ್ನೂ ಹೆಚ್ಚಿಗೆ ಹಣ ಬೇಕಾದರೂ ಕೂಡ ತೆಗೆದುಕೊಂಡು, ಯಾವುದಾದರೊಂದು ರೂಪದಲ್ಲಿ ತೆಗೆದುಕೊಂಡು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುತ್ತೇವೆಂದು ಒಂದು ಸಲ ಅಲ್ಲ ಅನೇಕ ಸಾರಿ ನಮ್ಮ ಹಿಂದಿನ ಸರ್ಕಾರ, ಅದರ ಹಿಂದಿನ ಸರ್ಕಾರ, ಇವತ್ತಿನ ಸರ್ಕಾರ ಕೂಡ ಇದೇ ಮಾತನ್ನು ಹೇಳಿಕೊಂಡು ಬಂದಿದ್ದೇವೆ. ಕೆಲಸ ಕೂಡ ಆಗಿದೆ, ಕೆಲಸ ಆಗುವುದು ಇನ್ನೂ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಏನೂ ಮಾಡಿಲ್ಲ ಎನ್ನುವ ಮೆಸೇಜನ್ನು ನಾವು ಜನರಿಗೆ ಕೊಟ್ಟರೆ ಅದು ಎಷ್ಟರಮಟ್ಟಿಗೆ ಸಮಂಜಸವಾಗುತ್ತದೆ. ಆಂಧ್ರಪ್ರದೇಶದವರು ಏನು ಕಬಳಿಕೆ ಮಾಡುತ್ತಿದ್ದಾರೆ ಇದರ ಬಗ್ಗೆ ನಾವು ಒಗ್ಗಾಟ್ಟಾಗಿ ಇರೋಣ. ನಾವು ಮೆಮೊರ್ಯಾಂಡಮ್‌ಗಳನ್ನು ಕೊಟ್ಟಾಗ ಅನೇಕಸಾರಿ ಅದರ ಬಗ್ಗೆ ಚಿಂತೆಯೇ ಮಾಡಿಲ್ಲ, ಆದರೂ ಈಗ ಸಡನ್ ಆಗಿ ಈ ಸಮ್ಮಿಶ್ರ ಸರ್ಕಾರ ಏನೂ ಮಾಡುತ್ತಿಲ್ಲ ಕುಂಬಕರ್ಣನ ಹಾಗೆ ನಿದ್ದೆ ಮಾಡುತ್ತಿದೆ ಎಂದು ಹೇಳುತ್ತೀರಿ. ಅಂದರೆ ನಾನೂ ಕೂಡ ಕೇಳಬಹುದಲ್ಲವೇ? 2003 ರಲ್ಲಿ ನಾವೇನು ಎನ್‌ಡಿಎ ಸರ್ಕಾರ ಇದ್ದಾಗ ಮೆಮೊರ್ಯಾಂಡಮ್ ಕೊಟ್ಟಿದ್ದೇವೆ ಅದರ ಮೇಲೆ ಏಕೆ ಕ್ರಮ ಜರುಗಿಸಲಿಲ್ಲ ಅದರೊಳಗೆ ಸ್ಪಷ್ಟವಾಗಿ 10 ಯೋಜನೆಗಳು, ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳೇನು ಇವತ್ತು ತೆಗೆದುಕೊಳ್ಳುತ್ತಿದ್ದಾರೆ, ಇಲ್ಲೀಗ ಆಗಿರುವುದನ್ನು ತಾವು ನಿಲ್ಲಿಸಿ ಎಂದು ಭೇಟಿಯಾಗಿ ಹೇಳಿದ್ದೇವೆ. ಅದರಲ್ಲಿ ನಿಮ್ಮ ಎಲ್ಲಾ ವಿರೋಧ ಪಕ್ಷದ ನಾಯಕರಿಂದ ಹಿಡಿದುಕೊಂಡು ಸುಮಾರು 20 ರಿಂದ 30 ಜನರ ಸಹಿ ಮಾಡಿ ಕೊಟ್ಟಿದ್ದೇವೆ. ಫಿಜಿಕಲಿ ಪ್ರೆಸೆಂಟ್ ಆಗಿ ಕೊಟ್ಟಿದ್ದೇವೆ. ಅದನ್ನು ನಾನು ಹೇಳುವುದಕ್ಕೆ ಬರುತ್ತದೆಯೇ? ಅನಂತ್ ಕುಮಾರ್‌ರವರು ಕೆಲಸ ಮಾಡಲಿಲ್ಲ, ಅದಕ್ಕೆ ಇದನ್ನು ಮಾಡಬೇಕಾಗಿತ್ತು ಎನ್ನಬಹುದೇ? ಇಲ್ಲ ಹಾಗೆ ನಾನು ಹೇಳುವುದಕ್ಕೆ ಹೋಗುವುದೇ ಇಲ್ಲ, ಯಾರು ಮಾಡಲಿ, ಬಿಡಲಿ, ಅದು ಅವರ ಇಚ್ಛೆ, ಅವರ ಕಮಿಟ್‌ಮೆಂಟ್.

ಶ್ರೀ ಅರಗ ಜ್ಞಾನೇಂದ್ರ : ಟೆಂಡರ್ ಆಗಿದ್ದು 6 ತಿಂಗಳ ಹಿಂದೆ, ಅನಂತ್ ಕುಮಾರ್‌ರವರು ಅಧಿಕಾರದಲ್ಲಿ ಇದ್ದಾಗ ಅಲ್ಲ. ಎನ್‌ಡಿಎ ಸರ್ಕಾರ ಇದ್ದಾಗ ಟೆಂಡರ್ ಆಗಿಲ್ಲ, ಅದು ಆಗಿರುವುದು ಇತ್ತೀಚೆಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 24-6-2003 ರಲ್ಲಿ ಯಾರು ಇದ್ದರು? ಯಾವ ಸರ್ಕಾರ ಇತ್ತು? ಇಲ್ಲಿ ಹಾಕಿರುವ ಎಲ್ಲರ ಸಹಿ ತೋರಿಸಲೇ? ನೀವು

ನಾವು ಎಲ್ಲರೂ ಕೂಡಿಕೊಂಡು ಸಹಿ ಮಾಡಿರುವುದು, ನಂದೂ ಮೂರನೇ ಸಹಿ ಇದೆ. ಇದನ್ನು ಎಲ್ಲರೂ ಕೂಡಿಕೊಂಡು ಮಾಡಿದೆವು, ಇದಕ್ಕೆ ಏನಾದರೂ ಬೆಲೆ ಸಿಕ್ಕೀತೇ? ಅದಕ್ಕೇ ನಾನು ಹೇಳಿದ್ದು. ಮೊನ್ನೆ ಫೆಬ್ರವರಿಯಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನೀವು ನಾವು ಹೋಗಿ ಮನವಿ ಕೊಟ್ಟಿದ್ದೇವೆ, ಅದು ಕೂಡ ಅಲ್ಲಿಗೆ ಕುಳಿತಿದೆ. ಹೀಗೆಂದಾಕ್ಷಣ ನಾವು ಈ ಸರ್ಕಾರ ನಮಗೆ ಸಂಪೂರ್ಣ ಬೆಂಬಲ ಕೊಟ್ಟಿದೆ, ಆ ಸರ್ಕಾರ ನಮಗೇನೂ ಮಾಡಿಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರ್ಕಾರ ಯಾವ ದೃಷ್ಟಿಯಿಂದ ಏನೋ ಇವತ್ತು ನಮ್ಮ ಯೋಜನೆಗಳಿಗಾಗಲಿ ಅಥವಾ ನಾವು ಏನು ಎತ್ತಿರತಕ್ಕಂಥ ಅನೇಕ ಸಮಸ್ಯೆ ಇವೆ, ಆ ಸಮಸ್ಯೆಗೆ ಸರಿಯಾಗಿ ಸ್ಪಂದಿಸಿಲ್ಲವೆಂದು ನಾವು ಹೇಳಿಕೊಂಡೇ ಬಂದಿದ್ದೇವೆ. ನಾವು ಯಾರಿಗೂ ಕೂಡ ಸ್ಪೇರ್ ಮಾಡಿಲ್ಲ, ಈ ಸರ್ಕಾರಕ್ಕೂ ಕೂಡ ಹೇಳಿದ್ದೇವೆ, ಹಿಂದಿನ ಸರ್ಕಾರಕ್ಕೂ ಕೂಡ ಹೇಳಿದ್ದೇವೆ, ಯಾವುದೋ ಒಂದು ಕಾರಣಕ್ಕಾಗಿ ಅವರು ಹೇಳಿದ್ದಾರಲ್ಲಾ ರಾವ್, ಆಗ ಕೆ.ಎಲ್. ರಾವ್ ಅವರು ಸೆಂಟ್ರಲ್‌ನಲ್ಲಿ ಮಿನಿಸ್ಟರ್ ಆಗಿದ್ದರು, ಅವರೂ ಕೂಡ ಹೆಚ್ಚು ಕಡಿಮೆ ನಮ್ಮ ಕರ್ನಾಟಕದಿಂದ ಆರಿಸಿ ಅಲ್ಲಿಗೆ ಹೋಗಿದ್ದರು. ಅವರು ಪವರ್ ಮಿನಿಸ್ಟರ್ ಆಗಿ ಅವರು ಅನ್ಯಾಯ ಮಾಡಿದರು, ಅದು ಆದ ಮೇಲೆ ಹಾಗೆಯೇ ಕಂಟಿನ್ಯೂ ಆಗಿ ಸ್ವಲ್ಪ ಮಟ್ಟದಲ್ಲಿ ಆಯಿತು, ಆದರೆ ನಾವು ಇವತ್ತು ಹೇಗೆ ನಮ್ಮ ನೀರನ್ನು ಉಳಿಸಿಕೊಳ್ಳಬೇಕು, ನಾವೆಲ್ಲರೂ ಕೂಡ ಅದರ ಬಗ್ಗೆ ಏನು ಚಿಂತನೆಯನ್ನು ಮಾಡಬೇಕು ಅದರ ಬಗ್ಗೆ ಯೋಚನೆ ಮಾಡಿ ನಾವು ಹೋಗುವುದು ಬಹಳ ಮುಖ್ಯ. ಅದಕ್ಕೆ ತಾವು ಸಹಕರಿಸುತ್ತೀರೆಂಬುದು ನನ್ನ ಭಾವನೆ. ಬರೀ ಕೇವಲ ಒಂದು ರೆಸಲ್ಯೂಷನ್‌ನಿಂದ ಎಲ್ಲಾ ಕೆಲಸಗಳು ಆಗುತ್ತದೆಂದರೆ ಇವತ್ತೇ ಬೇಕಾದರೆ ಮಾಡೋಣ. ಈ ಹಿಂದೆ ನಾವು ಮಾಡಲಿಲ್ಲವೇ? ಕಾವೇರಿಯ ಬಗ್ಗೆ ಒಂದು ರೆಸಲ್ಯೂಷನ್ ಮಾಡಿದ್ದೇವೆ, ಒಂದು ಸಲವಲ್ಲ ಎರಡು ಸಲ ಮಾಡಿದ್ದೇವೆ, ಒಂದು ಹನಿ ನೀರು ಕೂಡ ಬಿಡುವುದಿಲ್ಲವೆಂದು ಕೂಡ ಮಾಡಿದ್ದೇವೆ. ವಾಟಾಳ್ ನಾಗರಾಜರವರೇ ಎಷ್ಟು ಸಾರಿ ಬಿಟ್ಟಿದ್ದೇವೆ, ತಾವು ಪ್ರತಿ ಸಲ ನೀರು ಬಿಟ್ಟಾಗಲೆಲ್ಲಾ ಕೂಡ ಪ್ರತಿಭಟನೆಯನ್ನು ಮಾಡಿದ್ದೀರಿ, ಆ ಮಾತು ಬೇರೆ, ಆಗ ರೆಸಲ್ಯೂಷನ್ ಕೂಡ ಆಯಿತೋ. ಮತ್ತು ಅದಕ್ಕೆ ಏನು ಬೆಲೆ ಉಳಿಯಿತು? ಅದಕ್ಕಾಗಿ ಇಲ್ಲಿ ಮಾಡಬಾರದು ಎಂಬ ಅಭಿಪ್ರಾಯ ಇಲ್ಲ ನನ್ನದು. ಸಂದರ್ಭವನ್ನು ನೋಡಿಕೊಂಡು ಮಾಡೋಣ. ಮೊದಲು ಡೆಲಿಗೇಷನ್ ಹೋಗೋಣ.

ಡೆಲಿಗೇಷನ್ ಹೋಗಿ, ಅದರ ಪರಿಣಾಮ ಏನಾಗುತ್ತದೆ, ನೀವು ಮತ್ತು ನಾವು ಹೋಗಿ ಅವರನ್ನು ಭೇಟಿಯಾದ ಮೇಲೆ ಅದರ ಪರಿಣಾಮ ಏನಾಗುತ್ತದೆಂಬುದನ್ನು ನೋಡಿಕೊಂಡು ಮುಂದೆ ಮತ್ತೇನು ಕಾರ್ಯಕ್ರಮವನ್ನು ಹಾಕಿಕೊಳ್ಳೋಣ ಏಕೆಂದರೆ ಇಂತಹ ವಿಷಯದಲ್ಲಿ ನಾವೆಲ್ಲರೂ ಸೇರಿಕೊಂಡು ನಿರ್ಣಯ ಮಾಡುವುದೇ ಹೊರತು ಇದು ಒಬ್ಬಿಬ್ಬರ ಕೈಯಿಂದ ಮಾಡುವುದಲ್ಲ, ಒಂದೇ ಪಕ್ಷದವರು ಒಂದೇ ಸರ್ಕಾರದವರು ಎಲ್ಲವನ್ನೂ ಮಾಡುವುದು ಅಲ್ಲ, ಇದರ ಬಗ್ಗೆ ಎಲ್ಲರ ಸಹಕಾರ ಕೂಡ ಬೇಕು. ಅಪೋಜಿಷನ್‌ನವರು ಕೂಡ ಬೇಕು, ಸರ್ವಪಕ್ಷದವರು ಕೂಡಬೇಕು, ಇದರ ಬಗ್ಗೆ ರೈತರು ಕೂಡ ಸಹಕರಿಸಬೇಕು, ಇದಕ್ಕಾಗಿ ಜನರೂ ಕೂಡ ಸಹಕರಿಸಬೇಕು. ನಾವು ಮತ್ತು ನೀವು ಸೇರಿಕೊಂಡು ರೆಸಲ್ಯೂಷನ್ ಮಾಡಿದರೆ ಜನರು ಸಹಕರಿಸದಿದ್ದರೆ ಜನರು ದಂಗೆ ಎದ್ದರೆ ಆಗ ಯಾವ ಸರ್ಕಾರ ಕೂಡ ಇರುವುದಿಲ್ಲ. ಇದರ ಬಗ್ಗೆ ನಾವೆಲ್ಲರೂ ಕೂಡ ಬಹಳ ಗಂಭೀರವಾಗಿ ಆಲೋಚನೆಯನ್ನೂ ಕೂಡ ಮಾಡಬೇಕಾಗುತ್ತದೆ. ಆ ರೀತಿಯಾಗಿ ಆಲೋಚನೆಯನ್ನು ಮಾಡಿಯೇ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈಗ ನಾವು ಸಧ್ಯಕ್ಕೆ ಡೆಲಿಗೇಷನ್ ಹೋಗೋಣ, ಡೆಲಿಗೇಷನ್ ಹೋದಮೇಲೆ ಅದರ ಬಗ್ಗೆ ಕೇಂದ್ರ ಸರ್ಕಾರ ಯಾವ ರೀತಿಯಾಗಿ ಸ್ಪಂದಿಸುತ್ತದೆ ಎಂಬುದನ್ನು ನೋಡಿಕೊಂಡು ಮುಂದಿನ ಕ್ರಮ ಜರುಗಿಸೋಣ. ನಾವೆಲ್ಲರೂ ಎಲ್ಲಾ ಪಕ್ಷದವರು ಸೇರಿಕೊಂಡು ಇದನ್ನು ಮಾಡೋಣ. ಅದಕ್ಕಾಗಿ ಮುಂದೆ ಅವರು ಯಾವ ರೀತಿಯಾಗಿ ಸ್ಪಂದಿಸುತ್ತಾರೆ ನೋಡಿಕೊಂಡು ಬೇಕಾದರೆ ಮುಂದಿನ ಹೆಜ್ಜೆಯನ್ನು ಇಡೋಣವೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶ: ಈಗಲಾದರೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರ ಸಿಟ್ಟು ಕಡಿಮೆ ಯಾಗಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಒಗ್ಗಟ್ಟಾಗಿ ಹೋಗುವಾಗ ಸಿಟ್ಟು ಇಟ್ಟುಕೊಂಡು ಹೋಗಬಾರದು, ಇದರ ಬಗ್ಗೆ ಯೂನಾನಿಮಸ್ ರೆಸಲ್ಯೂಷನ್ ಆಗಬೇಕು, ನಾವು ಮಾಡುವುದು, ನೀವು ಬೇಡ ಎನ್ನುವುದು ನೀವು ಬೇರೆ ತೆಗೆದುಕೊಳ್ಳಿ ಎನ್ನುವುದು ಈ ರೀತಿಯಾಗಿ ಮೆಸೇಜ್ ಹೋಗುವುದು ಬೇಡ. ಈ ವಿಷಯದಲ್ಲಿ ಎಲ್ಲರೂ ಒಂದಾಗಿದ್ದಾರೆ, ಒಂದಾಗಿ ಹೋರಾಟ ಮಾಡುತ್ತಿದ್ದಾರೆ ಎನ್ನತಕ್ಕಂಥ ಭಾವನೆ ಬರಲಿ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ತಾವೆಲ್ಲರೂ ದಯವಿಟ್ಟು ಈ ವಿಷಯದ ಬಗ್ಗೆ ಸಹಕರಿಸಬೇಕು. ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಾವು ಡೆಲಿಗೇಷನ್ ಹೋಗಿ ಅವರಿಗೆ

ಮನವರಿಕೆ ಮಾಡಿಕೊಡೋಣ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮುಂದೆ ನಾವು ಲೀಗಲ್ ಸ್ಟೆಪ್ಸ್ ಏನು ತೆಗೆದುಕೊಳ್ಳಬೇಕೆಂಬ ಬಗ್ಗೆ ಅದರ ಬಗ್ಗೆಯೂ ಕೂಡ ನಾವು ಚಿಂತನೆಯನ್ನು ಮಾಡೋಣ. ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ, ಅದಕ್ಕಾಗಿ ಈ ಎರಡೂ ಆಲ್ಟರ್‌ನೇಟಿವ್ ಪ್ರಪೋಜಲ್ ನಮ್ಮಲ್ಲಿ ಇದ್ದಾಗ ಮುಂದಿನ ವಿಷಯದ ಬಗ್ಗೆ ಪುನ: ಪ್ರಸ್ತಾಪ ಮಾಡದೆ ಇಷ್ಟು ಮಾತ್ರ ಅವರನ್ನೂ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಎಲ್ಲರೂ ಕೂಡ ಸಹಕರಿಸಬೇಕು, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಸರ್ಕಾರದ ಮನವೊಲಿಸಬೇಕು, ನಾವೆಲ್ಲರೂ ಒಟ್ಟಾಗಿದ್ದೇವೆ ಆ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಬೇಕು, ಕೃಷ್ಣಾಬೇಸಿನ್‌ನಲ್ಲಿರುವಂತಹ ರೈತರಿಗೆ ನಮ್ಮ ಬಗ್ಗೆ ವಿಶ್ವಾಸ ಬರಬೇಕು, ಈ ದೃಷ್ಟಿಯಿಂದ ನಾವು ನಿನ್ನೆಯಿಂದ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಬೇಕಾದರೆ ನಾಳೆ ಚರ್ಚೆ ಮಾಡೋಣ, ಸ್ಪೀಕರ್ ಕೊಠಡಿಯಲ್ಲಿ ಸೇರೋಣವೆಂದು ಏತಕ್ಕೆ ಸಲಹೆ ಕೊಟ್ಟೆ ಅಂದರೆ ನೀವು ಮತ್ತೆ ಕನ್ಸಲ್‌ಟೇಷನ್ ಮತ್ತು ಚರ್ಚೆಯನ್ನು ಮಾಡಿ ಆ ಸರ್ವಾನುಮತದ ನಿರ್ಣಯಕ್ಕೆ ನೀವು ಸಹಕಾರ ಕೊಡುತ್ತೀರೆಂದು ನಾನು ಭಾವಿಸಿದ್ದೆ. ಆ ಸರ್ವಾನುಮತದ ನಿರ್ಣಯವೇನು? ಈಗ ಇಲ್ಲೀಗಲ್ ಆಗಿ ಏನು ಪ್ರಾಜೆಕ್ಟ್‌ಗಳನ್ನು ಶುರುಮಾಡುವುದಕ್ಕೆ ಹೊರಟಿದ್ದಾರೆ, ತತಕ್ಷಣ ಕೇಂದ್ರ ಸರ್ಕಾರ ಅದನ್ನು ತಡೆಯಬೇಕು. ಇದನ್ನು ಬಿಟ್ಟು ಒಂದು ಶಬ್ದ ಬೇರೆ ಸೇರಿಸುವುದರ ಬಗ್ಗೆ ನಾವು ಹೇಳಲಿಲ್ಲ. ನೀವು ಹೇಳಿರುವ ಹಾಗೆ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಕಳೆದ ಅನೇಕ ವರ್ಷಗಳಿಂದ ಆಂಧ್ರದ ಕೈ ಬಲ ಎಲ್ಲಾ ಸಂದರ್ಭದಲ್ಲಿಯೂ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಪ್ರಾಜೆಕ್ಟ್‌ನ್ನು ಮುಂದುವರಿಸಿಕೊಂಡು 'ಎ' ಸ್ಕಿಂ ನೀರನ್ನು ಪೂರ್ಣ ಉಪಯೋಗಿಸಿಕೊಂಡು 'ಬಿ' ಸ್ಕಿಂಗೂ ಕೈಹಾಕಿ ನಮ್ಮನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸುವುದರಲ್ಲಿ ಪ್ರಯತ್ನ ಮಾಡುವುದರಲ್ಲಿ ಅವರು ಯಶಸ್ವಿಯಾಗುತ್ತಲೇ ಬರುತ್ತಿದ್ದಾರೆ. ಇವತ್ತು ಈ ಒಂದು ವಿಚಾರ ಗೊತ್ತಾದ ಮೇಲೆ ಸುಪ್ರಿಂಕೋರ್ಟಿಗೆ ಹೋಗುವಂತಹ ಪ್ರಯತ್ನವನ್ನು ನೀವು ಮಾಡಬಹುದಾಗಿತ್ತು ಅಥವಾ ನಮ್ಮನ್ನು 5–6 ತಿಂಗಳ ಹಿಂದೆಯೇ ಈ ಸುದ್ದಿ ಗೊತ್ತಾದ ತಕ್ಷಣ ಕನ್ಸಲ್ಟ್ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನೀವು ಮಾಡಬೇಕಾಗಿತ್ತು. ಅಥವಾ ಚೀಫ್ ಇಂಜಿನಿಯರ್ ಡಬ್ಲೂ ಆರ್ ಡಿ ಓ

ಪತ್ರಬರೆದಾಗ ಅಂದರೆ ಅದರ ಬಗ್ಗೆ ನಿಮಗೆ ಮಾಹಿತಿ ಗೊತ್ತಾದ ತಕ್ಷಣ ಪ್ರತಿಪಕ್ಷದ ನಾಯಕರ ಸಭೆಯನ್ನು ಕರೆದು ಏನು ಮಾಡಬೇಕೆಂಬುದರ ಬಗ್ಗೆ ಸಮಾಲೋಚನೆ ಮಾಡಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳೇ, ನನಗೆ ಏನು ಅನ್ನಿಸುತ್ತದೆಂದರೆ, ಯಾವುದೇ ಆಗಲಿ ಇವತ್ತು ಕೇಂದ್ರಸರ್ಕಾರ ಒಂದಲ್ಲ ಒಂದು ಕಾರಣಕ್ಕಾಗಿ ಆಂಧ್ರದ ಮೇಲೆ ಡಿಪೆಂಡ್ ಆಗಿರುವುದರಿಂದ ನೀವು ಮನಸ್ಸು ಮಾಡಿ ಈ ನಿರ್ಣಯವನ್ನು ಮಾಡಿದರೆ ಎಲ್ಲಿ ನಾಳೆ ನಮ್ಮ ಕುರ್ಚಿಗೆ ಧಕ್ಕೆಯಾಗುತ್ತದೆಂಬ ಭಯ ನಿಮ್ಮನ್ನು ಕಾಡಿಸುತ್ತಾ ಇರಬಹುದು. ಆದರೆ ಅವರು ಪ್ರಬಲರಾಗಿದ್ದಾರೆಂದು ನಾನು ಹೇಳುತ್ತಿದ್ದೇನೆ. ಅವರಿಗೆ ಎಂಪಿಗಳ ಸಂಖ್ಯೆ ಇದೆ, ಆದರೆ ಕರ್ನಾಟಕ ರಾಜ್ಯವು ನಿಮ್ಮ ಜೊತೆಗೆ ಇದೆಯಲ್ಲಾ, ಯಾವುದೇ ಒಂದು ಶಬ್ದ, ನಾವೆಲ್ಲರೂ ಎಂ.ಪಿ.ಗಳು, ಎಂ.ಎಲ್.ಎ.ಗಳು ಒಟ್ಟಾಗಿರಬೇಕು ಒಂದು ಚಕಾರ ವಿರುದ್ಧವಾದ ಒಂದು ಮಾತಿಲ್ಲವಲ್ಲಾ, ಹೀಗಿದ್ದರೂ ಕೂಡ ನಿರ್ಣಯ ಮಾಡಿದರೆ ನಾವು ರೆಡಿ ಇದ್ದೇವೆ. ಹಾಗಾದರೆ ನೀವು ಪತ್ರ ಬರೆದಿರಿ, ಅದು ಬರೆದ ಮೇಲೆ ಏನಾಯಿತು? ನಿಮಗೆ ರಿಪ್ಲೈ ಬರಲಿಲ್ಲ, ಸರ್ವಾನುಮತದ ನಿರ್ಣಯವನ್ನು ಮಾಡಿ ಪ್ರಧಾನಮಂತ್ರಿಯವರಿಗೂ ಕೂಡ ಒಂದು ಒತ್ತಡ ಬಂದರೆ ಅವರು ಹೈಕಮಾಂಡ್ ಮತ್ತೊಂದಕ್ಕೆ ಯಾವುದಕ್ಕೂ ಕೂಡ ಬಲಿಯಾಗದೆಯೇ ಆಂಧ್ರಕ್ಕೆ ಆ ಸೂಚನೆಯನ್ನು ಕೊಟ್ಟು ಕ್ರಮ ತೆಗೆದುಕೊಳ್ಳುತ್ತಾರೆಂಬ ಆಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇಷ್ಟಾದರೂ ಕೂಡ ತಾವು ಒಪ್ಪದೆ ಇರುವುದರಿಂದ ಎಲ್ಲೋ ಒಂದು ಕಡೆ ನಿಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ, ಕೇಂದ್ರಸರ್ಕಾರವನ್ನು ಮೈಮೇಲೆ ಹಾಕಿಕೊಳ್ಳುವುದಕ್ಕೆ ಇಷ್ಟ ಇಲ್ಲದಿರುವುದರಿಂದ ಈ ಕೆಲಸವನ್ನು ಮಾಡುತ್ತಿದ್ದೀರಿ. ಆದ್ದರಿಂದ ರಾಜ್ಯದ ರೈತರ ಸಂಪೂರ್ಣ ಕೃಷ್ಣಾ ಬೇಸಿನ್ ರೈತರ ಇಚ್ಛಾಶಕ್ತಿಗೆ, ಅವರ ಅಪೇಕ್ಷೆಗೆ ಪೂರೈಸುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ನಿಮ್ಮಲ್ಲಿ ಇಲ್ಲ ಎಂದು ನೋಡಿ ಪ್ರತಿಪಕ್ಷದವರು ಅನಿವಾರ್ಯವಾಗಿ ನಾವು ಧರಣಿ ಕುಳಿತುಕೊಳ್ಳುತ್ತೇವೆ ಸ್ವಾಮಿ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಇಲ್ಲಾ ಸದಸ್ಯರು ಧರಣಿ ಮಾಡಲು ಸದನದ ಬಾವಿಗೆ ಆಗಮಿಸಿದರು)

ಶ್ರೀ ವಾಟಾಳ್ ನಾಗರಾಜ್ : ಆಂಧ್ರಸರ್ಕಾರದ ವಿರುದ್ಧ ನಾನು ಸಭಾತ್ಯಾಗ ಮಾಡುತ್ತಿದ್ದೇವೆ. ಆಂಧ್ರಸರ್ಕಾರ ಕೈಗೊಂಡಿರುವ ಕಾರ್ಯಕ್ರಮದ ವಿರುದ್ಧ

ಆಂದ್ರಸರ್ಕಾರಕ್ಕೆ ದಿಕ್ಕಾರ, ಆಂದ್ರಸರ್ಕಾರಕ್ಕೆ ಧಿಕ್ಕಾರ, ಆಂದ್ರಸಕಾರಕ್ಕೆ ಧಿಕ್ಕಾರ, ಕರ್ನಾಟಕಕ್ಕೆ ಅನ್ಯಾಯ ಮಾಡಿರುವ ಆಂಧ್ರಸರ್ಕಾರಕ್ಕೆ ಧಿಕ್ಕಾರ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಆಂಧ್ರಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

11. ಪ್ರಕಟಣೆ

ಉಪಾಧ್ಯಕ್ಷರು : ಈಗ ಒಂದು ಪ್ರಕರಣ ಇದೆ, ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ 118 ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ: 1–4–2005ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ತಿದ್ದುಪಡಿ ವಿಧೇಯಕ, 2004.

2) ಕರ್ನಾಟಕ ಭೂಸುಧಾರಣೆ 2ನೇ ತಿದ್ದುಪಡಿ ವಿಧೇಯಕ, 2005.

3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ,2005.

ಈಗ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು 8 ಗಂಟೆ 7 ನಿಮಿಷಕ್ಕೆ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)